
ಜನಪದ ಕಥಾ ಕಣಜ

ಈರಬಡಪ್ಪ

(ಆತ್ಮಕಥನ)



ಮಲ್ಲಿಕಾರ್ಜುನ ಕಲಮರಹಳ್ಳಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸುವರ್ಣ ಕರ್ನಾಟಕ - ೨೦೦೬

ಜನಪದ ಕಥಾ ಕಣಜ

ಈರಬಡಪ್ಪ

(ಆತ್ಮಕಥನ)

ಮಲ್ಲಿಕಾರ್ಜುನ ಕಲಮರಹಳ್ಳಿ



ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೦೨

ದೂರವಾಣಿ : ೨೨೪೮ ೪೫೧೬

JANAPADA KATHA KANAJA EARABADAPPA
(Aatma Kathana) - Mallikarjuna Kalamara Halli

Published by
Ashoka N. Chalavadi
Administrative officer
Kannada Pustaka Pradhikara
Kannada Bhavana, J.C. Road
Bangaluru - 560 002.

Pages : xii + 52
Price : **Rs. 24/-**
First Print : 2007
Copies : 1000
ISBN No. : 81-7713-212-1

ಮೊದಲನೇ ಮುದ್ರಣ : ೨೦೦೭
ಪ್ರತಿಗಳು : ೧೦೦೦
ಪುಟಗಳು : ೧೨ + ೫೨
ಬೆಲೆ : **ರೂ. ೨೪/-**
ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - ೫೬೦ ೦೨೦

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು-೧೮
ದೂರವಾಣಿ : ೨೬೬೧ ೩೧೨೩, ೨೬೬೧ ೮೭೫೨

ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು – ಜನಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು–ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯ ಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಗಿಸಿಕೊಂಡ ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ; ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನಶಕ್ತಿ 2x2=4ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇಂದು ತಾಂತ್ರಿಕ ನೈಪುಣ್ಯತೆ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳು ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು

ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಡುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟಠಡಢಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಅರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದುಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂಡು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾರಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ಮುಖೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆ ಬೆಳೆಯಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ–

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸಂಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ, ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ

ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು, ಬದುಕನ್ನು ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಸಂಪನ್ನತೆಯಿಂದ ಹೊಳೆವ ಅಕ್ಷರಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು ; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿದಾವೃತ್ತಿಯಲ್ಲಿ ನೆಲೆ ನಿಲ್ಲುವುದಿಲ್ಲ, ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿಕವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರಿಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ಮರೆಯಲ್ಲಿರುವ ಮಹಾನುಭಾವರು ಎಂಬ ಹೊಸ ಮಾಲಿಕೆಯನ್ನು ಪ್ರಾರಂಭಿಸಿದೆ. ಅದರಲ್ಲಿ ನಾಡು-ನುಡಿಗೆ ಸೇವೆ ಸಲ್ಲಿಸಿ, ಎಲೆಮೆರೆಯ ಕಾಯಿಯಂತೆ ಜೀವನ ನಡೆಸಿರುವ ಮಹಾನುಭಾವರುಗಳ ವ್ಯಕ್ತಿಪರಿಚಯವನ್ನು ದಾಖಲಿಸುವ ಉದ್ದೇಶವನ್ನು ಹೊಂದಿದೆ. ಈ ಮಾಲಿಕೆಯಲ್ಲಿ ಯಾವ ಸುಪ್ರಸಿದ್ಧ ಶಿಷ್ಟ ಪರಂಪರೆಯ ಪ್ರಕಟಣೆಗಳೂ ಬರುವುದಿಲ್ಲ. ಅದಕ್ಕಿಂತ ಹೆಸರಿಲ್ಲದ ರೀತಿಯೊಳಗೆ ಹೆಸರೊಲ್ಲದ ಭಾವದಲ್ಲಿ ಕಾಯಕತತ್ಪರತೆಯನ್ನು ಮೆರೆದು, ನಿಸ್ವಾರ್ಥ ಜೀವನ ನಡೆಸಿದ ಮಹಾನುಭಾವರುಗಳು ದಾಖಲಾಗು

ವುದು ಈ ಮಾಲಿಕೆಯ ಬಹುಮುಖ್ಯ ಉದ್ದೇಶ. ಪ್ರಸ್ತುತ 'ಈರಬಡಪ್ಪ' ಕೃತಿಯು ಇದೇ ಹೆಸರಿನ ಜನಪದ ಕಥನಕಾರನೊಬ್ಬನ ಆತ್ಮಕಥನ. ಇದನ್ನು ಈರಬಡಪ್ಪ ನಿರೂಪಿಸುತ್ತಾ ಹೋದಂತೆ, ಅವರ ನಿರೂಪಣಾ ಶೈಲಿಗೆ ಊನವಾಗದಂತೆ ಅದನ್ನು ಅಕ್ಷರ ರೂಪದಲ್ಲಿ ಹಿಡಿದಿಟ್ಟಿರುವವರು ಪ್ರೊ। ಮಲ್ಲಿಕಾರ್ಜುನ ಕಲಮರಹಳ್ಳಿ. ಜನಪದ ಕಥಾ ಕಣಜವೆಂದರೆ, ಅದು ಬಹುಮುಖಿ ನೆಲೆಯೊಳಗೆ ಈ ನೆಲದ ಜೀವನ ಪರಂಪರೆಗಳನ್ನು ದ್ರವ್ಯವಾಗಿಸಿಕೊಂಡಿರುವ ಮೌಖಿಕ ಸಂಪದ. ಈ ಸಂಪದದ ನೆಲೆಬೀಡು ನಮ್ಮ ಜನಪದರ ಎದೆಯಂಗಳ. ಇವುಗಳನ್ನು ಸಂಗ್ರಹಿಸುತ್ತಾ ಹೋದರೆ, ಹಲವು ವಿಸ್ಮಯಗಳು ತೆರೆದುಕೊಳ್ಳುತ್ತವೆ. ಒಂದು ಕಥೆಯೇ ಹೇಳುವ ಕೇಳುವ ಪ್ರಕ್ರಿಯೆಯಲ್ಲಿ ಅಸಂಖ್ಯ ಪಠ್ಯಗಳಾಗಿ ಬೆಳೆಯುವ ವಿಶೇಷತೆಯಿರುತ್ತದೆ.

ಈರಬಡಪ್ಪ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಜನಪದ ಕಥೆಗಾರರಲ್ಲಿ ಒಬ್ಬರು. ಚಿತ್ರದುರ್ಗ ಜಿಲ್ಲೆ ಜನಪದ ಮೌಖಿಕ ಸಾಹಿತ್ಯ ಆಚರಣೆ, ಸಂಪ್ರದಾಯ ಇತ್ಯಾದಿ ಸಾಂಸ್ಕೃತಿಕ ವಿಶೇಷತೆಗೆ ಖನಿಜಭೂಮಿ. ಅಲ್ಲಿ ನಾಡೋಜ ಸಿರಿಯಜ್ಜಿಯಂಥವರು ಪರಂಪರೆಯಿಂದ ಕಾಯ್ದುಕೊಂಡು ಬಂದ ಬೆಳಸು ಸಾಕಷ್ಟು ಹುಲುಸಾಗಿದೆ. ಆ ಸಾಲಿನಲ್ಲಿ ಈ ಈರಬಡಪ್ಪನ ಕಥನ ಸಂಪತ್ತೂ ಸೇರುತ್ತದೆ. ಆದರೆ, ಈ ಕಥನ ಸಂಪತ್ತನ್ನು ಸಂಗ್ರಹಿಸಿ ದಾಖಲಿಸುವಲ್ಲಿ, ಅಧ್ಯಯನಕ್ಕೆ ಒಳಗು ಮಾಡಿ ಸಾಂಸ್ಕೃತಿಕ ಶೋಧ ನಡೆಸುವಲ್ಲಿ ಜಾನಪದ ವಿದ್ವಾಂಸರ ಪ್ರಯತ್ನ ಇನ್ನೂ ಅಲ್ಪಪ್ರಮಾಣದಲ್ಲಾಗಿದೆ. ಆಗಬೇಕಾದ್ದು ಅಪಾರವಿದೆ. ಸಂಗ್ರಹಕಾರ್ಯದ ಜೊತೆಗೆ ಅದನ್ನು ಕಾಪಿಟ್ಟುಕೊಂಡು ಬಂದ ನೆನಪಿನ ಚೇತನಗಳನ್ನೂ ಅವರ ಜೀವನ ವಿವರಗಳನ್ನೂ ದಾಖಲಿಸುವುದು ಅಗತ್ಯವಾಗಿ ಆಗಬೇಕಾದ ಕೆಲಸ. ಏಕೆಂದರೆ ಇಂಥವರ ಜೀವನ ವಿವರಗಳೆಂದರೆ ಅದು ವ್ಯಕ್ತಿಯೊಬ್ಬನ ಬದುಕಿನ ವಿವರ ಮಾತ್ರವಾಗಿರುವುದಲ್ಲ ; ಅದು ಪರಂಪರೆಯ ಪರಾದರ್ಶನ. ಇಂಥವುಗಳ ದಾಖಲಾತಿ ಜಾನಪದ ಜ್ಞಾನ ಸಾಹಿತ್ಯವನ್ನು ಅಧ್ಯಯನ ಮಾಡುವುದಕ್ಕೆ ಬೇಕಾದ ಹಲವು ಒಳನೋಟಗಳನ್ನು ನೀಡುತ್ತದೆ.

ಈರಬಡಪ್ಪನ ಜೀವನ ಕಥನವೂ ಇಂಥ ಒಂದು ಅಮೂಲ್ಯ ವಸ್ತು ವಿವರಗಳಿಂದ ಸಮೃದ್ಧವಾದ ಆತ್ಮಕಥನ. ಈರಬಡಪ್ಪ ಹೇಳುತ್ತಾ ಹೋದಂತೆ ಮಲ್ಲಿಕಾರ್ಜುನ ಅವರು ಅದನ್ನು ಭಾಷಿಕ ಅನುಭವ ನಿವೇದನಾ ನಾವೀನ್ಯತೆ ವಿಷಯ ವಿವರಗಳಿಂದೊದಗುವ ಮಾಹಿತಿ ಎಲ್ಲವೂ ಜಾನಪದ ತಜ್ಞರಿಗೆ ವಯ್ಯಾಕರಣಿಗಳಿಗೆ ಒಳ್ಳೆಯ ಅಧ್ಯಯನ ಸಾಮಗ್ರಿಯಂತಿದೆ. ಈ ಆತ್ಮಕಥನದ ನಿಜವಾದ ವಾರಸುದಾರರಾದ ಈರಬಡಪ್ಪನಿಗೆ ಅದನ್ನು ದಾಖಲಿಸಿದ ಪ್ರೊ. ಮಲ್ಲಿಕಾರ್ಜುನ ಅವರಿಗೆ ಪ್ರಕಟಣೆಗೆ ನೆರವಾದ ಎಲ್ಲರಿಗೆ ಆತ್ಮೀಯ ಕೃತಜ್ಞತೆಗಳು.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ
ಅಧ್ಯಕ್ಷರು

ಅಂತರಗಂಗೆಯ ಅಲೆಗಳ ಮೇಲೆ....

ಸಾಹಿತ್ಯ, ರಾಜಕೀಯ, ಸಂಗೀತ, ಕ್ರೀಡೆ.... ಹೀಗೆ ನಾನಾ ರಂಗಗಳಲ್ಲಿ ವಿಶಿಷ್ಟ ಸಾಧನೆಗೈದ ಅಕ್ಷರಲೋಕದ ಮಹಾನ್ ಸಾಧಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಾವುಗಳು ಸವೆಸಿದ ಹಾದಿ, ಏರಿದ ಎತ್ತರ, ಬದುಕಿನ ಏಳು ಬೀಳು ಮೊದಲಾದ ವಿಚಾರಗಳನ್ನು ತಮಗೆ ತಾವೇ ಬರೆದುಕೊಂಡ ಆತ್ಮಕಥೆಗಳು ಸಾಂಸ್ಕೃತಿಕ ಚರಿತ್ರೆ ನಿರ್ಮಾಣಕ್ಕೆ ಹೆಚ್ಚು ಸಹಕಾರಿಯಾಗಿವೆ.

ಆತ್ಮಕಥೆ ವ್ಯಕ್ತಿಯೊಬ್ಬನ ಚರಿತ್ರೆಯಾಗಿರುವಂತೆ ಅನುಸರಿಸಿದ ಜೀವನ ವಿಧಾನ ಹಾಗೂ ಸಾಂಸ್ಕೃತಿಕ ಒಳನೋಟಗಳನ್ನು ಅರ್ಥ ಮಾಡಿಕೊಳ್ಳಲು ಅನುವಾಗುತ್ತದೆ. ಈ ನಿಟ್ಟಿನಲ್ಲಿ ಮಹಾತ್ಮಗಾಂಧೀಜಿ, ಜವಾಹರಲಾಲ್ ನೆಹರೂ, ಡಾ. ಬಿ.ಆರ್. ಅಂಬೇಡ್ಕರ್, ಸರ್. ಎಂ. ವಿಶ್ವೇಶ್ವರಯ್ಯ, ಕುವೆಂಪು, ಶಿವರಾಮಕಾರಂತ ಮೊದಲಾದ ಮಹಾನ್ ಸಿದ್ಧಿ ಸಾಧಕರ ಆತ್ಮಕಥೆಗಳು, ಜೀವನ ಚರಿತ್ರೆಗಳು ಹೆಚ್ಚು ಹೆಚ್ಚು ಅರ್ಥಪೂರ್ಣವಾಗುತ್ತವೆ.

ಅಕ್ಷರ ಲೋಕದಿಂದ ಬಂದಂಥ ಈ ಆತ್ಮಕಥನ, ಜೀವನ ಚರಿತ್ರೆಗಳು, ಚರಿತ್ರೆ ನಿರ್ಮಾಣಕ್ಕೆ ಎಷ್ಟು ಮುಖ್ಯವೋ ಅಷ್ಟೇ, ಗ್ರಾಮೀಣ ಭಾರತದ ಅಕ್ಷರಸ್ಥರಲ್ಲದ ಜನಪದ ಅನುಭಾವಿಗಳ, ಕಲಾನಿಪುಣರ, ಸಿದ್ಧಿಸಾಧಕರ, ಆತ್ಮಕಥೆಗಳೂ ಅತಿ ಮಹತ್ವ ಪಡೆದುಕೊಳ್ಳುತ್ತವೆ. "ಮೂಕ ಹೃದಯಗಳಿಗೆ ಮಾತು ಬಂದಾಗ ಕಿನ್ನರ ಲೋಕವೇ ಕಣ್ಣಮುಂದೆ ಸೃಷ್ಟಿಯಾಗುತ್ತದೆ" ಎಂಬ ಡಾ|| ಮೀರಾಸಾಬಿಹಳ್ಳಿ ಶಿವಣ್ಣನವರ ಮಾತು ಅಕ್ಷರಶಃ ಸತ್ಯ.

ಮಾಗಿದ ಮನಸ್ಸೊಂದು ತಾನು ಸವೆಸಿದ ಹಾದಿಯ ಮೇಲೆ ಹಿನ್ನೋಟ ಬೀರಿದಾಗ ಬದುಕಿನ ಸೂಕ್ಷ್ಮಾತಿಸೂಕ್ಷ್ಮಗಳೂ ಯಾವುದೇ ವಿಕೃತಿಯಿಲ್ಲದೆ ಎಳೆಎಳೆಯಾಗಿ ಬಿಚ್ಚಿಕೊಳ್ಳುತ್ತವೆ ಎಂಬುದಕ್ಕೆ ಜನಪದ ಕತೆಗಾರ ಈರಬಡಪ್ಪನವರ ಆತ್ಮಕಥನವೇ ಸಾಕ್ಷಿ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಕಲಮರಹಳ್ಳಿಯಲ್ಲಿ ಜನಿಸಿದ ಈರಬಡಪ್ಪನವರು ಕುರುಬ ಸಮುದಾಯಕ್ಕೆ ಸೇರಿದವರು. ತನ್ನ ಹಳ್ಳಿಯ ಎಲ್ಲಾ ಜೀವಸತ್ವದೊಂದಿಗೆ ಬೆಳೆದುಬಂದು ಉತ್ತಮ ಜನಪದ ಕಥೆಗಾರನಾಗಿ ಆ ಪರಿಸರದಲ್ಲಿ ಜನಜನಿತ ವ್ಯಕ್ತಿಯಾಗಿದ್ದಾರೆ. ನಿರರ್ಗಳವಾಗಿ ಹೇಳಲ್ಪಡುವ ಇವರ ಕತೆಗಳು ವಸ್ತು ವೈವಿಧ್ಯದಿಂದ ಕೂಡಿದ್ದು ಅದ್ಭುತ ರಮ್ಯ ಲೋಕವನ್ನು ತೆರೆದಿಡುತ್ತವೆ.

1986ರಲ್ಲಿ ಈರಬಡಪ್ಪನವರ ಕೆಲವು ಕತೆಗಳನ್ನು ಸಂಪಾದಿಸಿ 'ಕಲಮರಹಳ್ಳಿಯ ಕತೆಗಳು' ಎಂಬ ಶೀರ್ಷಿಕೆಯಲ್ಲಿ ಡಾ|| ಎಂ.ವಿ. ಶ್ರೀನಿವಾಸ್‌ರವರ ಸಹಕಾರದಲ್ಲಿ ಚಿತ್ರದುರ್ಗದ ಚಿನ್ಮಯ ಪ್ರಕಾಶನದಿಂದ ನನ್ನ ಸಂಪಾದಕತ್ವದಲ್ಲಿ

1986ರಲ್ಲಿ ಕೃತಿಯನ್ನು ಪ್ರಕಟಿಸಲಾಯ್ತು. ಕೃತಿಯೊಳಗಿನ ಕತೆಗಳ ಅಂತಃಸತ್ವವನ್ನು ಮನಗಂಡ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದರಿ ಕೃತಿಗೆ 1988ರಲ್ಲಿ ಪುಸ್ತಕ ಬಹುಮಾನವನ್ನು ನೀಡಿತು. ನಂತರ 2001ರಲ್ಲಿ ಕಥಾಕಣಜ ಈರಬಡಪ್ಪನವರಿಗೂ ಪ್ರಶಸ್ತಿ ನೀಡಿ ಗೌರವಿಸಿತು. ಈ ಪ್ರಶಸ್ತಿ ಕಲಾವಿದನ ಪ್ರತಿಭಾಸಂಪತ್ತಿಗೆ ಸಂದ ಗೌರವವೂ ಆಗಿದೆಯೆಂದರೆ ತಪ್ಪಾಗಲಾರದು.

ಪ್ರಸ್ತುತ ಕೃತಿಯಲ್ಲಿ ಈರಬಡಪ್ಪನವರ ಆತ್ಮಕಥನವನ್ನು ಅವರೇ ಹೇಳಿದ ಭಾಷಾ ಧ್ವನಿಯಲ್ಲಿ ನಿರೂಪಿಸಲಾಗಿದೆ. ಓದುಗರಿಗೆ ಅರ್ಥಮಾಡಿಕೊಳ್ಳಲು ಸ್ವಲ್ಪ ಮಟ್ಟಿಗೆ ಕಷ್ಟವಾಗಬಹುದಾದರೂ ಚಿತ್ರದುರ್ಗ ಪರಿಸರದ ಭಾಷೆಯ ಮೂಲ ಸ್ವರೂಪ ಹಾಗೂ ವೈಶಿಷ್ಟ್ಯವನ್ನು ಬಾಷಾ ವಿಜ್ಞಾನದ ದೃಷ್ಟಿಕೋನದಲ್ಲಿ ಅಧ್ಯಯನ ಯೋಗ್ಯವಾಗಿಸಲು ಪೂರಕವಾಗಬಹುದು ಎಂಬ ನಿರೀಕ್ಷೆಯಿಂದ ಕತೆಗಾರನ ಮಾತುಗಳನ್ನು ಯಥಾರೀತಿಯಲ್ಲೇ ಶಬ್ದರೂಪಕ್ಕಿಳಿಸಲಾಗಿದೆ. ಈ ಪ್ರಯತ್ನ ಪೂರ್ಣಪ್ರಮಾಣದಲ್ಲಿ ಫಲಿಸಿದೆಯೆಂದೂ ಹೇಳಲಾರೆ.

ಕೃತಿಯ ಅನುಬಂಧದಲ್ಲಿ ಈರಬಡಪ್ಪನವರ ಕತೆಗಳ ಬಗ್ಗೆ ಈ ಮೊದಲು ನೀಡಿದ್ದ ಮೂವರು ಖ್ಯಾತ ಜನಪದ ವಿದ್ವಾಂಸರ ಅಭಿಪ್ರಾಯಗಳು, ಪದಕೋಶ, ಹಾಗೂ ಕತೆಗಾರನ ಜೀವನ ವೃತ್ತಾಂತಕ್ಕೆ ಪೂರಕವಾದ ಕೆಲವು ಅಪರೂಪದ ಭಾವಚಿತ್ರಗಳೂ ಮತ್ತು ಕತೆಗಾರ ಹೇಳುವ ಪ್ರಸಿದ್ಧ ಕೆಲವು ಸಾಂಕೇತಿಕ ಕತೆಗಳನ್ನು ಅಳವಡಿಸಲಾಗಿದೆ. ಈ ಅನುಬಂಧಗಳು ಕತೆಗಾರನ ಕಥಾಪ್ರೌಢಿಮೆ, ಕೌಶಲ್ಯ ಹಾಗೂ ಆತನ ಆತ್ಮವೃತ್ತಾಂತಕ್ಕೆ ಹೆಚ್ಚಿನ ಪುಷ್ಟಿ ನೀಡಬಹುದೆಂಬುದು ನನ್ನ ಆಶಯವಾಗಿದೆ.

ಇಂಥದ್ದೊಂದು ಉತ್ತಮ ಕಾರ್ಯಕ್ಕೆ ನನ್ನನ್ನು ಒಗ್ಗಿಸಿದವರು ಬಗ್ಗಿಸಿದವರೆಂದರೆ ಆತ್ಮೀಯ ಹಿರಿಯರಾದ ಡಾ॥ ಕಾಳೇಗೌಡನಾಗವಾರ ಮತ್ತು ಡಾ॥ ಮೀರಾಸಾಬಿಹಳ್ಳಿ ಶಿವಣ್ಣನವರು. ಹಸ್ತಪ್ರತಿ ಸಿದ್ಧವಾದ ನಂತರ ಕಾರಣಾಂತರಗಳಿಂದ ಪ್ರಕಟಪಡಿಸಲು ಸಾಧ್ಯವಾಗಿರಲಿಲ್ಲ. ಹಸ್ತಪ್ರತಿ ಪುಸ್ತಕ ಕಪಾಟಿನಲ್ಲಿ ತಣ್ಣಗೆ ಮಲಗಿತ್ತು. ಇಂಥ ಹೊತ್ತಿನಲ್ಲಿ ನೆಲಮೂಲದ ದೇಸಿ ಕವಿಯೆಂದೇ ಖ್ಯಾತರಾದ ಹಾಗೂ ಕನ್ನಡಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಆತ್ಮೀಯರೂ ಆದ ಪ್ರೊ॥ ಎಸ್.ಜಿ. ಸಿದ್ಧರಾಮಯ್ಯನವರು ಪುಸ್ತಕ ಪ್ರಾಧಿಕಾರದಿಂದ ಪ್ರಕಟಣೆಗೆ ಸ್ವೀಕರಿಸಿದ್ದು ನನಗೆ ಸಂತೋಷವಾಯ್ತು. ಇದಕ್ಕೆ ಪೂರಕವಾಗಿ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು ಹಾಗೂ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ ಇವರ ಸಹಸ್ಪಂದನವನ್ನು ಮರೆಯಲಾರೆ. ಕೃತಿಯನ್ನು ಲಕ್ಷ್ಮೀ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗ ಆಸಕ್ತಿ ವಹಿಸಿ ಚಂದಗೊಳಿಸಿದ್ದಾರೆ. ಈ ಎಲ್ಲಾ ಗೌರವಾನ್ವಿತ ಮಹನೀಯರಿಗೆ ತುಂಬು ಹೃದಯದ ಕೃತಜ್ಞತೆಗಳು.

15-08-2007 ಪ್ರೊ॥ ಮಲ್ಲಿಕಾರ್ಜುನ ಕಲಮರಹಳ್ಳಿ
ದಾವಣಗೆರೆ ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ತೋರಣ

ಮಾತಾಡು ಮಾತಾಡು ಲಿಂಗವೇ....

ಮಾತಾಡು ಮಾತಾಡು ಲಿಂಗವೇ
ನೀ ಮಾತಾಡ ಬೇಕಯ್ಯ ಲಿಂಗವೇ
ನೀ ಮಾತಾಡದಿದ್ದರೆ ನಾ ತಾಳಲಾರೆನು
ಮಾತಾಡು ಕಾಸಿಯ ಲಿಂಗವೇ ॥

ಅಣ್ಣಾ ಅವರಸರಕಿಲ್ಲ ಲಿಂಗವೇ
ತಮ್ಮ ಯಾಳ್ಯಾಕೆಲ್ಲ ಲಿಂಗವೇ
ನಾ ಪಡೆದ ಮಕ್ಕಳು ನಮಗೇ ಇಲ್ಲದ ಮೇಲೆ
ಮೊಮ್ಮಕ್ಕಳಾರಯ್ಯ ಲಿಂಗವೇ ॥

ಕಳ್ಳುಬಳ್ಳಿ

ನಮ್ಮಸ್ಕಾರ ಸ್ವಾಮಿ, ನ್ನನೆಸ್ರು ಈರಬಡಪ್ಪ ಅಂತ. ನಮ್ಮಪ್ಪೆಸ್ರು ಚಿಕ್ಕೀರಪ್ಪ, ನಮ್ಮಮ್ಮೆಸ್ರು ತಿಪ್ಪಮ್ಮ. ನಾನುಟ್ಟಿದ್ದು ಕರಮ್ರಳ್ಳಿಯಾಗೆ. ನಮ್ಮಮ್ಮಂದು ತವ್ರು ಮನೆ ಹಿರಿಯೂರು ತಾಲ್ಲೂಕು ಕಳವಿಬಾಗಿ. ನಾವು ಆರು ಜನ ಅಣ್ತಮ್ಮಂದ್ರು, ನಾಕು ಜನ ಅಕ್ಕಂದ್ರು, ನಾಕ್ ಜನ ಸತ್ತೋದ್ರು, ಎಲ್ಲಾರು ಸೇರಿ ಅದ್ನಾಕು ಜನ. ನಾನು ಅದ್ನಾಕ್ನೆವ್ನು. ಎಲ್ಲಾರ್ಗಿನ್ನ ಹಿರಿಯಾನು ದ್ಯಾಮಣ್ಣ. ದ್ಯಾಮಣ್ಣಿಂದೆ ನಿಂಗಣ್ಣ. ಆಮೇಲೆ ಲಕ್ಷ್ಮಣ್ಣ, ಕೆಂಚಣ್ಣ, ಸಿಕ್ಕಜ್ಜಿ ಆಯಮ್ಮಿಂದೆ ನಿಂಗಮ್ಮ, ಕೆಂಚಮ್ಮ, ಈರಕ್ಕಯ್ಯ, ಬೀರ್ಲಿಂಗಣ್ಣ ಬೀರ್ಲಿಂಗಣ್ಣಿಂದೆ ನಾನು. ಎಲ್ಲಾರ್ಗಿನ್ನ ಸಿಕ್ಕಾನು. ನಾನು ಕಾಲ್ಮುಂದಾಗಿ ಉಟ್ಟೋನಂತೆ. ನಾನು ನಮ್ಮಮ್ಮನ ಹೊಟ್ಯಾಗೆ ಇದ್ದಂಗ್ಲೆ ನಮ್ಮಮ್ಮಯ್ಯ ಮದ್ದು ಕಡುದ್ಬಿಟ್ಟಿದ್ಲಂತೆ ಮಕ್ಳು ಇನ್ಸಾಕಂತ. ಆದ್ರೆ ನಾನು ಕರಗ್ಲಿಲ್ಲ-ಸಾಯ್ಲಿಲ್ಲ. ಅಂತೂ ಉಟ್ದೆ. ಸಾಕಿ ಸಲುವಿ ದೊಡ್ಡೋನ್ನ ಮಾಡಿದ್ರು, ಇವಾಗ ನನ್ಗೆ ಎಪ್ಪತ್ತೈದು ವರ್ಸ ವಯಸ್ಸು.

ನಮ್ಮೂರಾಗೆ ನನ್ವಾರ್ಗೇರು ಯಾರಪ್ಪಾಂದ್ರೆ ಗೌಡ್ರ ಗೋವಿಂದಪ್ಪ, ಅಂಗ್ಡಿ ರಂಗಣ್ಣ, ದೊಡ್ಡಜ್ಜರ ಸಿದ್ದಣ್ಣ, ಕೆಂಗಪ್ಪಮೇಷ್ಟ್ರು, ಕುಂದ್ಲಗುರ್ದ ಭೂತಣ್ಣ, ಗೌಡ್ರ ರಂಗಪ್ಪ, ಕೋಸಿನ ತಿಮ್ಮಣ್ಣ. ನಾವೆಲ್ಲ ದನ ಕಾಯೋಕೆ ಹೋಗ್ತಿದ್ವಿ, ನಮ್ಮೂರಾಗೆ ಅಸಾಧ್ಯ ದನಗಳಿದ್ವು ಅವ್ರವ್ರ ದನಗಳನ್ನ ಅವರವ್ರು ಕಾಯ್ದಿದ್ರು, ಬೆಳೆಗೆರೆ ತನ್ಕ ಎಲ್ಲಾ ಬೀಳು. ಎತ್ಲಾಗೆ ನೋಡಿದ್ರು ಬರೀ ಗಿಡಮರ ಅಡ್ವಿನೇ. ದನ ಕಾಯ್ತಾ ಬುಗುರಿ, ಚಿನ್ನಿಕೋಲು, ಆಟ ಆಡ್ತಿದ್ವಿ, ರಾತ್ರಿವೊತ್ತು ಕಣ್ಣಾಮುಚ್ಚಾಲೆ ಆಟ ಆಡ್ತಿದ್ವಿ, ನಮ್ಮೂರಾಗೆ ಜಿನ್ ಇರ್ಲಿಲ್ಲ. ಅದ್ಕೆ ಕುಟ್ಟಾವ್ನು ಬೀಸಾವ್ನು ಸರ್ವೊತ್ನಿತಂಕ ಇರ್ತಿದ್ವು, ನಮ್ ನಮ್ಮವ್ವೆ ಕುಟ್ಟಮ್ತಿರ್ಲಿಲ್ಲ. ಯಾರಾವಾದ್ರೂ

ಸರಿ ಕುಟ್ತಾಕೆ ಓಗಿಬಿಡ್ತಿದ್ವಿ. ಬಾಳ ಕುಸಿ ಆಗ್ತಿತ್ತು. ನಾನು ಕೆಂಗಪ್ಪ ಮೇಷ್ಟ್ರ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೇಕೆ ಹಾಕ್ಕೊಂಡು ಪೈಪೋಟಿ ಮೇಲೆ ಐದು ಒನ್ಕೆಯಾಗೆ ಕುಟ್ತುತಿದ್ವಿ. ಜನಗಳು ಆನಂದವಾಗಿ ನೋಡಾಕೆ ಬರ್ತಿದ್ರು.

ನನ್ಗೆ ಇಪ್ಪತ್ವರ್ಸ ಆಗಿರ್ಬೇಕು ಅನ್ಸುತ್ತೆ. ಆವಾಗ ನಮ್ಮಣ್ಣಗ್ಳು ಎಲ್ಲಾರು ಬ್ಯಾರೆ ಆದ್ರು. ನಾನೂ ಬೀರ್ಲಿಂಗಣ್ಣ ಅಮ್ಮಯ್ಯ ಒಂದ್ಕಡೆ ಇದ್ವಿ. ಆವಾಗ ಅಮ್ಮಯ್ಯಾಗೆ ಕಣ್ ಕಾಣ್ದಂಗೆ ಆಗಿಬಿಟ್ಟು. ಮಾಡಿಕ್ಕಕೆ ಯಾರೂ ಇಲ್ದಂಗೆ ಆತು. ಒಂದಿನ ಅವ್ರವ್ರೆ ತಾಯಿ ಮಗ ಮಾತಾಡವ್ರೆ. 'ಏನಪ್ಪಾ ನನ್ಗೆಕಣ್ ಕಾಣ್ದಂಗಾದ್ರು ನಿಮ್ಗೆ ಮದ್ವೆ ಮುಂಜಿ ಯಾರು ಮಾಡಾರು ? ಎಲ್ಲಾ ದೂರಾಗಿಬಿಟ್ರು ಅತ್ರಕ್‌ಬಿಟ್ಕಂಬ್ದಂಗೆ ನೀವು ನಾಕ್ ನಾಕ್ ವರ್ಸ ಅಕ್ಕಂದ್ರ ಮನೆಯಾಗೆ ಹೋಗಿ ದುಡ್ಕಂಡು ಮದ್ವೆಯಾಗಿ ಬರ್ರಿ ಅಂತ ಹೇಳೈತೆ. ಅದ್ನ ಬೀರ್ಲಿಂಗಣ್ಣ ಮನಿಸ್ನಾಗೆ ಇಟ್ಕಂಡಿದ್ದ. ಒಂದಿನ ನಾನು ಕಪ್ಲಾಗೆ ಮನಿಗಿದ್ದಾಗ ಒಳ್ಳೆ ಸರ್ವತ್ತು. ಅಣ್ಣಯ್ಯ ಬಂದು ನನ್ನ ಎಬ್ಸಿ "ಏನಪ್ಪಾ ಇಂಗಿಂಗೆ ನೀನು ನಾಕ್ವರ್ಸ ಕಣಜನಳ್ಳಿಗೆ ಹೋಗು. ನಾನು ನಾಕ್ವರ್ಸ ಹರ್ತಿಕ್ವಾಟ್ಗೆ ಹೋಗ್ತೀನಿ. ಅಲ್ಲಿದ್ದು ಆಮೇಲೆ ಮದ್ವೆ ಆಗಿ ಬರಾನ" ಅಂತಂದ. ಅದ್ಕೆ ನಾನು "ಬ್ಯಾಡಣ್ಣ ನೆಂಟ್ರ ಮನೆ ಬಾಕ್ಲಿಗೆ ಹೋಗೋದು ಬ್ಯಾಡ ಸದ್ರಕೆ ಬರುತ್ತೆನಂಬಾಳು. ನೀನು ಸುಮ್ನೆ ಮುದ್ದೆ ಮಾಡಿಕ್ಕಂಡಿರು ನಾನೆಲ್ಲ ದುಡ್ದಾಕ್ತಿನಿ" ಅಂತಂದೆ. ಅದ್ಕೆ ನಮ್ಮಣ್ಣ ಬೈದು ಬೈದು ಅದೇ ಓಗಿ ಬಿಟ್ಟ. ಆಮೇಲೆ ಅಮ್ಮಯ್ಯ ಅಣ್ಣಯ್ಯ ನನ್ನ ಮಾತಾಡ್ಸದಂತೆ ಪಟ್ಟು ಹಿಡ್ಕಂಡ್‌ಬಿಟ್ರು. ಅದ್ಕೆ ನಾನು ವಿದಿ ಇಲ್ದೆ ಅವರಂತಲೇ ತಾಳ ಆಕ್ಬಿಟ್ಟೆ.

ನಮ್ಮಣ್ಣಂತೆ ಟಿ.ಬಿ. ಕಾಯ್ಲೆ ಇತ್ತು ಇಲ್ಲಿದ್ದಾಗ ಅಂಗೇನು ಕಾಣ್ತಿರ್ಲಿಲ್ಲ. ಹರ್ತಿಕ್ವಾಟ್ಗೆ ಹೋಗಿಬಿಟ್ನಲ್ಲ ಅವಾಗ ನಡಂತ್ರ ಜೋರಾಗಿ ಬಿಟ್ತು. ನನ್ಗೆ ವಿಷಯ ತಿಳಿಸಿದ್ರು. ನಾನು ಪಗಡಲ ಬಂಡೆ ಕೆಂಪಣ್ಣಯ್ಯನ್ನ ಏಳಿಕಳಿಸ್ಕಂಡೆ 'ಏನಣ್ಣಾ ನಾನೋಗಿ ಇಂಗೆ ನೆರಮನೆ ಸೆರ್ಕಂಬಿಟ್ಟೆ ಆಸ್ರಯ ಕೊಡೋರು ಯಾರೂ ಇಲ್ಲ. ನೀನನ್ನ ಬೀರ್ಲಿಂಗಣ್ಣನ್ನ ಕರ್ಕಂಡೋಗಿ ಇಟ್ಕಂಡು ಆಸ್ಪತ್ರೆಗೆ ತೋರ್ಸು' ಅಂದೆ. ಅವಾಗ ಕೆಂಚಣ್ಣಯ್ಯ ನಾನೇಳ್ದಂಗೆ ಮಾಡ್ದ. ಪಾಪ ಎಲ್ಡು ಸಾವಿರ ರೂಪಾಯಿ ಕರ್ಚು ಮಾಡ್ದ. ಆದ್ರೂ ಉಸಾರಾಗ್ಲಿಲ್ಲ. ಕಾಯ್ಲಿ ಜೋರಾಗಾಕ್ಕತ್ಕಂಡ್ತು. ತಿರ್ಗ ನಾನೇ ಕರ್ಕಬಂದೆ, ಹಣಕ್ಕೆ ಬಡ್ಡಿಯಿಲ್ಲ ಮನ್ಗೆ ಬಾಡ್ಗೆ ಇಲ್ಲ. ಆತರ ಶೆಟ್ರಿಗೆ ಊರಾಗೆ ನಮ್ಮನೆ ಬಾಡ್ಗೆ ಕೊಟ್ಟಿದ್ದೆ. ಆ ಮನೆ ಬಿಡ್ಸಿ ಅಲ್ಲಿಟ್ಟು ನಾನೋಗಿಬಿಟ್ಟೆ. ಚೆನ್ನಾಗೇ ಇದ್ದ. ಕಡ್ಲೆಕಾಯಿ ಪಡ್ಲೆಕಾಯಿ ಸ್ವಲ್ಪ ಮಾಡ್ಕಂಡಿದ್ದ. ಎಲ್ಡು ಚೀಲ ಬತ್ತ ಇದ್ವು ಎದ್ದಾಗ ಮುದ್ದೇನ ಬೈಗಿಂದ ಉಂಬೋನು ದೂಳುಬ್ಯಾರೆ. ತಿರ್ಗ ಕಾಯ್ಲೆ ಜೋರಾಗಿ ಬಿಡ್ತು. ಅವಾಗ ತಿರ್ಗ ನನ್ನೇ ಏಳಿ ಕಳಿಸ್ಕಂಡ್ರು, ನೆಂಟ್ರ ಮನೆಯಾಗೆ ಸಿಕ್ಕಂಡಿನಿ ಏನ್ಗತಿ ಮಾಡಾನಪ್ಪ ಅಂತ ಸಿಂತೆ ಆತು. ಕೊನ್ಗೆ ಊರ್ಗೆ ಬಂದೇ ಬಿಟ್ಟೆ. ನನ್ನೊಂದು ಓರಿಕರ ಇತ್ತು. ಅದ್ನ ಮಾರಿ ದುಡ್ಡು ತಗಂಡು ಅಣ್ಣಯ್ಯನ್ನ ಕರ್ಕಂಡು ಸೀದ ದುರ್ಗಕ್ಕೆ ಬಂದೆ. ಅಲ್ಲಿ ಆಸ್ಪತ್ರೆ ಗೊತ್ತಿಲ್ಲ. ದೂಳು ಸಂಜೆ ಹೊತ್ತು. ಅಲ್ಲಿ ಇಲ್ಲಿ ಅವ್ರ್ನ ಇವ್ರ್ನ ಕೇಳ್ಕಂಡು ಆಸ್ಪತ್ರೆ ಸೇರಿದ್ವಿ. ಅಲ್ಲಿದ್ದ ನರ್ಸು 'ಬೆಳಿಗ್ಗೆ ಬರ್ರಿ ಇವಾಗ ಬೆಡ್ಡು ಕಾಲಿ ಇಲ್ಲ' ಅಂತು. ಆವಾಗಿನ್ನೇನು ಮಾಡಾನ ಹೊರ್ಗೆ ಬಂದ್ವಿ.

ಆಸ್ಪತ್ರೆ ಪಕ್ಕದಾಗೆ ಒಂದು ಡಬ್ಬಾದಂಗ್ಡಿ ಇತ್ತು. ಅಲ್ಗೆ ಬಂದು 'ಏನಪ್ಪಾ ನಾವು ತಿಳಿವಳ್ಕೆ ಇಲ್ದೋರು, ಇಂಗಿಂಗೆ ಬಂದು ಬಿಟ್ವಿ, ನಾಳೆ ಆಸ್ಪತ್ರೆಗೆ ಬರಾಕೆ ಹೇಳಿದ್ರು, ಇವಾಗ ದಿಗಿಲಾಗೈತೆ. ಅದ್ಕೆ ಇಲ್ಲೇ ಮನಿಕ್ಕಂಬಕ್ಕೆ ಒಂದಿಷ್ಟು ಜಾಗ ಕೊಡಪ್ಪ' ಅಂತ ಕೇಳ್ದೆ ಅದ್ಕೆ ಆಮಾರಾಯನಮ್ಮಪ್ಪ 'ನಾನು ಅತ್ಕಂಟ್ಗೆ ಬಾಗ್ಲಾಕ್ಕೊಂಡು ಓಗಾದು ನಾನು ಓದ್ಮೇಲೆ ಒಬ್ರು ಇಲ್ಲೆ ಹೊರ್ಗೆ ನಾನು ಮನಿಕ್ಕಂಡಂಗೆ ಮನಿಕ್ಕಳ್ರಿ ಇನ್ನೊಬ್ರು ಪೆಟ್ಗೆ ಕೆಳ್ಗೆ ತೂರ್ಕಳ್ರಿ. ಇಲ್ಲಿ ಗೂರ್ಕರ ಕಾಟ ಜಾಸ್ತಿ ನಾನು ಬೆಳಿಗ್ಗೆ ಬಂದು ಆಸ್ಪತ್ರೆಗೆ ಕಳಿಸ್ಕೊಡ್ತೀನಿ' ಅಂತೇಳಿ ಬೀಗ ಅಕ್ಕಂಡು ಹೋಗಿಬಿಟ್ಟ. ಒಳ್ಳೆ ಸರ್ವತ್ತು. ಗೂರ್ಕಾ ಬಂದ್ಬಿಟ್ಟ. ನನ್ನ ನಮ್ಮಣ್ಣನ್ನ ಒರಾಕೆ ಎಳ್ಕಂಡು ದಬ್ಕಂಡು ಹೋಗ್ತಿದ್ರು. ಆವಾಗ್ಲೆ ದೇವ್ರೇ ಎಬ್ಸಿ ಕಳಿಸ್ದಂಗೆ ಅಂಗಡಿ ಆಯಪ್ಪ ಅಲ್ಗೆ ಬಂದ್ಬಿಟ್ಟ. ನಮ್ಮನ್ನ ನೋಡಿ "ಎಲೆಲೇ ಇದೇನ್ ಕೆಲಸ" ಅಮ್ತಂದು ಗೂರ್ಕರ್ಗೆ 'ಇವು ನಮ್ಮೋರು ಇಲ್ಲೇ ಮನಿಕ್ಕಂಬಾಕೆ ನಾನೇ ಹೇಳಿದ್ದೆ' ಅಂತೇಳಿ ನಮ್ಮನ್ನ ವಾಪಾಸ್ ಕರ್ಕಂಬಂದು 'ಎಂಗ್ಮನಿಕ್ಕಂಡಿದ್ರಿ ಅಂಗೇನೇ ಮನಿಕ್ಕಳ್ರಿ' ಅಂತೆಳಿ ಅದೇ ಓದ. ಬೆಳಿಗ್ಗೆ ಬೇಗ ಬಂದು ಕಾಪಿ ಕಾಸಿಕೊಟ್ಟ. ಬ್ರೆಡ್ ತಿಂಬಾಕೆ ಕೊಟ್ಟ. ಇನ್ನು ಓಗ್ರಪ್ಪ ಅಂತೇಳಿ ಆಸ್ಪತ್ರೆಗೆ ಕಳಿಸಿಕೊಟ್ಟ. ಆಸ್ಪತ್ರೆಗೆ ಓಗಿ ಐದು ರೂಪಾಯಿ ಕೊಟ್ಟು ಯಕ್ಷ 'ತೆಗೆಸ್ದೆ. ಡಾಕ್ತ್ರು ನೋಡಿ ತಿಂಗ್ಳಿಗೆ ಆಗೋವಷ್ಟು ಗುಳ್ಗೆ ಬರ್ದುಕೊಟ್ರು. ಗುಳ್ಗೆ ತಗಂಡು ಒರ್ಗೆ ಬಂದ್ವಿ.

ನಮ್ಮಣ್ಣಂಗೆ ಮಾಂಸ ತಿನ್ಬೇಕು ಅನ್ಸೈತೆ. ಕೊಡ್ಸು ಅಂದ. ನಾನು ಮಿಲ್ಟ್ರಿ ಓಟೆಲ್ಗೆ ಕರ್ಕೊಂಡೋಗ್ಬಿಟ್ಟೆ. ಅದು ದನದ್ಮಾಂಸ್ದ ಓಟ್ಲು ಅಂತ ಗೊತ್ತಾಗ್ಲಿಲ್ಲ. ಇಷ್ಟಷ್ಟು ದಪ್ಪ ಪೀಸ್ಗಳು. ನನ್ಗೆ ಯಾಕೋ ಅನುಮಾನ ಬಂತು. ನಮ್ಮಣ್ಣ ಬಾಳ ಚೆನ್ನಾಗೈತಂತ ಅಕ್ಲಾಕ್ಬಿಟ್ಟ ಇನ್ನೊಂದು ಪ್ಲೇಟು ಕೊಡ್ಸು ಅಂದ. ಅವಾಗ ನಂದೇ ಕೊಟ್ಟೆ. ಅದ್ನು ತಿಂದು ಇನ್ನೊಂದು ಪ್ಲೇಟು ಅಂದ. ಕೊಡಿಸ್ದೆ. ಅದ್ಕೈದು ರೂಪಾಯಿ ಆತು. ಕೊಟ್ಟೆ. ಊರ್ಗೆ ಬಂದು ಮನೆಯಾಗ್ಬಿಟ್ಟು ಚೆನ್ನಾಗಿ ಜೀವ್ನ ಮಾಡ್ಕಂಡಿರಪ್ಪ ಅಂತೇಳಿ ನಾನು ತಿರ್ಗ ಕಣಜನಳ್ಳಿಗೆ ಓಗ್ಬಿಟ್ಟೆ.

ಗುಳ್ಗೆ ತಿಂದಾಗ್ನಿಂದ ನಮ್ಮಣ್ಣ ಬಡಾ ಚೆನ್ನಾಗಾಗ್ಬಂದ. ಆಗ್ಲೇನೇ ಕರೆಂಟು ಬಂದಿದ್ದು. ಕರೆಂಟು ಬಂದಾಗ ನಮ್ಮೂರಾಗೆ ನೆಟ್ಟೆಕಾಯಿ ಆಕ್ಬಿಟ್ರು. ಬೆಳೆ ಚೆನ್ನಾಗಿ ಬಂದಿತ್ತು. ನಮ್ಮಣ್ಣ ಕಡ್ಲೆಕಾಯಿ ಗಿಡ ಕೀಳೋಕೆ ಹೋಗೋನು. ಹಗ್ಲೆಲ್ಲಾ ಕಡ್ಲೆಕಾಯಿ ತಿಂಬೋದು ರಾತ್ರಿಗೆ ತಂಗಳು ಮುದ್ದೆ ಉಂಬೋದು. ಕಾಯ್ಲೆ ಇನ್ನೇನು ಮಾಡುತ್ತೆ ? ಜೋರಾಗಿ ಬಿಡ್ತು. ನಾನು ಕಣಜನಳ್ಳಾಗೆ ಇದ್ನಲ್ಲ ಆವಾಗ ನನ್ಗೂ ನಮ್ಮಕ್ಕಂಗೂ ಮೂವರ್ಗೂ ಯಾಕೋ ಸರ್ಬಲ್ಲಿಲ್ಲ. ನಾಕ್ವರ್ಸ ಕೆಲ್ಸ ಮಾಡಿ ಮೈನೋವು ಮಾಡ್ಕಂಬಿಟ್ಟೆ. ಕೊನ್ಗೆ ನಾನು ಹೆಳ್ದೆ ಕೇಳ್ದೆ ಅಲ್ಲಿಂದ ಕಣ್ಣಿಕಿತ್ತೆ. ಸೀದ ಪಗಡ್ಲ ಬಂಡ್ಗೆ ಬಂದ್ಬಿಟ್ಟೆ ಅಲ್ಲಿ ಎಲ್ರೂ ಸೇರಿದ್ರು. ಅಲ್ಲಿ ಚೆನ್ನಮ್ನಳ್ಳಿ ನಮ್ಮಕ್ಕ ನನ್ಗೆ ಬುದ್ದಿ ಹೇಳಿ "ನೋಡಪ್ಪಾ ನಮ್ಗೆ ಎಲ್ಡು ಸಾವ್ರ ಸಾಲ ಐತೆ. ಅದು ತೀರ್ತಿದ್ದಂಗೆ ನಿನ್ಗೆ ನಮ್ಮಗಳ್ನ ನಿನ್ಗೆ ಕೊಟ್ಟು ಮದ್ವೆ ಮಾಡ್ತೀವಿ" ಅಂತೇಳ್ತು ಅಂತು ನಾನೂ ಒಪ್ಕಂಡೆ. ಅವ್ರ ಮನ್ಗೆ ಬಂದೆ. 'ಪರಮಾತ್ಮ ಎಲ್ಲಾ ನಿಂದೆ ಕಣಪ್ಪ' ಅಂತಂದು ಜಗ್ ಕೆಲಸ ಮಾಡ್ದೆ. ಚೆನ್ನಾಗಿ ಪಸ್ಲಾತು. ಸಾಲವೆಲ್ಲಾ ತೀರಿಬಿಡ್ತು. ಆವಾಗ

ನಮ್ಮಕ್ಕಾರು ನನ್ಗೆ ಮದ್ವೆ ಮಾಡಿದ್ರು. ಆವಾಗ ನನ್ಗೆ ಮೂವತ್ತೆಲ್ಡು ವರ್ಷ. ನನ್ನೆಂಡ್ತಿ ಹೆಸ್ರು ಗಂಗಮಾಳಮ್ಮ ಅಂತ. ಏನೋ ಪರಮಾತ್ಮ ಕೊಟ್ಟಿದ್ದೇ ಸಾಕು ಅಂತ ಅಕ್ಕನ್ಮನೆಯಾಗೆ ಇದ್ಕಂಡು ಸಂಸಾರ ನಡಿಸ್ದೆ. ನಾಕ್ವರ್ಸ ಇದ್ದೆ. ಮೊದ್ಲು ಹಿರೇಹುಡ್ಗ ಉಟ್ದ. ಅವನ್ಗೆ ಈಶ್ವರ ಅಂತ ಹೆಸರಿಟ್ಟೆ. ಇಂಗೇನೇ ಮೂರು ಮಕ್ಳು ಅಲ್ಲೆ ಉಟ್ಟಿದ್ರು. ಎರಡ್ನೆ ಮಗನ್ ಹೆಸ್ರು ತಿಪ್ಪೇಸ್ವಾಮಿ. ಮೂರ್ನೇವ್ನು ಸುಧಾಕರ. ಅಕ್ಕ ಮಾವ ಮಕ್ಕಳನ್ನ ಚೆನ್ನಾಗಿ ಸಾಕೊಟ್ರು. ಆಮೇಲೆ ಅವ್ರಿಗೆ ವಿದ್ಯಾಬುದ್ದಿ ಕಲ್ಸಿ ಒಂದ್ಕೈ ಎಲ್ಡು ಕೈ ಮಾಡಿ ನಾನು ನಮ್ಮೂರ್ಗೆ ಬಂದು ಸೇರ್ಕಂಡೆ.

ನನ್ನಾಲ್ಗೆ ಒಂದಿಷ್ಟು ಜಮೀನು ಬಂದಿತ್ತು. ಆ ಜಮೀನ್ನಾಗೆ ಚಾನೆಲ್ ಕೆಲಸ ನಡೀತಿತ್ತು. ನಾನು ಅದ್ನ ತಡೆಯೋಕೆ ಹೋದೆ. ಆದ್ರೆ ಅದ್ರಿಂದ ಪ್ರಯೋಜನ ಆಗ್ಲಿಲ್ಲ. ಮುಂದ್ಕೆ ನಾನೇ ಅದೇ ಚಾನಲ್ಗೆ ಕೆಲ್ಸಕ್ಕೆ ಹೋದೆ. ಅಂಗೂ ಇಂಗೂ ಜೀವ್ನ ಮಾಡ್ಕಂಡಿದ್ದೆ.

ಸಿಡಿ ಆಡಿದ್ದು

ಇಂಗೆನೇ ಇದ್ವಿ. ಒಂದಿನ ನನ್ಮಗ ಈಶ್ವರ್ಗೆ ಮೈಯ್ಯಾಗೆ ಉಸಾರಿಲ್ದಾಂಗಾತು. ಇಂಜೆಕ್ಷನ್ ಮಾಡ್ಸಿ ಮಾಡ್ಸಿ ಮೈಯಲ್ಲಾ ತೂತ ಮೈಯೆಲ್ಲಾ ತೂತ. ಹಿಡ್ದ ತೊಟ್ಲು ಬಿಡ್ಲಿಲ್ಲ. ತೂಗಿತೂಗಿ ರೆಟ್ಟೆಲ್ಲಾ ಬಿದ್ದೋಗಿದ್ವು. ಬಲು ಅವಸ್ತೆ ಬಿದ್ದೆ ಸ್ವಾಮಿ. ಯಾರೊ ಒಬ್ರು ಒಂದು ಉತ್ತ ಆಗೀಬೇಕು, ಅದ್ರ ಮಣ್ಣು ಮನೆಸುತ್ತ ಉದರ್ಸಬೇಕು ಅಂದ್ರು ನಾನು ಉತ್ತ ಅಗ್ದೆ. ಬರೀ ಮಂಡ್ರಗೊಬ್ಬೆ. ತಿರ್ಗ ದೇವ್ರ ಕೇಳ್ದೆ. ಆಗ ದೇವ್ರು 'ನನ್ನ ಕೇಳಂಗಿಲ್ಲ ಮಾಡಂಗಿಲ್ಲ ನಿನ್ಗೆ ಸರಿಬಂದಂಗಾಡ್ತಿಯ ಅದೆಲ್ಲೆಲ್ಲಿ ಏಸೇಸು ಉತ್ತ ಅಗಿತೀಯ ಅಗಿ ನೋಡಾನ' ಅಮ್ತಾ 'ಅದು ನನ್ದೆ ಕಾಟ' ಅಂತು. ಅವಾಗ ನಮ್ಮುಡ್ಗನ್ನ ಕರ್ಕೊಂಡೋಗಿ ಅಯಮ್ಮನ ಗುಡಿ ಮುಂದ್ಕೆ ಉಲ್ದಾಕಿದ್ವಿ. ಅವಾಗ ದೇವ್ರು 'ನೀನು ಸಿಡಿಯಾಡ್ಬೇಕು ಕಣಾ, ನೀನು ಸಿಡಿಯಾಡಿದ್ರೆ ನಿನ್ಮಗ ಓಡಾಡಂಗೆ ಮಾಡ್ತೀನಿ ಅಂತು. ಅವಾಗ ನಾನು 'ಅದಾಗಾಗಿಲ್ಲಮ್ಮ ಬಹಳ ಕರ್ಚು ಬರುತ್ತೆ' ಅಂದೆ. 'ಮೊದ್ಲು ಅದ್ನ ಮಾಡ್ಕಂಬಾರಾ ನಿನ್ಗೆ ಬೇಕಾದಷ್ಟು ಉಟ್ಟುಸ್ತೀನಿ' ಅಂತು. ಸರಿ, ದೇವ್ರೇ ಹೇಳಿದ್ಮೇಲೆ ನಂದಿನ್ನೇನು ಅಂದ್ಕಂಡು ಹೊಲೇರ್ನ ಕರ್ಕಂಡು ಊರಾಡಾಕೆ ಸುರುಮಾಡ್ದೆ. ಊರಾಡಾದು ಅಂದ್ರೆ ದೇವರ್ದು ತೀರ್ಥ ತಗಂಡು ಮೈಗಾಕ್ಕಂಡು, ಕಾಸಿ ಆಕ್ಕಂಡು, ಕೈಯಾಗೆ ಒಂದು ಬಾಕು ಇಡ್ಕಂಡು ವಾಲ್ಗ ಬಡಿಸ್ಕಂಡು ಊರೂರ್ಗೆ ಬಿಕ್ಸೆ ಎತ್ತಾಕೆ ಓಗ್ಬೇಕು. ದಿನಾ ಒಂದೊಂದು ಊರ್ಗೆ ಓಗ್ಬೇಕು. ಸೂಗೂರು, ಕಂಬತ್ತಳ್ಳಿ, ಬಿದ್ರಿಕೆರೆ, ರಂಗೆನಳ್ಳಿ, ಸಾಲುಣ್ಸೆ, ಹೊಸಳ್ಳಿ ಗೂಳ್ಯ, ಹುಲಿಕುಂಟೆ, ಬೆಳಗೆರೆ, ನಾಣ್ಣಾಪುರ ಇಂಗೆಲ್ಲ ಓಗ್ತಿದ್ದೆ. ಊರಾಗೆ ಸಣ್ಬತ್ತೇವು ದೊಡ್ಬತ್ತೇವು ಮಸ್ತ್ ಬರ್ತಿತ್ತು. ಉಪ್ಪು, ಉಳಿ ಮೆಣಸಿನಕಾಯಿ, ಹಸಿಹಿಟ್ಟು, ನುಚ್ಚು ಇವನ್ನ ಸಣ್ಬತ್ತೇವು ಅಮ್ತಾರೆ. ರಾಗಿ, ಅಕ್ಕಿ ಜ್ವಾಳ, ಇಂತ ಕಾಳು ಕಡ್ಡಿನ ದೊಡ್ಬತ್ತೇವು ಅಮ್ತಾರೆ. ಬಂದ ಬತ್ತೇವ್ನೆಲ್ಲ ಮೂರ್ಭಾಗ ಮಾಡಿ ಒಂದು ಭಾಗಾನ ಹೊಲೇರ್ಗೆ ಕೊಡ್ಬೇಕು.

ಊರೆಲ್ಲ ಆಡ್ದ ಮೇಲೆ ಸಿಡಿ ಆಡಾಕೆ ಕೋಡಿಹಳ್ಳಿಗೆ ಬತ್ತೇವು ಆಕ್ಕಂಡು ಗಾಡಿ ಕಟ್ಗಂಡು ಓದ್ವಿ, ಅವಾಗ ನಾನು ಗಾಡಿ ಅತ್ತಂಗಿರ್ಲಿಲ್ಲ. ಪೂರಾ ನಡ್ಕಂಡೆ ಓಗ್ಬೇಕಿತ್ತು. ಸಿಡಿ ಆಡಿ ಕಾಸಿ ಉಗ್ಸ ತಂಕಾ ಗಾಡಿ ಅತ್ತಂಗಿಲ್ಲ ಸಿಡಿ ಆದ್ಮೇಲೆ ಪ್ರಸಾದ ತಕ್ಕಂಡು ಗುಡ್ಡತ್ತಾಕೆ ಬಂದು ಕರಿ ಕಂಬ್ಳಿ ಗದ್ಗೆ ಆಕಿ ಎದ್ರು ದೇವ್ರು ಮಾಡ್ದಾಗ ನಾನು ಆಕ್ಕಂಡಿದ್ದ ಕಾಸಿ ತೆಗಿಬೇಕು. ಒಟ್ನಾಗೆ ಸಿಡಿಮುಗಿಯತಂಕ ಆಕಿದ್ಕಾಸಿ ಎಲ್ಡಾ ಮಾಡಾಕು ಬಿಚ್ಚಂಗಿಲ್ಲ. ಅದೇನೋ ಏನ್ಕತೆಯೋ ಆವಾಗ ಎಲ್ಡಾನೂ ಬರ್ತಿರ್ಲಿಲ್ಲ. ಒಟ್ಯಾಗೆ ಏನಾದ್ರೂ ಇದ್ರೆ ತಾನೇ ಬರೋದು. ಬರೀ ಒಂದತ್ತು ಉಪಾಸ ಇರ್ಬೇಕಿತ್ತು. ಒಟ್ಟು ಒಂಬತ್ತು ದಿನ ಇಂಗೆ ಇರ್ಬೇಕಿತ್ತು.

ಪ್ರಾಯ–ಪುಳಕ

ನಾನು ಒಳ್ಳೆ ಕೋರುಡ್ಗ ಮೈಕೈ ತುಂಬ್ಕೊಂಡು ಒಳ್ಳೆ ಗಟ್ಟಿ ಮುಟ್ಟಾಗಿದ್ದೆ ಇನ್ನೂ ಮದ್ವೆ ಆಗಿರ್ಲಿಲ್ಲ. ಅವಾಗ ನಾನು ಒಬ್ಬಾಯಮ್ಮನ್ನ ಮಾಡ್ಕಂಡಿದ್ದೆ. ಅದ್ಕೆ ಊರೆಲ್ಲರೂ ಎದ್ರಾಗಿ ಕಣ್ಣಾಗಿ ಕಾವ್ಲು ಕಾಯ್ತಿದ್ರು, ಒಂದಿವ್ಸ ಏನ್ ಮಾಡಿಬಟ್ನಂದ್ರೆ ಕಪ್ಲಿ ಬಿಟ್ಕಂಡು ಊರಾಕೆ ಬಂದೆ. ಅವಾಗ ಆಯಮ್ಮ. 'ಒಡಕ್ಲಾಕಿ ಊರ್ನರುಬ್ಬಿದ್ನಿ, ಮನೆಯಾಗೆ ಗಂಡ ಇಲ್ಲ ಬಿರೀನ ಬಂದೋಗಾಕೇಳು' ಅಂತ ಏಳ್ಕಳಿಸಿದ್ಲು. ನಾನು ಸೀದ ಓದೆ. ಅಯಮ್ನ ಮನೆಯೊಳ್ಗೆ ಉಮ್ಮಾ ಕುಕ್ಕಂಡಿದ್ದೆ. ಅದ್ನ ಇನ್ನೊಬ್ಬ ನೋಡ್ಬಿಟ್ಟು ಗಂಡನ್ನೂಟೆ ಏಳ್ಬಿಟ್ಟ. ಆಯಪ್ಪ ಬರಬರ ಬಂದ್ಬಿಟ್ಟ. ಅವಾಗ ನಾನು ಗಂಡ ಬರೋದ್ನ ನೋಡ್ಬಿಟ್ಟೆ. ರಪ್ನ ಗೆರ್ಸೇಕೆ ದುಮ್ಕಿ ಗಪ್‌ಚುಪ್ ಕುತ್ಕಂಡ್ಬಿಟ್ಟೆ, ಗಂಡ ಬಂದು ಗೆರ್ಸೆಗೇ ಒರಕ್ಕಂಡು ಕುತ್ಕಬೇಕಾ! ನನ್ಗೆ ಜೀವ್ದಾಗೆ ಜೀವಿಲ್ಲ. ಆಮೇಲೆ 'ಈರ್ಬಡ್ವ ಬಂದಿದ್ನಂತೆ ಯತ್ಲಾಗೋದ?' ಅಂತಂದಿದ್ಕೆ ಹೆಂಡ್ತಿ 'ಯಾವ ನನ್ಮಗ ಏಳಿದ್ದು ನಿನ್ಗೆ? ಇಲ್ಲದ್ ಸುಳ್ಳಾಡಬ್ಯಾಡ' ಅಂತೇಳಿ ಸಿಟ್ಟಾದ್ಲು ಕೊನ್ಗೆ ಕಾಪಿಕುಡ್ದು ಅದೇ ಓದ.

ಇಂತಾದ್ದೇ ಇನ್ನೊಂದು ಕತೆ ಐತೆ. ಏನಪ್ಪಾಂದ್ರೆ ಶಿಡ್ಲಯ್ಯನ್ಕೋಟೆ ಮೋಟ್ಗ್ಯ ಈರಜ್ಜ ಶಿವಮೊಗ್ಗದ್ಕಡ್ಗೆ ಕಂಬ್ಳಿ ಮಾರಾಕೆ ಓಗ್ತಾ ಬರ್ತಾ ಇದ್ದ. ಅಂಗಾಡಿ ಇಂಗಾಡಿ ನವ್ಲೆ ಊರಾಗೆ ಮದ್ವೆ ಆದ. ಆಮೇಲಿಂದ ಅಲ್ಲೆ ಜಾಗ ತಗಂಡು ದೊಡ್ಡ ಸಾವ್ಕಾರ ಆಗಿದ್ದ. ನಾನು ಅಲ್ಗೆ ಎಂಗೋದ್ನೊ ಆ ಪರಮಾತ್ಮನಿಗೇ ಗೊತ್ತು ! ಅಲ್ಬಿದ್ದು ಇಲ್ಬಿದ್ದು ಅಲ್ಲೋಗಿ ಸೇರ್ಕೊಂಡ್ಬಿಟ್ಟೆ, ಅವ್ರು ನನ್ನಸುಕ್ವಾಗಿ ಇಟ್ಕಂಡಿದ್ರು ಮನೆಮಗಂತರ ನೋಡ್ಕಮ್ತಿದ್ರು, ಮನೆಕೆಲ್ಸ ಆದ್ಮೇಲೆ ಶಿವಮೊಗ್ಗಕ್ಕೆ ಗರಡಿ ಸಾದ್ನೆ ಮಾಡಾಕೆ ಓಗಿ ಬರ್ತಿದ್ದೆ. ನವುಲೆ ಊರಾಗೆ ಒಂದು ಲಿಂಗಾಯತ್ರ ಮನೆ ಇತ್ತು. ಆ ಮನೆಯೊಳಗೆ ಇಬ್ರು ಉಡ್ಗೇರು ಇದ್ರು, ಅದ್ರಾಗೆ ಒಬ್ಬಳನ್ನ ನಾನು ಮಾಡ್ಕಂಡಿದ್ದೆ. ಆ ಉಡ್ಗಿ ಅಮ್ಮ ನನ್ನನ್ನ ಬಾಳ ಚೆನ್ನಾಗಿ ನೋಡ್ಕಮ್ತಿತ್ತು. ಊರ್ಕಡೆ ಓಗಾದ್ಯಾಸಾನೆ ಮರ್ಸಿಬಿಟ್ಟಿದ್ರು, ಅವ್ರು ನನ್ನ ಅವ್ರ ಕುಲ್ದಾಕೆ ಆಕ್ಕಂಡು ಮದ್ವೆ ಮಾಡ್ಬೇಕಂತ ಕಾದಿದ್ರು, ನಮ್ಮೊರು ಈ ಬಾದ್ಮೆನ ಎಲ್ಲೋ ಕೇಳ್ಬಿಟ್ಟಿದ್ರು, ಆವಾಗ ನಮ್ಮಣ್ಣನೂ, ಸಣ್ಣರಂಗಜ್ಜಾರ ರಂಗಜ್ಜನೂ ಸೀದ ಅಲ್ಗೆ ಬಂದು ಊರ್ಗೆ ಓಗಾಕೆ ಕರೆದ್ರು, ಇದ್ಕೆ ಸಾವ್ಕಾರ್ರೂ ಒಪ್ದ.

ಈಕಡೆ ಆವುಡ್ಗಿ ಬಿಡಂಗಿಲ್ಲ. ನಾನು ಅವರ್ಗೆ ಏನೇನನೋ ಸಮಾಧಾನ ಹೇಳಿ ಅದೇ ಬಂದ್ಬಿಟ್ಟೆ. ಆಮೇಲೆ ಆ ಉಡ್ಗಿ ಎಲ್ಡು ಕಾಗ್ದ ಹಾಕಿದ್ಲು. ನಾನು ಜಮ್ಮಯ್ಯ ಅಮ್ಲಿಲ್ಲ ಜಪ್ಪಯ್ಯ ಅಮ್ಲಿಲ್ಲ ಪಾಪ ! ಅವ್ರೂನೂ ಸುಮ್ನಾದ್ರು.

ತಿರ್ಗ, ನಾನು ಮದ್ವೆ ಆದ್ಮೇಲೆ ಪಗಡಲ್ಬಂಡೆ ಅಣ್ಣಯ್ಯನ್ನ ಕರ್ಕಂಡು ಶಿವಮೊಗ್ಗಕ್ಕೆ ಕಂಬಳಿ ತಗಂಡೋದೆ. ಅವಾಗ ನವುಲೆಗೆ ಓಗಿ ಆ ಉಡ್ಗಿ ಮನ್ಗೆ ಓಗಿ ಮಾತಾಡಿಸಿದ್ವಿ. ಅವ್ರು ನಮ್ಮನ್ನ ಚೆನ್ನಾಗಿ ನೋಡ್ಕಂಡು ಒಳ್ಳೊಳ್ಳೇದು ಮಾಡಿಕ್ಕಿದ್ರು. ಉಂಡ್ವಿ. ನಾನಾಗ ಅವ್ರಿಗೆ ಹೇಳ್ದೆ– ಋಣಾನುಬಂಧ ಎಲ್ಲಿತ್ತೋ ಅಲ್ಲಿ ಆಯ್ತು ಮನ್ಸಿಗೆ ನೋವು ಮಾಡ್ಕಬ್ಯಾಡ್ರಿ ಅಂದೆ. ಅವ್ರು ಸುಮ್ನಾದ್ರು. ರಾತ್ರಿ ಅಲ್ಲೇ ಮನಿಕ್ಕಂಡಿದ್ವಿ, ಬೆಳಿಗ್ಗೇನೇ ಎದ್ದು ನಮ್ಮೂರು ಸೇರ್ಕಂಡ್ವಿ.

ಕಳ್ಳನೊಂದಿಗೆ ಕಾದಾಟ

ನಾನು ಉಣ್ಸೆಮರ ಬಡಿಯಕೋಗಿ ಅದ್ರ ಕೂಲಿದುಡ್ನಿಂದ ಒಂದು ಎತ್ತು ತಂಗಡಿದ್ದೆ. ಅದು ಒಳ್ಳೆ ಜುಂಜಪ್ಪ ಬಸ್ವ ಆದಾಂಗಾಗಿತ್ತು. ಅದ್ರ ಜತ್ಗೆ ಒಂದು ಬಡೆತ್ತು ಇತ್ತು. ಪಗಡ್ಳ ಬಂಡೆಯಿಂದ ಗಾಡಿ ಒಡ್ಕಂಡ್ ಬರಾಣಂತೇಳಿ ಒಂದಿನ ನಸಿಗ್ಗಾಲೆ ನಮ್ಮಮ್ಮಂತಾಗೆ ಮುದ್ದೆ ಮಸ್ರು ಬುತ್ತಿಕಟ್ಟಿಸ್ಕಂಡು ಎಲ್ಡು ಕಟ್ಟು ಬೀಡಿ ಇಕ್ಕಂಡು ಎತ್ತು ಒಡ್ಗಂಡು ಹೊರ್ಟೆ. ಬುಡ್ರುಕುಂಟೆಗೆ ಹೋದೆ. ಬೆಳಗಾಗ್ತಾ ಬಂತು. ಕ್ವಾಟ್ಗೆ ಹೋದೆ ಚೆಕ್ಕುಂಬುತ್ತಾತು. ಆದ್ಯಾಗೆ ಸೌತೆಹಣ್ಣಿನ ಗಾಡಿ ನಿಂತಿತ್ತು. ನಾಕಾಣೆ ಕೊಟ್ಟು ದೊಡ್ಡು ಹಣ್ಣು ತಗಂಡೆ. ಇನ್ನೊಂದು ನಾಕಾಣೆಗೆ ಒಂದುಂಡೆ ಬೆಲ್ಲ ತಗಂಡೆ. ಒಂದ್ಕೈಯ್ಯಾಗೆ ಬೆಲ್ಲ, ಒಂದ್ಕೈಯ್ಯಾಗೆ ಸೌತೆ ಹಣ್ಣು ತಿಂದ್ಕಮ್ತ ನಡೀತಾ ಇದ್ದೆ. ಕ್ವಾಟೆ ಬಿಟ್ಟು, ಸ್ವಲ್ಪ ದೂರ್ದಾಗೆ ಕರಿತಿಟ್ಟೆಹಳ್ಳ. ಆ ಹಳ್ದಾಗೆ ಚೆಲ್ಲೂರು ನಿಂಗ ಒರ್ಸಾ ಒಂದೊಂದು ಕೂನಿ ಮಾಡಾನಂತೆ ! ನನ್ಗೆ ಇದು ಗೊತ್ತಿಲ್ಲ. ಅವಾಗ ರೋಡು ಇಲ್ಲ. ಕೆಳಾಗೆ ಹಳ್ದಾಗೆ ಇಳ್ದು ತಿರ್ಗ ಗಡ್ಡೆ ಹತ್ತಿ ಮುಂದ್ಕೆ ಓಗ್ಬೇಕು. ಕಳ್ಳ ಹಳ್ದಾಗೆ ಕುಕ್ಕಂಡಿದ್ದು ನಾಕಾಣೆ. ಸೀದ ಹಳ್ದತ್ರ ಓದಾಗ ಕೈಯಾಗಿದ್ದ ಹಣ್ಣು ಮುಗಿತು ಬೆಲ್ಲನೂ ಮುಗೀತು. ನೋಡ್ತೀನಿ ! ಅಲ್ಲಿ ಕಳ್ಳ ಕುಂತವ್ನೆ !! ಕರೇನಿಕ್ಕರು, ಬಿಳಿಬಾಡಿ ಇಕ್ಕಂಡವ್ನೆ. ಸಿಂಹ ಸಿಂಹ ಆಗವ್ನೆ, ನನ್ನ ನೋಡಿದ್ಕೂಡ್ಲೆ ನಂತಾಕೆ ಬಂದ್ಬಿಟ್ಟು ಬಡೆತ್ತಿನ ಹಗ್ಗ ಇಡ್ಕಂಡ. “ಏನೋ ಎಲ್ಲೋಗ್ತಿದಿಯಾ ? ನಿಂತಾಗೇನೈತೆ ಕೊಡೋ” ಅಂದ. ನಾನೇನ್ಮಾಡ್ದೆ ಎತ್ತು ಬಿಟ್ಟು ಹಿಂದ್ಕೆ ನಿಂತ್ಕಂಡೆ. ಯಾಕೆಂದ್ರೆ ಅಲ್ಲಿ ಒಂದು ಕಲ್ಲು ಇತ್ತು. ಅದ್ನ ಮೆಲ್ಗೆ ತಗಂಡು ಅವನ ಮುಸ್ಡಿಗೆ ಬಡೀಬೇಕು ಅಂತ ಯೋಚ್ನೆ ಮಾಡ್ದೆ. ನನ್ಗೆ ಯಾರಿದ್ದಾರೆ ಅಲ್ಲಿ ? ಈ ಕಲ್ಲೆ ಧೈರ್ಯ ಕೊಡ್ತು ನನ್ಗೆ. ಕಳ್ಳ “ತಗಂಬಾರ ಅದೇನು” ಅಂದ. “ಏನಿಲ್ಲ ಸ್ವಾಮಿ ಇಷ್ಟಕ್ಕೆ ಯಾಕೆ ತಡ್ಕಂಡಿದಿಯಾ ಬಿಡು ಓಗಾಕೆ ಹೊಟ್ಟೆ ಅಸೀತೈತೆ” ಅಂದೆ. ಬಿಡು ಅಮ್ತಿಯೆನಾ ಬೋಳಿಮಗ್ನೆ ಅಮ್ತಾ ಗುದ್ದಾ ಎತ್ತಿನ್ಕಡೆ ಓದ. ಅದೇನ್ಮಾಡ್ತಂದ್ರೆ ಒಟ್ಗೆ ಕೊಂಬಿಟ್ಟು ಎತ್ತೆಸ್ತುಬಿಡ್ತು. ಅವ್ನಿಗೆ ಸಿಟ್ಟುಬಂತು. “ಸುಮ್ಕೆ ನಿಂತಿದಿಯೋನೋ ಬೇಕೂಪ್ ಬಡವಾ” ಅಮ್ತಾ ಅವ್ನ ಸೊಂಟ್ದಾಗಿದ್ದ ಗುದ್ಬಾಕು ಕಿತ್ಕಂಬಿಟ್ಟ, ಅದ್ನೋಡಿ ನಂಜೀವ ತಣ್ಣಾಗ್ತು. ದೇವ್ರಿಟ್ಟಾಂಗಾಗ್ಲಿ ಅಂದ್ಕಂಡು ಮರನಿಂತ್ಕಂಡಂಗೆ

ನಿಂತ್ಕಂಬಿಟ್ಟೆ. ಅವ್ನು 'ಹತ್ರಕ್ಬಂದು ಏನ್ ಅಂಗ್ ನಿಂತ್ಕಡಿದಿಯಾ' ಅಂದ. ನಾನು ದೇವ್ರ ನೆಪ್ಮಾಡ್ಕಂಡು ಕೈಯಾಗೆ ಕಲ್ಲಿತ್ತಲ್ಲ ಅದ್ನ ಬಿಗಿಯಾಗಿ ಇಡ್ಕಂಡು ರಪ್ ಅಂತ ಅವ್ನ ಕಿವಿಗೆ ಬಡ್ದೆ, ಅಯ್ಯಯ್ಯೋ ಅಂತಾ ಕಳ್ಳ ಮರಬಿದ್ದಂಗೆ ಬಿದ್ಬಿಟ್ಟ ನಾನು ಎತ್ಗುಳನ್ನ ಓಡಿಸ್ಕಂಡು ಬದುಕ್ದೆ ಬಡಜೀವ ಅಂದ್ಕಂಡು ಓಟ ಕಿತ್ತೆ.

ಮಿಲ್ಟ್ರಿಯವರ ಕಣ್‌ತಪ್ಪಿಸಿದ್ದು

ನನ್ಗೆ ಒಳ್ಳೆಪ್ರಾಯ. ಇದ್ದಿಕ್ಕಿದ್ದಂಗೆ ಒಂದಿನ ನಮ್ಮೂರ್ಗೆ ಮಿಲ್ಟ್ರಿಜನ ಜೀಪ್ ಆಕ್ಕಂಡು ಬಂದ್ಬಿಟ್ರು. ಮಿಲ್ಟ್ರಿಗೆ ಸೇರ್ಸೊಕೆ ನಮ್ಮನ್ನೆಲ್ಲ ಇಡ್ಕಂಡೋಗೋಕೆ ಬಂದಿದ್ರು. ಅವಾಗ ಭೂತಣ್ಣರಗಿರಿಯಜ್ಜ ಏನ್ ಮಾಡಿಬಿಟ್ಟಂದ್ರೆ ನಮ್ಮನ್ನ ಊರೊರ್ಗೆ ಒಂದು ಉಣ್ಸೆಮರ್ದಾಕೆ ಬಚ್ಚಿಟ್‌ಬಿಟ್ಟ. ದಿನಾ ಬುತ್ತಿ ತಗಂಬಂದು ಕೊಡಾನು. ನಾಕೈದಿನ ಅಂಗೇ ಮಾಡ್ದ. ಆಮೇಲೆ ಮಿಲ್ಟ್ರೇರು ಹುಡ್ಕಾಡಿ ಹುಡ್ಕಾಡಿ ಅದೇ ಓಗಿಬಿಟ್ರು. ಪಾಕೀಸ್ತಾನಕ್ಕೂ ನಮ್ಮ ದೇಸಕ್ಕೂ ಯುದ್ಧ ಆಗ್ತಿತ್ತು. ಅದ್ಕೆ ಸೈನ್ಯಕ್ಕೆ ಜನ ಬೇಕಿತ್ತಂತೆ. ಎಲ್ಲಂದ್ರಲ್ಲಿ ಗಟ್ಟಿಮುಸ್ತಾಗಿದ್ದೋರ್ನೆಲ್ಲ ಏಳ್ದ ಕೇಳ್ದ ಇಡ್ಕಂಡೋಗೋರು, ಅಂಗೇನೇ ನಮ್ಮೂರ್ಗೂ ಬಂದ್ರಿದ್ರು.

ಊರೊಳಗೊಂದು ವ್ಯಾಜ್ಯ

ಒಂದು ಕಣ ವಿಷ್ಯಕ್ಕೆ ಊರಾಗೆ ಎಲ್ಡು ಪಾರ್ಟಿ ಆದ್ವು. ಸಣ್ಣಸಿದ್ದಣ್ಣೋರು ನಾವು ಒಂದು ಗುಂಪು. ನಕ್ಕನಳ್ಳೋರು, ಪೂಜಾರು, ಭೂತಣ್ಣೋರು ಇವರೆಲ್ಲ ಗೌಡ್ರು ಗುಂಪು. ಭೂತಣ್ಣ ಗೌಡ್ರ ಕಡ್ಗೆ ಇದ್ರೂನೂ ನಾವು ಒಂದು ಷರತ್ ಮಾಡ್ಕಿಂಡಿದ್ವಿ, "ಒಂದು ಸೇರು ಅಕ್ಕಿ ಇಟ್ರೆ ಜತ್ಗೆ ಉಂಡಾರು ನಾವು. ಇಂಗಿದ್ದು ನಾವು ಒಡ್ದಾಡ್ಬಾರ್ದು. ಎಂತಾ ಗಲಾಟೆ ಆದ್ರೂ ನಿನ್ನ ನಾನು ಹೋಡೀ ಕೂಡ್ದು ನೀನು ನನ್ನ ಹೊಡೀಕೂಡ್ದು" ಅಂತ ಮಾತಾಡಿದ್ವಿ, ಒಂದೇ ಗಂಗ್ಳದಾಗೆ ಉಂಡಾರು ನಾವು.

ಒಂದಿನ ಬಡಜ್ಜಾರ ಸಣ್ಣಪ್ಪ ಒಳ್ಳೆ ಸರ್ವತ್ನಾಗೆ ಗುಂಪು ಕಟ್ಗಂಡು ನನ್ನಬಡಿಯಾಕೆ ಬಂದ್ಬಿಟ್ಟ, ಅವಾಗ ನಮ್ಮೋರು, ಸಣ್ಣಸಿದ್ದಪ್ಪೋರು ಬಂದ್ಬಿಟ್ರು ಬಾಗ್ಲು ಬಂದೋಬಸ್ತು ಮಾಡಿ "ನಮ್ಕಣ್ಣು ನಿಮ್ಗೆ ಕಾಣಲ್ಲ ನಿಮ್ಕಣ್ಣು ನಮ್ಗೆ ಕಾಣಲ್ಲ. ಒತ್ತಲ್ದೊತ್ನಾಗೆ ಗದ್ಲ ಮಾಡ್ಕಂಬಾದು ಬ್ಯಾಡ. ನೀನು ಒರಾಕೆ ಓಗ್ಲೇಬ್ಯಾಡ" ಅಂತೇಳಿ ಒಳ್ಗೆ ಕೂರ್ಸಿ ಬಂದೋರ್ನೆ ಜೋರ್ಮಾಡಿ ಅದೇ ಕಳಿಸಿದ್ರು.

ಬೆಳಿಗ್ಗೇನೆ ಸಣ್ಣಸಿದ್ದಪ್ಪ ಒಯ್ದಾಟಾ ಆಗ್ತತಂತ ತನ್ಮಕ್ಳನ್ನ ನಸಿಗ್ಗೆ ನಸಿಗ್ಗೇಲೇ ಒಲ್ದಾಕೆ ಕಳಿಸ್ಬಿಟ್ಟ ನಾನು ಮನೆಯಾಗೆ ಒಬ್ನೆ. ನಮ್ಮಣ್ಣ ನೀರ್ಕಡೆಗಂತ ಓಗವ್ನೆ. ಎದ್ರೂ ಪಾರ್ಟೇರು ಕಲ್ ತಂಗಡು ಬೀರ್ಬಿಟ್ಟವ್ರೆ. ನಮ್ಮಣ್ಣ ರೈತಸುರಿಸ್ಕಂಡು ಎದ್ನೊ ಬಿದ್ನೊ ಅನ್ನಂಗೆ ಮಂತಾಕೆ ಓಡ್ಬಂದ. ಅವ್ನಿಂದೆ ನಾಕುಜನ ಎದ್ರೂ ಪಾರ್ಟಿಯವರು ಇದ್ರು. ನಾನೇನ್ಮಾಡ್ದೇ ಅವರ್ನೆಲ್ಲ ಬಡ್ತಾ ಬಡ್ದಾಕ್ಬಿಟ್ಟೆ. ಚಿಕ್ಕಜ್ಜರ ತಿಮ್ಮಪ್ಪ ಇನ್ನೂ ಯಾರ್‍ಯಾರೋ ಸೇರ್ಕಂಡು ಕುಂದ್ಲುಗುರದ ಭೂತಣ್ಣೆ 'ನೀನ್ ಈರ್ಬಡ್ವನ್ನ ಒದ್ದಾಕ್ಕಿದ್ರೆ ನಾವ್ಯಾರೂ ಉಳಿಯಂಗಿಲ್ಲ' ಅಂತೇಳ್ದಾಗ ಬೂತಣ್ಣ "ಇಲ್ರಪ್ಪ ನಾನು ಅವ್ನು ಒಂದು ಸೇರು ಅಕ್ಕೀನ

ಅನ್ನ ಮಾಡ್ಕಂಡು ಒಂದೇ ಗಂಗ್ಳದಾಗೆ ಉಂಡಿದೀವಿ" ಅಂತೇಳ್ದಾಗ ಇವು ಅಲ್ಗೆ ಬಿಡ್ದೆ ಅದು ಇದು ಹೇಳಿ ಉಕ್ರಾಲಚ್ಚಿಬಿಟ್ರು. ಸರಿ ಭೂತಣ್ಣ ಕೊನ್ಗೆ ಒಪ್ಗಂಬಿಟ್ಟ, ಒಪ್ಗಂಡು, ಒಂದುಪಾಯ ಮಾಡ್ದ. ಗೌಡ್ರ ತಿಮ್ಮಕ್ಕನ್ನ ಕರ್ದು "ನೀನು ಸೀದ ಓಗಿ ಈರ್ಬಡ್ವನ್ನ ಅಮರ್ಕಂಬಿಡು ನಾನು ಬಂದು ಬಡ್ದಾಕ್ತೀನಿ" ಅಂತೇಳ್ದ, ಆಯಮ್ಮ ಬಂದು "ಏನಪ್ಪ ಬಡಣ್ಣಾ ಸುಮ್ನೆಯಾಕೆ ಬಡ್ತಾಡ್ತೀರಿ ಒಳಕ್ಕೆ ಓಗಬಾರ್ದೆ" ಅಂತೇಳಿ ನನ್ನ ಬಿಗಿಯಾಗಿ ಹಿಡ್ಕಂಬಿಟ್ಲು. ತಕ್ಷಣಕ್ಕೆ ಭೂತಣ್ಣ ಹಿಂದ್ಗಡೆ ಒಂದು ಬಡ್ಗೆ ತಗಂಡು ನನ್ತಲ್ಗೆ ಬಡ್ದ. ಬಡ್ದು ದೊಣ್ಣೆ ಬಿಸಾಕಿ ಅದೇ ಓಗ್ಬಿಟ್ಟ. ನನ್ತಲೆಯಾಗೆ ತಲೆಯಾಗಿ ರಕ್ತಸುರಿತೈತೆ. ನನ್ನ ಪಡಸಾಲೆ ಒಳ್ಗೆ ಮನಿಗಿಸ್ಯೆದಾರೆ. ಅವಾಗ ಎದ್ರು ಪಾರ್ಟಿಯವ್ರು ಈರ್ಬಡ್ವ ಸತ್ತವ್ನೊ ಬದಿಕವ್ನೊ ನೋಡ್ಕಾಂಬಾ ಅಂತೇಳಿ ಅಕ್ಕಸಾಲ್ರ ಕಾಳಪ್ಪನ್ನ ಕಳಿಸಿದ್ರು, ಅವ್ನು ಬಂದು ನೋಡ್ಕಂಡು ಅವ್ರತ್ರ ಓಗಿ "ಅವ್ನು ಉಳಿಯಲ್ಲ ಸತ್ತೋಗ್ತಾನೆ" ಅಂತ. ಸುದ್ದಿ ಮುಟ್ಟಿಸ್ದ. ಇನ್ನೊಂದ್ಕಡೆ ಅದೇ ಟೈಮ್ಗೆ ದೊಡ್ಡಜ್ಜರ ರಂಗಣ್ಣನ್ನ ಅಕ್ಲಾಕ್ಬಿಟ್ರು, ನನ್ಗೆ ಮಾತು ಬರ್ದಂಗಾಗೈವೆ, ನಮ್ಮಣ್ಣಯ್ಗೆ ಕಣ್ ಕಿತ್ತಂದವೆ ರಂಗಣ್ಣನ್ನ ಮೆತ್ಗೆ ಮಾಡವ್ರೆ. ಏನ್ ಮಾಡ್ಬೇಕು ಭಗವಂತಾ ಅಂತ ನಮ್ಕಡೇರ್ಗೆ ದಿಕ್ತಪ್ದಂಗಾತು. ಕೊನ್ಗೆ ಗಾಡಿಕಟ್ಗಂಡು ನಮ್ಮನ್ನನ ಆಸ್ಪತ್ರೆಗೆ ಸೇರಿಸಿದ್ರು, ಕೇಸಾಯ್ತು. ಕೇಸು ಕೋರ್ಟಿಗೋತು.

ಆಸ್ಪತ್ರೆಯಿಂದ ನಾನು ಊರ್ಗೆ ಬಂದ್ಮೇಲೆ, ನನ್ಗೆ ಭೂತಣ್ಣನ್ಮಾಲ್ಯೆ ಮನ್ಸು ಕುದಿತಾ ಇತ್ತು. ಒಂದ್ಸೇರು ಅಕ್ಕಿ ಇಕ್ಸಿ ಒಂದೇ ಗಂಗ್ಳದಾಗೆ ಜತಿಗೆ ಉಂಡೋನು ನನ್ಗೇ ಮೋಸಾ ಮಾಡ್ದ್ನಲ್ಲ ಇವ್ನ ಒಂದೇಟಿಗೆ ಸಿಗುದ್ಬಿಡ್ಬೇಕು ಅಂದ್ಕಂಡು ಒಂದು ಗುದ್ದಾಕು ಮಾಡ್ಸಿಟ್ಕಂಡಿದ್ದೆ. ಎಂಟು ದಿನ ಅಗ್ಲು ಇಳ್ಳು ಕಾದೆ. ಸಿಗ್ಲಿಲ್ಲ. ಕಾದು ಕಾದು ರೋಸ್ಬಿಟ್ಟೆ. ಭೂತಣ್ಣ ಅಲ್ಬಿದ್ದು ಇಲ್ಬಿದ್ದು ಕುಂದ್ಲುಗುರ ಸೇರ್ಬಿಟ್ಟ.

ನಮ್ಕೇಸು ಕೋರ್ಟಿಗೋತು, ನಾವು ಬಿ.ಎಲ್. ಗೌಡ್ರನ್ನ ವಕೀಲ್ರಾಗಿ ಇಟ್ಕೊಂಡಿದ್ವಿ, ಅವ್ರು ಡಿ.ಎಂ. ರುದ್ರಯಯ್ಯನವರ್ನ ವಕೀಲ್ರನ್ನಾಗಿ ಇಟ್ಕೊಂಡಿದ್ರು. ಕೇಸು ಅಂಗಾಡಿ ಇಂಗಾಡಿ ಒಂದಿನ ನಮ್ಮಂತೇ ಆಗ್ಬಿಡ್ತು, ಆವಾಗ ಬಿ.ಎಲ್. ಗೌಡ್ರೇನೇ ಮುಂದೆ ಬಂದು ಇನ್ಮೇಲಾದ್ರು ಊರಾಗೆ ಎಲ್ರೂ ಒಟ್ಗೆ ಬಾಳ್ಕೊಂಡು ಅಣ್ಣತಮ್ಮಂದ್ರಂಗೆ ಹೋಗ್ರಿ ಅಂತೇಳಿ ಅವ್ರಿಗೂ ನಮ್ಗೂ ರಾಜಿ ಮಾಡಿಸಿದ್ರು.

ಹಬ್ಬ ಹರಿಸ್ಯಾವೆ

ನಮ್ಕಾಲ್ದಾಗೆ ಹಬ್ಬ ಹರಿಸ್ಯಾವೆ ದೇವ್ರು ದಿಂಡ್ರನ್ನ ಬಾಳ ಚೆನ್ನಾಗಿ ಮಾಡ್ತಿದ್ರು. ಇವಾಗೆಲ್ಲ ಬೇಕಾಬಿಟ್ಟಿ ಮಾಡ್ತಾರೆ. 'ಹೊರ್ಬೀಡು' ಅಂತ ಬಿಡ್ತಾ ಇದ್ವಿ. ಹೊರ್ಬೀಡಂದ್ರೆ ಊರ್ಗೆ ಏನಾದ್ರೂ ತೊಂದ್ರೆ ಆದ್ರೆ, ರೋಗ ರುಜಿನ ಬಂದ್ರೆ ಎಲ್ರೂ ಸೇರಿ ಕೋಳಿಕೊಕ್ರೆ ದನಕರು ಉಡಗ್ರು ಉಪ್ಡೆ, ಯಾರ್ನೂ ಬಿಡ್ದೆ ದೇವ್ರ್ನ ಒಳ್ಗಿಸ್ಕಂಡು ಊರ್ಬಿಟ್ಟು ಊರ್ವಾಚ್ಗಿಗೆ ಕಳ್ಳೆ ಬಡ್ದು ಕಪ್ಲಾಗೆ, ತೊರೆಗಡ್ಡೆ, ಅಲ್ಲಿ ಇಲ್ಲಿ ಎಲ್ಲಿ ನೆಳ್ಳು ನೀರು ಇರುತ್ತೋ ಅಲ್ಲಿ ಬೀಡು ಬಿಡ್ತಿದ್ವಿ, ಊರೊಳ್ಗೆ ಒಂದು ನರಪಿಳ್ಳೆ ಇರಂಗಿಲ್ಲ. ಅಂಗೇನೇ ಬೇರೆ ಕಡೆಯಿಂದ ಊರಾಕೆ–ಯಾರೂ ಬರಂಗಿಲ್ಲ. ಮಣೇಗಾರ್ರು ಊರು ಸುತ್ತ ಕಾವ್ಲು ಕಾಯ್ತಿದ್ರು.

ಬೆಳ್ಳಂಬೆಳಿಗ್ಗೇನೆ ಊರಂಬೋ ಹೆಸ್ರಿರೋ ಊರಿಂದ ಅಂದ್ರೆ ಸೂಗೂರು, ಹೊಸೂರು, ಬೇತೂರು ಇಂತ ಕಡೆಯಿಂದ ಬೆಂಕಿತರ್ಬೇಕಿತ್ತು. ಬೆಂಕಿತರತಂಕ ಬೆಂಕಿಕಡ್ಡಿಗೀರಂಗಿಲ್ಲ, ಒಲೆ ಹಚ್ಚಂಗಿಲ್ಲ, ಬೆಂಕಿ ತರೋದು ಅಷ್ಟೊಂದು ಸುಲಭದ ಕೆಲ್ಸ ಆಗಿರ್ತಿಲ್ಲ, ಬೆಂಕಿ ತರಾಕೆ ಹೋದೋನು 'ಊರು' ಅಂಬೋಹೆಸ್ರಿನ ಊರ್ಗೆ ಹೋಗಿ ಅಂಗೂ ಇಂಗೂ ಎಂಗೋ ಅಂತೂ 'ಬೀಡ್ಯಾಗೆ' ಬೆಂಕಿ ಹಚ್ಕೊಂಡು ಅದ್ನ ಕುಳ್ಳಿನಾಗೆ ಇಕ್ಕಂಡು ಜಾಸ್ತಿ ಬೆಂಕಿ ಮಾಡ್ಕಂಡು ಓಡಿ ಬರ್ತಿದ್ದ. ಆವಾಗೇನಾದ್ರೂ ಆ ಊರ್ನ್ಯಾಗೆ ಯಾರ್ಗಾದ್ರೂ ಇವ್ನು ಬೆಂಕಿ ತಗಂಡೋಗಾಕೆ ಬಂದಾನಂತ ಗೊತ್ತಾದ್ರೆ ಅವ್ನ ಅಲ್ಲೇ ಕಡ್ದಾಕ್ತಿದ್ರು, ಏನಿದ್ರೂ ಅವ್ರ ಊರೊಲ್ಮಾರಿಂತಕ ಅವ್ರಿಗೆ ಅಧಿಕಾರ. ಒಲ್ಮಾರು ದಾಟಿ ಬಂದ್ರೆ ಅವ್ರಿಗೆ ಏನ್ಮಾಡಾಕಾಗ್ತಿರ್ಲಿಲ್ಲ, ಇಂತಾ ಕಷ್ಟ ಇದ್ರೂನೂ, ಬೆಂಕಿತರಾಕೆ ನಾನೋಗ್ತೀನಿ ನಾನೋಗ್ತೀನಿ ಅಂತೇಳಿ ಮ್ಯಾಲೆಬಿದ್ದು ಬರೋರು. ಬೆಂಕಿತರೋದಂದ್ರೆ ಒಂದು ರೀತಿ ಅದು ಗಂಡಸ್ತನ ಅಂದ್ಕಮ್ತಿದ್ರು. ಬೆಂಕಿ ತಂದ್ಮೇಲೆ ಮೊದ್ಲು ದೇವ್ರು ಮುಂದೆ ಬೆಂಕಿ ದೊಡ್ದು ಮಾಡಿ, ಆ ಬೆಂಕಿನ ಉಳ್ದೋರೆಲ್ಲ ತಗಂಡೋಗಿ ಒಲೆಹಚ್ಕಂಡು ಗುರುಕೊಟ್ಟಂಗೆ ಹಬ್ಬದಡ್ಗೆ ಮಾಡಾರು. ಇತ್ಲಾಗೆ ದೇವ್ರಿಗೆ ಗಂಗೆ ಪೂಜೆ ಮಾಡಿ ಎಡೆ ಇಕ್ಕಿದ್ಮೇಲೆ ಎಲ್ರೂ ಆನಂದ್ವಾಗಿ ಉಂಡ್ಬಿಡೋರು. ಬೆಂಕಿ ತಂದೋನ್ಗೆ ದೇವ್ರು ಮುಂದೆ ತೀರ್ಥ ಪ್ರಸಾದ ಕೊಟ್ಟು ಹೂವ್ನಾರ ಸಮ್ಮಾನ ಮಾಡೋರು. ಧೂಳು ಸಂಜ್ಗೆ ದೇವ್ರಸಮೇತ ಊರಾಕೆ ಬರೋರು. ಊರುಸುತ್ತ ಅನ್ನಮಸ್ರು, ಗೋಗಂಜು ಆಕಿ ಸೂತ್ಕ ತಗ್ದು ಗುಡ್ಡೆಕಲ್ಗೆ ನೂರಾವೊಂದ್ಕೊಡ ನೀರು ಸುರ್ದು ಪೂಜೆ ಮಾಡಿ ಆಮೇಲೆ ಅವ್ರ ಮನ್ಗೆ ಹೋಗೋರು. ರಾತ್ರಿ ದೇವ್ರ ಕುಣ್ಸೋರು. ಇವಾಗೆಲ್ಲ ಅವ್ಯಾತ್ರವೂ ಮಾಡ್ತಾ ಇಲ್ಲ.

ಕುಲನೆಲೆ

ನಾವು ಕುರುಬ್ರು ಸ್ವಾಮಿ. ನಮ್ದಾಗೆ ಹತ್ತಿಕಂಕಣ ಅಂತ ಎಲ್ಡು ಪಂಗ್ಡ ಐದಾವೆ. ನಾವು ಹತ್ತಿ ಕಂಕಣಕ್ಕೆ ಸೇರ್ದೋರು, ಅದ್ರಾಗೂ ಉಲೇನ್ ಕುರುಬ್ರು ಅಂತ ಕರೀತಾರೆ. ಉಂಡಾಡಿಪದುಮಣ್ಣ ಅಂತ ನಮ್ಮ ಪೂರ್ವಿಕರಲ್ಲಿ ಒಬ್ಬ ಇದ್ನಂತೆ. ಆತಂಗೆ ಆರ್ಜನ ಅಣ್ಣಂದ್ರು, ಅವರ್ಯಾರು ಇವನನ್ನ ಹತ್ರಕ್ಕೆ ಬಿಟ್ಕಂಡಿರ್ಲಿಲ್ಲ. ಇವ್ನು ಯಾವಾಗ್ಲೂ ಗೊಣ್ಣೆಸುರ್ಕಂಡು ತಲೆ ಕೆದರ್ಕಂಡು ಹೊಟ್ಟೆಬಿಟ್ಕಂಡು ಕೇರಿಕೇರಿ-ಸುತ್ಕಂಡು ಇರ್ತಿದ್ನಂತೆ. ಒಂದಿನ ಅವರಮ್ಮಯ್ಯನ್ನ ಉಡ್ಕೊಂಡು ಬರಾನಂತ ಮೂಡ್ಲದಿಕ್ಕಿಡ್ಕಂಡು ಹೋದ. ಅಲ್ಲಿ ಆದ್ಯಾಗೆ ಒಂದು ಉತ್ತ ಇತ್ತು. ಆ ಉತ್ತಕ್ಕೆ ಪೂಜೆ ಮಾಡಿ ಬೆಂಕಿ ಹಾಕಿ ಕಾಯೊಡ್ದು ಕೈಮುಗ್ದ. ಆಗ ಉತ್ತ ಎಲ್ಡುಭಾಗ ಆಗಿ ಅದ್ರಾಗಿಂದ ಕುರಿ ನುಗ್ಗಂದ್ಬಿಟ್ವು. ಅವಾಗ ಇವ್ನ್ಯಾತ್ರವಪ್ಪ ದೇವ್ರೆ ಇಂಗ್ಬಂದ್ವಲ್ಲ ! ಅಮ್ತೇಳಿ ಎದ್ರ್ಕಂಡು ನಿಟ್ಟೆಲ್ದಂಗೆ ಓಡ್ಬಿಟ್ಟ. ಅವ್ನು ಮುಂದೆ ಮುಂದೆ ಕುರಿ ಹಿಂದೆ ಹಿಂದೆ! ಕೊನ್ಗೆ ಅವ್ನು ಹಿಂತಿರ್ಗಿ ನೋಡ್ದ. ಕುರಿಗಳು ಅಲ್ಲೇ ನಿಂತ್ವು, ಆವಾಗ ಕುರಿಗಳನ್ನ ಒಡ್ಕಂಡು ಊರ್ಗೆ ಬಂದ್ನಂತೆ. ನಮ್ಕುರುಬ್ರಿಗೆ ಆವಾಗ್ಲೆ ಕುರಿ ಬಂದದ್ದು. ಈವಾಗ್ಲೂ ಕೂಡ ಕುರಿಹಟ್ಟಿಸುತ್ತ ಅನ್ನ ಮಸ್ರು ಆಕ್ವಾಗ "ಓಲಿಗ್ಗಸ್ವಾಮಿ ಓಲಿಗ್ಗಾ, ಉಂಡಾಡಿ ಪದುಮಣ್ಣ ಓಲಿಗ್ಗಾ, ಕೋಡಾಳಮ್ಮ ತಾಯಿ ಓಲಿಗ್ಗಾ, ಏಳುಕೋಟಿ ಮೈಲಾರ ಲಿಂಗ ಸ್ವಾಮಿ ಓಲಿಗ್ಗಾ, ಕುಂಟುಕುರಿ ಎಂಟುಮರಿ ಈಯ್ಲಿ ಓಲಿಗ್ಗಾ" ಅಮ್ತಾ

ಪರಮಾತ್ಮನ ಧ್ಯಾನ ಮಾಡ್ತಾ ಉಂಡಾಡಿ ಪದುಮಣ್ಣನ್ನ ಹೆಸ್ರು ಹೇಳ್ದೆ ಹಾಲುಮಸ್ರು ಚೆಲ್ಲದಿಲ್ಲ.

ಕುಲಕಸುಬು

ನಮ್ಮ ಕುಲಕಸುಬು ಕುರಿತುಪ್ಪ ಕತ್ರಿಸೋದು, ಕಂಬ್ಳಿನೇಯೋದು. ಕುರಿಗಳನ್ನ ಯಾವ ಜಾತೇರು ಸಾಕಿದ್ರೂ ತುಪ್ಪ ಕತ್ರಿಸೋದು ನಮ್ಮ ಕುರುಬ್ರೆ. ತುಪ್ಪ ಕತ್ರಿಸೋದು ಅಂದ್ರೆ ಅದ್ಕೂ ಒಂದು ನೇಮ ಐತೆ. ಮೊದ್ಲು ಕುರಿಗಳ್ನು ನೀರ್ಗೆ ಬಿಡ್ಬೇಕು ಆಮೇಲೆ ಬಿಸ್ಲಿಗೆ ಒಣಗಿದ್ಮೇಲೆ ಒಂದೊಂದೇ ಕುರೀನ ಅಂದ್ರೆ ತುಪ್ಪಾನ ಕತ್ರಿಸೋಕೆ ಸುರುಮಾಡ್ತಾರೆ. ನೂರು ಕುರಿ ಕತ್ರಿಸಿದ್ರೆ ಮೂರು ಕುರಿಸಿಂಬೆ ಕೊಡ್ಬೇಕು. ಸಿಂಬೆ ಅಂದ್ರೆ ಒಂದು ಕುರಿ ಕತ್ರಿಸಿದ ತುಪ್ಪ ಎಲ್ಲಾ ಒಂದ್ಕಡೆ ಕೂಡಿಟ್ಕಂಬದು. ಅಂಗೇ ಮೂರು ಕುರಿದು. ಇದೇನೆ ಕತ್ರಿಸಿದವರಿಗೆ ಕೂಲಿ. ಇದು ಒಬ್ಬಂದು. ಇಂಗೇನೆ ಹತ್ತು ಹನ್ನೆಲ್ಡು ಜನ ಜೊತೆ ಇರ್ತಾರೆ. ಅವರ್ಗೂನು ಅಂಗೇನೆ. ಈ ಹತ್ತು ಜನದಾಗಿ ಒಬ್ಬ ಯಜಮಾನ ಇರ್ತಾನೆ. ಅವನ್ಗೆ ಸ್ವಲ್ಪ ಜಾಸ್ತಿ ಸಿಂಬೆ.

ನಾನೊಂದ್ಸಲ ಅಮ್ನಟ್ಟಿಯಲ್ಲಿ ಕುರಿಕತ್ತರ್ಸಿಕೆ ಹೋಗಿದ್ದೆ. ಅಲ್ಲಿ ಬಲವಾದ ಪಟ್ಲಿ. ಅದ್ನ ಕೆಡವ್ಕೊಂಡು ಮ್ಯಾಲೆ ಕುತ್ಕಂಡು ಕತ್ತರ್ಸಬೇಕು ಆವಾಗ ಅದ್ನ ಹಿಡ್ಕಂಬಾಕಂತ ಹತ್ರಕೆ ಹೋದೆ. ಅದೇನ್ಮಾಡ್ತು ಜಾಡಿಸಿ ಒದ್ದು ಬಿಡ್ತು. ನನ್ನ ಮೂತಿ ಮೂಗ್ನಾಗೆ ಸಿಕ್ಕುಕ್ಕೊಂಡ್ತು ನೋಡಪ್ಪಾ ! ಆದ್ರೂನೂ ಬಿಡ್ಲಿಲ್ಲ. ಬಾಯಾಗೆ ಮೂಗ್ನಾಗೆ ರಗ್ತ ಸುರೀತಿದ್ರೂ ಎಡಬಿಡ್ದೆಂಗೆ ಕೆಡವ್ಕೊಂಡು ಕತ್ತರ್ಸಿಬಿಟ್ಟೆ. ಅಲ್ಲಿದ್ದೋರೆಲ್ಲ ಓಡಿಬಂದು ನನ್ಮುಸ್ನಿ ಕಣ್ಬುಡ್ಡೆ ನೋಡಾಕತ್ತಿದ್ರು. ಈರ್ಬಡಣ್ಣ ಏನಾದ್ನೊ ಏನೋ ಅಮ್ತ ಅವ್ರಿಗೆ ಗಾಬ್ರಿ, “ಏ ಸುನ್ಮಿರ್ರೊ ನನ್ಗೇನೂ ಆಗಿಲ್ಲ. ನೀವೆಲ್ಲ ದೂರ ಸರೀರಿ” ಅಮ್ತೇಳಿ ಮೈಮ್ಯಾಲೆ ಬಂದೋನಂಗೆ ಒಂದೇ ಸಮ್ನೆ ಸಿಟ್ನಾಗೆ ತುಪ್ಪ ಕತ್ತರ್ಸಿಬಿಟ್ಟೆ. ಅಲ್ಲಿದ್ದೋರೆಲ್ಲ ಮೂಗ್ನಮೇಲೆ ಕೈಯಿಟ್ಕಂಡು ಸುಮ್ನೆ ನೋಡ್ತಾ ನಿಂತ್ಕಂಡ್ರು. ಕುರಿ ಕತ್ತರ್ಸೋದು ಅಷ್ಟು ಸುಲ್ಬದ್ಕೆಲ್ಸಲ್ಲ. ಸೊಂಟ್ನೋವು ಬರುತ್ತೆ. ಬೆಳ್ಗೆಲ್ಲಾ ಬಾವು ಬಂದು ಮುದ್ದೆ ತಿಂಬಾಕೆ ಬರಲ್ಲ.

ಅಮ್ನಟ್ಟಿ ಅಂದ್ನಲ್ಲ ಅಲ್ಲಿ ಅವತ್ತು ರಾತ್ರಿ ಕುರಿ ಕತ್ರಿಸ್ದೋರ್ಗೆಲ್ಲ ಉಂಬಾಕೋಗ್ಬೇಕು. ನಮ್ಮ ಕಣಜ್ನಳ್ಳಿ ರಾಮಜ್ಜ “ನೀನು ದೊಡ್ಡ ಮನ್ಗೆ ಉಂಬಾಕೋಗು, ನಾವು ಬ್ಯಾರೋರ ಮನ್ಗೆ ಓಗಿ ಬರ್ತೀವಿ” ಅಂದ. ಸರಿ ಅಂತ ನಾನು ಆ ದೊಡ್ಮನ್ಗೆ ಉಂಬಾಕೆ ಓದೆ. ಉಳ್ದೋರು ಅವ್ರ ಮನೆ ಇವ್ರ ಮನೆ ಅಂತೇಳಿ ಓದ್ರು. ನಾನೋದ ಮನೆ ಹಿತ್ಲಾಗೆ ಸೊಪ್ಪು ಬೆಳ್ಸಿದಾರೆ. ಆಸೊಪ್ಪು ಕೊಯ್ಕಂಡ್ಬಂದು ಸೊಪ್ಪಿನ್ಸಾರು ಮಾಡಿದ್ರು. ಅದ್ರಾಗೆ ಒಂದು ಸಣ್ಣದೊಣೆಕ್ಯಾತ ಬಿದ್ಬಿಟ್ಟೈತೆ. ಅದ್ನ ಯಾರೂ ನೊಡ್ಕಂಡಿಲ್ಲ. ನಾನೂ ಉಂಬಾಕೆ ಕುಂತೆ. ಮುದ್ದೆ ಸಾರು ಇಕ್ಕಿದ್ರು. ಸಾರ್ನಾಗೆ ದೊಣ್ಣೆಕ್ಯಾತ ಬೆಂದು ಅದೂ ಸೊಪ್ನಂಗಾಗೈತೆ. ಅವ್ರು ಉಂಬಾಕಿಕ್ಕಿದ್ರು ಎಂಗೆ ಗೊತ್ತೆ ? ಮುಚ್ಚಳದಾಗೆ ಮುದ್ದೆ ಇಕ್ಕದು ಬಾಳ್ಯಾಗೆ ಸಾರು ಆಕದು. ಅವ್ರೇನೂ ಬ್ಯಾರೆಯಾರೂ ಅಲ್ಲ. ಗೊಲ್ರೇ ನನ್ನ ಮುಟ್ಟಂಗಿಲ್ಲ ನೋಡಂಗಿಲ್ಲ, ಎಲ್ಲಾ ಗೊಲ್ರೂ ಇಂಗೇನೇ ಮಾಡಲ್ಲ. ಅವ್ರು ಮಾತ್ರ ಯಾಕೋ ಅಂಗ್ಮಾಡಿದ್ರು,

ಅಂಗ್ನೋಡಿದ್ರೆ ಗೊಲ್ರೂಕುರುಬ್ರೂ ಒಂದ್ನಾಕ್ಲೆ ಅಣ್ಣತಮ್ಮಂದ್ರು. ಸರಿ ನಾನು ಇಂಗೇನೇ ಮುದ್ದೆಮುರ್ಕಂಡು ಸಾರಿಗೆ ಕುಕ್ಕಂಡ್ರೆ ಬರೇ ದೊಣ್ಣೆಕ್ಯಾತ್ನ ಕಳ್ಳು ಪಚ್ಚೆ ಕಾಣ್ತೈತೆ. ನೋಡ್ಬಿಟ್ಟೆ ಕಣ್ಣಿಂದ ! ಯಂಗುಂಬಾನ ? ಏನ್ಮಾಡಾನ ದೇವ್ರೆ ಪರಮಾತ್ಮ, ಎದ್ದೋಗಾನಂದ್ರೆ ಅವ್ರೇನ್ತಿಳ್ಕಮ್ತಾರೋ ಏನೋ ಅಂದ್ಕಂಡು ಅಂಗೇ ತುತ್ ಹಿಡ್ಕಂಡು ಕುಕ್ಕಂಡೆ. ಬ್ಯಾರೆ ಮಂತಾಕೆ ಉಂಬಾಕೋಗಿದ್ನಲ್ಲ ನಮ್ಮ ರಾಮಜ್ಜ ಬಂದು, 'ಈರ್ಬಡಣ್ಣಾ ಉಂಡಿದ್ದಾಯ್ತೆ' ಅಂತಕೇಳ್ದ ನಾನು ಸನ್ನೆ ಮಾಡಿ ಸಾರು ತೋರಿಸ್ದೆ. ರಾಮಜ್ಜ ಅದ್ನ ನೋಡಿ ಅಂಗೇನೇ ವರಾಕೆ ತಗಂಡೋಗಿ ಮುಸ್ರಾಕಾಕ್ದ. ತಿರ್ಗ ಆಯಮ್ಮ ಇನ್ನೊಂದು ಮುದ್ದೆ ತಂತು. ರಾಮಜ್ಜ 'ಬ್ಯಾಡಮ್ಮೋ ಆವುಡ್ಗ ಉಂಬಾದು ಅಷ್ಟೆ' ಅಂದಾಗ ಅದ್ನ ವಾಪಾಸ್ ತಗಂಡೋತು. ನಿಜ ಏಳ್ಬಿಟ್ರೆ ಆಯಮ್ಮ ಎಲ್ಲಿ ಒದಿತಾರೋ, ಅಥ್ವಾ ಎಲ್ರೂ ಉಂಬಾದೇ ಕೈ ಬಿಡ್ತಾರೋ ಅಂತಾ ಅಂಜ್ಕೆ ಅದ್ಕೆ ಹೇಳಾಕೋಗ್ಲಿಲ್ಲ. ಇಂಗೇನೇ ಇಪ್ಪತ್ತು ದಿನ ಇದ್ವಿ.

ಕುರಿಯೆಲ್ಲ ಕತ್ರಿಸಿ ಆದ್ಮೇಲೆ ಕರಿಕಂಬ್ಳಿಗದ್ಗೆ ಹಾಕ್ಬಿಟ್ಟು ಅದ್ರಮ್ಯಾಲೆ ಒಂದ್ಕಟ್ಟು ಎಲೆ, ಒಂದಷ್ಟು ಅಡ್ಕೆ ಇಡ್ಬೇಕು. ಈಳ್ಯದೊಳ್ಗೆ ಇಪ್ಪತ್ತು ರೂಪಾಯಿ ದುಡ್ಡಿಡ್ತಾರೆ. ಆದುಡ್ಡೇ 'ಬಳೇರೊಕ್ಕ'. ಬಳೇರೊಕ್ಕ ಅಂದ್ರೆ ನಾವು ಇದ್ದಷ್ಟು ಕಾಲ ಪಾಪ ಹೆಣ್ಮಕ್ಳು ಅಡ್ಕೆ ಪಡ್ಗೆ ಮಾಡಿಡ್ತರಲ್ಲ ಅದ್ಕೆ ಅವ್ರ ಕುಸಿಗಾಗಿ ಅವ್ರು ಬಳೆಗೊಟ್ಟಮಕಂತ ನಾವು ಬಳೆರೊಕ್ಕ ಅಂತ ಕೊಡ್ತೀವಿ. ಅದೂ ಆ ಮನೆಯಾಗೆ ಹೆಣ್ಮಕ್ಳಿದ್ರೆ ಮಾತ್ರ ಕೊಡೋದು, ಮುಂದ್ಲ ಕುರಿ ಕತ್ರಿಸಿದೋನ್ಗೆ ಅಂದ್ರೆ ನಮ್ಮ ಗುಂಪ್ನ ಯಜಮಾನ್ಗೆ. ಕುರಿಕತ್ರಿಸಿದ ಮನೆಯೋರು ಒಳ್ಳೆ ಅಡ್ಗೇಮಾಡಿ ತಟ್ಟೆ ತುಂಬಾ ಹಾಲೊಯ್ದು ಉಂಬಾಕಿಕ್ಕಿ ಸಂತೋಸ್ವಾಗಿ ಇರ್ರಪ್ಪ ಅಂತೇಳಿ ಮಡ್ಲಕ್ಕಿ ಹೊಯ್ತಾರೆ. ಮಡ್ಲಕ್ಕಿ ಅಂದ್ರೇನಪ್ಪಾಂದ್ರೆ ಒಂದಿಷ್ಟು ಅಕ್ಕಿ, ಬೆಲ್ಲ, ಉತ್ತತ್ತಿ ಇಟ್ಟು ಟವಲ್ಲಿಗೆ ಸುರೀತಾರೆ. ಆಮೇಲೆ ಇಪ್ಪತ್ತು ಮೂವತ್ತು ಸೇರು ಕಾಳುಕಡಿ ಕೊಡ್ತಾರೆ.

ಕೊನೀಗೆ ಹಾಲು ಚೆಲ್ಲೋದು. ಎಂಗಪ್ಪಾಂದ್ರೆ, ಕುರಿಪಿಚ್ಗೆ ಬೇವಿನಸೊಪ್ಪು ಎಲ್ಲಾ ಚೆನ್ನಾಗಿ ಕುರಿಹಾಲೊಳ್ಗೆ ಕದ್ರಿಬಿಟ್ಟು ಅದ್ನ ಹಟ್ಟಿಸುತ್ತಾ ಚಿಮಿಕಿಸ್ತಾ ಓಲಿಗ್ಗಾಸ್ವಾಮಿ ಓಲಿಗ್ಗಾ ಅಂತೇಳ್ಕಂಡು ಹಾಲಿರೋ ಕಂಚಿನ್ತಟ್ಟಿನ ಡಣಡಣ ಅಂತ ಬಡೀಬೇಕು. ಅವಾಗ ಅಟ್ಯಾಗಿದ್ದ ಕುರಿಗಳೆಲ್ಲ ಬೆದ್ರಿ ಅತ್ಲಾಗಿತ್ಲಾಗೆ ಪರ್ದಾಡಿಬಿಡ್ತಾವೆ. ಬರೀದಾದ ಗಂಗ್ಳಾನ ನೀರಾಕಿ ತೊಳೆಯಂಗಿಲ್ಲ. ಹಾಲು ಚೆಲ್ದೋನು ಆಗಂಗ್ಳದಾಗೇ ಉಣ್ಬೇಕು. ಕೈತೊಳ್ಕಂಡ ನೀರೂ ಕಡೀಕೆ ಚೆಲ್ಲಾಂಗಿಲ್ಲ. ಹಟ್ಟಿ ಬಾಗ್ಲದಾರಿಗೆ ಚೆಲ್ಬೇಕು. ಆಮೇಲೆ ನಾವು ಸಿಂಬೆಸುತ್ಕೊಂಡು 'ಬಿಡ್ತು' ಅನ್ಕೊಕೊಂಡು ಅಲ್ಲಿಂದ ವಾಪಾಸಾಗ್ತೀವಿ.

ನಾವು, ಯಾರ್ಕುರೀ ಕತ್ತರ್ಸಿರ್ತಿವೋ ಅವ್ರಿಗೆ ನೂರ್ಕುರಿಗೆ ಮೂರ್ಕಂಬ್ಳಿ ಕೊಡ್ಬೇಕು. ಕಾರ್ಗೊಯ್ಲು (ಜೂನ್ ತಿಂಗಳು) ಮಾಗಿಕೊಯ್ಲು (ಡಿಸೆಂಬರ್) ಅಂತ ವರ್ಷಕ್ಕೆ ಎಲ್ಡು ಕೊಯ್ಲು ಮಾಡ್ಬೇಕು. ನಾವು ಕೊಡೋ ಮೂರ್ಕಂಬ್ಳಿಯಲ್ಲಿ ಎಲ್ಡುಮಟ್ಟೆ ಕಂಬ್ಳಿ ಒಂದು ಕರೇ ಕಂಬ್ಳಿ. ಮಟ್ಟೆ ಕಂಬ್ಳಿ ಅಂದ್ರೆ ಮಬ್ ಮಬ್ ಆಗಿರುತ್ತೇ. ಒರಟಾಗಿರುತ್ತೇ, ಎಲ್ಬೇಕಾದ್ರೂ ಆಸ್ಬೋದು, ಯಾರ್ಬೇಕಾದ್ರೂ ಒದ್ಕಂಬೌದು. ಕರಿ ಕಂಬ್ಳಿ ಅಂಗಲ್ಲ. ಅದು

ಶ್ರೇಷ್ಠವಾದ್ದು, ಅದ್ರಾಗೆ ಒಂದ ಒಂದು ನಾಮದ್ಕಡ್ಡಿ ಕೊಟ್ಟಿರ್ತಾನೆ. ಅದ್ರಲ್ಲೇ ಗದ್ಗೆ ಆಸಾದು, ಪೂಜ್ಗೆ ಬಳ್ಸಾದು ಮಾಡ್ತಾರೆ. ಎಲ್ಲಂದ್ರಲ್ಲಿ ಅದ್ನ ಆಸ್ಬಾರ್ದು.

ಮುಚ್ಕೊಂಡೋದ ಮಗ್ಗದ್ಗುಂಡಿ

ನಾನು ಮನೆಯಾಗೆ ಮಗ್ಗ ಹಾಕ್ಕಂಡಿದ್ದೆ. ವಾರೆಕ್ಕೆಲ್ಡು ಕಂಬ್ಳಿ ನೇಯ್ತಿದ್ದೆ. ವಾರ್ದಕೊನೆಗೆ ಚಳ್ಕೆರ್ಗ್ಹೋಗಿ ಮಾರ್ಕಂಡು ಬರ್ತಿದ್ದೆ. ಏನೂ ಗಿಟ್ತಿರ್ಲಿಲ್ಲ. ಎಲ್ಲಾ ಅಲ್ಲೆದಲ್ಲೇ ಸರಿಯಾಗ್ತಿತ್ತು.

ಮಾರಾಟದ ಕಂಬ್ಳಿಗೆ ಇಪ್ಪತ್ತು ಇಪ್ಪತ್ತೈದು ಬೀಸು ಇಡ್ತಿವಿ. ಕುರಿಯಾರ್ಗ್ಗೇ ಕೊಡೋಕಂಬ್ಳಿಗೆ ಮೂವತ್ತು ಮೂವತ್ತೈದು ಬೀಸು ಇಡ್ತೀವಿ. ಇಪ್ಪತ್ತೈದು ಎಳೆಗೆ ಒಂದು ಬೀಸು. ಮಾರಾಟ್ದಾವ್ಕೆ ತೆಳ್ಗೆ ಅಣಿ ಆಕ್ಕಮ್ತಿವಿ. ಕುರಿಯಾರ್ಗ್ಗೆ ಒತ್ತೊತ್ತಾಗಿ ಅಣಿ ಅಕ್ಕಾಮ್ತಿವಿ. ಅದ್ಕೆ ಸರಿ ಆಕ್ಟಿಟ್ರೆ ಯಂಥಾ ಮಳೆ ಬಂದ್ರೂ ನೀರ್ ಹಿಡ್ಕಮ್ಮಲ್ಲ.

ಕಂಬ್ಳಿ ನೇಯಾಕೆ ಬೇಕಾದ ಸಾಮಾನಂದ್ರೆ ಕುಂಟೆ, ಅಂಬಣ್ಣೆ, ಒಳ್ಳೆಕೋಲು, ಅಲುಬೆ, ಕಾರಿನ್ದಬ್ಬೆ ಕಚ್ಮಣೆ, ಉಡುಗೋಲು, ರಾಟೆ, ಬೆಸೆ, ಲಾಳಿ–ಇವೇ ಬಾಳ ಬೇಕಾದವು.

ಬರ್ತಾ ಬರ್ತಾ ಕಾಲ ಬದ್ಲಾಯ್ತು. ಜನ ಉಲ್ಲನ್‌ರಗ್ಗು, ಬಣ್ಣದರಗ್ಗು, ಒದ್ಗಮ್ಮಾಕೆ ಸುರುಮಾಡಿದ್ರು, ನಮ್ಕಂಬ್ಳಿನ ಕೇಳೋರು ದಿಕ್ಕಿಲ್ದಾಂಗಾದ್ರು, ನೇದ್ಕಂಬ್ಳಿ ಅಂಗೇ ಉಳಿತಿದ್ವು, ಬಾಳಲಾಸಾಯ್ತು. ಅದ್ಕೆ ಮಗ್ಗನೇ ತೆಗೆದುಬಿಟ್ಟೆ. ನನ್ನಂಗೇನೆ ಬಾಳ ಜನ ಈ ಕಸ್ಬು ಬಿಟ್ಟಿಟ್ಟು ಮಗ್ಗದ್ಗುಂಡಿಗಳ್ನ ಮುಚ್ಚಿಟ್ರು. ಬರೇ ಪುಕ್ಸಟ್ಟೇನೇ ಕುರಿ ಕತ್ರಿಸಿಕೊಂಡೋಗ್ರಿ ಅಂದ್ರೂನೂ ಬರೋರಿಲ್ಲ ಅಂಗಾಗ್ಯೆತೆ ಪರಿಸ್ಥಿತಿ. ಮೊದ್ಲು ಕುರುಬ್ರೇ ಗೊಲ್ರಿಗೆ ದುಡ್ಡುಕೊಟ್ಟು ಕತ್ರಿಸ್ತಿದ್ರು. ಈವಾಗ ಗೊಲ್ರೇ ಕುರುಬ್ರಿಗೆ ಕರ್ದು ಐದು ಹತ್ತು ರೂಪಾಯಿ ಕೊಡ್ತಾರೆ. ಒಂದೊಂದು ಕುರಿಗೆ ಐದು ಹತ್ತು ರೂಪಾಯಿ ಕೊಡ್ತಾರೆ. ಅಂಗಾದ್ರೂ ಈ ಕಸ್ಬು ಮಾಡಾಕೆ ನಮ್ಕೋರು ಮುಂದೆ ಬರೋದು ಕಷ್ಟ. ಯಾಕಂದ್ರೆ ಮೊದ್ಲು ಮನೆಯಾಗೆ ಇದ್ದೋರೆಲ್ಲ ಈ ಕಸಿಬ್ನಾಗೆ ಕೈ ಹಾಕ್ತಿದ್ರು, ಈವಾಗಿನ ಉಡುಗ್ರು ಓದಾಕೆ ಪಾದಾಕೆ ಓಗ್ಬಿಟ್ಟು ನೌಕ್ರಿಗಿವ್‌ಕ್ರಿ ಮಾಡ್ತಾರೆ. ಈ ಕುಲ್ಕಸ್ಬು ಮಾಡಾಕೆ ಬರೋದಿಲ್ಲ. ಆಮೇಲಿಂದ ಇನ್ನೊಂದು ಕಾರ್ಣ ಐತೆ. ಇಡೀದಿವ್ಸವೆಲ್ಲ ನೂಲ್ತೆಗೆದ್ರೆ ಒಬ್ರಿಗೆ ಹತ್ತು ರೂಪಾಯಿ ಗಿಟ್ಟಲ್ಲ. ಬೇರೆ ಕೆಲ್ಸಕ್ಕೆ ಅಂಗೋಗಿಂಗ್ಬಂದ್ರೆ ಐವತ್ತು ಅರವತ್ತು ರೂಪಾಯಿ ಆರಾಮಾಗಿ ಸಿಗುತ್ತೆ. ಈವಾಗ ನಾಜೂಕಿನ ಕಾಲ. ಮನೆಯಲ್ಲಾ ಯಾಕೆ ತುಪ್ಪ ಮಾಡ್ಕಂತಾರೆ ? ಬ್ಯಾಸಾಯದ್ಕಡೆಗೆ ಜಾಸ್ತಿ ಗಮನ ಆಗ್ಯೆತೆ. ಅದ್ಕೇನೇ ಮಗ್ಗದ್ಗುಂಡಿಗಳು ಮುಚ್ಕಂಡೋಗ್ಯಾವೆ. ಆದ್ರೆ ಒಂದ್ಮಾತು, ಮನೆಯಾಗೆ ಉಂಬಾಕೆ ತಿಂಬಾಕೆ ಕಾಳು ಕಡಿ ಬಾಳಷ್ಟು ಇರ್ಬೇಕು, ಅಂಗಿದ್ದೋರು ಈ ಕಸ್ಬು ಮಾಡ್ಕಂಡು ಕಾಲಕ್ಕೆ ತಕ್ಕಂಗೆ ಕೈಚಳ್ಕ ತೋರಿಸಿದ್ರೆ ಐತಲ್ಲಾ ತಿಂಗ್ಳ ತಿಂಗ್ಳ ಲಕ್ಷ್ಮಿ ಹರ್ದು ಬರ್ತಾಳೆ ನೋಡಪ್ಪಾ ! ಆದ್ರೆ ಮಾಡೋ ಮನ್ಸು ಇರ್ಬೇಕಲ್ಲಾ!!

ಕತೆಗಳ ಬೆನ್ನೇರಿ....

ನಾನು ಸಣ್ಣವ್ನಾದಾಗ್ನಿಂದ ಕತೆ ಕೇಳಕ್ಕೆ ಬಾಳ ಇಷ್ಟ ಆಗ್ತಿತ್ತು. ನಾನು ಶಿವಮೊಗ್ಗದತ್ತ ನವುಲಾಗೆ ಇದ್ನಲ್ಲ ಅವಾಗ ಅಲ್ಲೊಬ್ಬ ಕತೆಗಾರ ಇದ್ದ. ಅವ್ನ ಹೆಸರು ನೆನ್ಪಿಲ್ಲ. ಅವ್ನು ನಾನು ಒಟ್ಗೆ ಮನಿಕ್ಕಮ್ತಿದ್ವಿ. ಅವ್ನು ದಿನಾ ಕತೆ ಹೇಳಾನು. ಅವು ನನ್ತಲೆಯಾಗೆ ಅಂಗೇ ಉಳ್ಕಂಡು ಬಂದ್ವು. ನಮ್ದೊಡ್ಡಪ್ಪ ಕುರಿನಿಂಗಣ್ಣನ್ಜೊತ್ಗೆ ಕುರಿ ಕಾಯಕೆ ಓಗ್ತಿದ್ದೆ, ಅವಾಗ ಆಯಪ್ಪ ಸಣ್ಣಪುಟ್ಟ ಕತೆ, ದೇವ್ರಮ್ಯಾಗಳ ಪದ, ಅವು ಇವು ಎಲ್ಲಾ ಕಲ್ಸಿ ಕೊಟ್ಟ. ಕಣಜನಳ್ಳಾಗೆ ಒಬ್ಬಾತನತ್ರ ನಾಕೈದು ಕತೆ ಕಲ್ತೆ ಇಂಗೇನನೇ ಅಲ್ಲಿ ಇಲ್ಲಿ, ಸಣ್ಣಾವು ಪಣ್ಣಾವು ದೊಡ್ಡಾವು ಪಡ್ಡಾವು ಎಲ್ಲಾ ಕುಟ್ಟಾಕಿ ಮೂವತ್ತು ನಲ್ವತ್ತು ಕತೆಗಳನ್ನ ಕಲ್ತಗಂಡಿದಿನ್ನಿ. ನಾಕಲ್ತ ಕತೆಗಳನ್ನ ಯಾರ್ಬೇಕಾದ್ರೂ, ಯಾವಾಗ್ಬೇಕಾದ್ರು ಎಷ್ಟೋತ್ನಾಗ್ಬೇಕಾದ್ರೂ ಕೇಳ್ಲಿ ಮನಗಿದ್ರೂ ಎದ್ದು ಕತೆ ಹೇಳ್ತೀನಿ ಪೂರಾ. ನಾನು ದೇವ್ರ ಪದ, ಕೋಲುಪದ, ಪಂಡ್ರಿಭಜನೆ ಕಲ್ತಿದ್ರೂ ನನ್ಗೆ ಕತೆ ಅಂದ್ರೆ ಪ್ರಾಣ. ಪ್ರಂಡ್ರಿಭಜ್ನೇನ ಪಗಡ್ಲಬಂಡೆ, ಜಾಜೂರು, ಇಲ್ಲೆಲ್ಲ ಕಲ್ಸಿದ್ದೆ. ಆ ಉಡುಗ್ರು ಚೆನ್ನಾಗಿ ಕುಣೀತಿದ್ರು, ಈವಾಗ ಎಲ್ಲಾ ಬಿಟ್ಟವ್ರೆ. ನಮ್ಮೂರಾಗೂ ಕಲ್ಸನಂತ ನೋಡ್ದೆ. ಗಿರೇಗೌಡ್ರು ಬಾಳ ಉತ್ತೇಜ್ನಕೊಟ್ರು. ಏನ್ಮಾಡೋದು ಉಡುಗ್ರು ಕೈಕೊಟ್ರು. ಪಂಡ್ರಿ ಭಜನೇನ ಕಲಿಯೋದು ಬಾಳಕಷ್ಟ. ಎಂಗಾದ್ರಂಗೆ ಮಾಡಕ್ಕಾಗಲ್ಲ. ಅದ್ಕೊಂದು ನೇಮ ಐತೆ. ಪ್ರತಿದಿನ ಒಂದು ದೇವ್ರ ಪೋಟೋ ಇಟ್ಕೊಂಡು ಅದ್ಕೆ ವೀಳ್ಯದೆಡೆ ಇಟ್ಟು ಪೂಜೆ ಮಾಡ್ಬೇಕು. ಆಮೇಲೆ ಪದ ಹೇಳ್ಕೊಂಡು ಕಾಲಾಕಾಕೆ ಸುರುಮಾಡ್ಬೇಕು. ಒಂದೊಂದು ಪದಕ್ಕೆ ಒಂದೊಂದು ತರ ಕಾಲಾಕ್ಬೇಕು, ಕುಕ್ಕಬೇಕು, ನಿಂತ್ಕಬೇಕು, ಮೈಮುರ್ಕಬೇಕು, ಪೈಸ್ಗೆ ಒಡೀಬೇಕು, ಮನಿಕ್ಕಬೇಕು. ಇಂಗೇನೇ ಮೈಯ್ಯೆಲ್ಲಾ ಮುಳ್‌ಮುಳ್ ಆಗುತ್ತೆ. ಅದ್ಕೇನೆ ಪಂಡ್ರಿ ಭಜ್ನೆ ಬಲ್ತಮೈನೋರ್ಗೆ ಆಗಲ್ಲ. ಸಣ್ಮಕ್ಳೇ ಸೂಟು. ಇದ್ಕೆ ಚಕ್ಕೆ, ತಾಳ, ಆರ್ಮನಿ, ಡಕ್ಕಿ ಇವು ಬೇಕೆ ಬೇಕು.

ಈವಾಗ ನಮ್ಮೂರಾಗೆ ಟೇಪು, ಟೀವಿ, ರೇಡಿಯೋ ಎಲ್ಲಾ ಬಂದ್ರಿದ್ರೂ ಜನಕ್ಕೆ ಬೇಕು ಅಂದಾಗ್ಲೆಲ್ಲ 'ಈರ್ಬಡಣ್ಣಾ ಒಂದು ಕತೆ ಹೇಳ್ಬಾರಪ್ಪಾ' ಅಮ್ತಾರೆ. ಕುಸಿಯಾಗಿ ಕೇಳ್ತಾರೆ. ಕಡ್ಲೆಕಾಯಿ ಬಿಡ್ಸೋ ಕಾಲ್ದಾಗಂತೂ ಬರೀ ಇದೇ ಕೆಲ್ಸ. ನಾನು ಯಾರ ಒಲ್ದಾಕೆ ಓಕ್ತೀನೋ ಅಲ್ಲೇ ಜನ ಜಾಸ್ತಿ ಬರಾರು. ಅದ್ಕೆ ಕಡ್ಲೆಕಾಯಿ ಬಿಡ್ಸೋರು ನಗ್ಗೆ ಬರ್ಬೇಕು ಬರ್ಬೇಕಮ್ತ ವರತ್ತಾ ಮಾಡ್ತಾರೆ. ಯಾರ್ಗಮ್ತ ಓಗ್ತೀಯ ? ಆದ್ರೂನೂ ಒಬ್ಬೊಬ್ರಕಡೆ ಒಂದೊಂದು ಸರ್ತಿ ಹೋಗೋದು. ನಾನು ಹೋಗೋದ್ರಿಂದ ಎಂಟು ದಿವ್ಸದ ಕೆಲ್ಸ ನಾಕೇದಿವ್ಸಕ್ಕೆ ಆಗುತ್ತೆ. ಅಂಗ್ ಬರೋರು ಜನ ಕತೆ ಕೇಳಕಂತ. ಸರಿ ಒತ್ತಾಯ ಮಾಡಿ ನನ್ನ ಕರ್ಕಂಡೋಗರೆಲ್ಲ ಕೂಲಿ ಮಾತ್ರ ಎಲ್ಲಾರ್ಗೂ ಕೊಟ್ಟಷ್ಟೇ ಕೊಡ್ತಿದ್ರು ಕಿರ್ಲಿಕಂಡ್ರೂ ಜಾಸ್ತಿ ಕೊಡ್ತಿರ್ಲಿಲ್ಲ.

ನಾನನೇಳ್ಲೋ ಕತೆಗಳನ್ನ ಇನ್ನೊಬ್ರು ಕಲ್ತು ತಿರ್ಗಿ ಏಳ್ತಾ ಇದ್ರೆ ನನ್ಗೆ ಬಾಳ ಕುಸಿ ಆಗುತ್ತೆ, ಕತೆ ನನ್ಜೊತ್ಗೇನೆ ಸಾಯಬಾರ್ದು, ಅದ್ಕೇನೇ ನಾನು ನನ್ಮಕ್ಕಳನ್ನ ಕುಂಡ್ರಿಸ್ಕಂಡು ಕಲಿರಿ ಕಲಿರಿ ಅಂತ ಬಡ್ಕಂಡೆ. ಕೊನೇಮಗ ಸುಧಾಕರ ಮಾತ್ರ ಕಲ್ತವ್ನೆ. ನಮ್ಮನೆಯಾಗಳಾರು

ಕಲೀಲಿಲ್ಲ ಊರಾಗ್ಯಾರೂ ಕಲ್ತ್ಗ್ಮಿಲ್ಲ. ಇಂಗೇ ಆದ್ರೆ ನಾಳೆ ಈರ್ಬಡಜ್ಜನ ಕತೆಗಳು ಮಂಗ್ಮಾಯ ಆಗ್ತವೆ. ಬರೇಕತೆ ಕೇಳೋದೇ ಮುಖ್ಯ ಅಲ್ಲ. ಅವ್ನ ಕಲ್ತ್ಗಂಡು ಇನ್ನೊಬ್ರಿಗೆ ಹೇಳ್ಬೇಕು ಇದೇ ನನ್ನಾಸೆ.

ಏನಾಡಿದೆ ನೀ ಕೇಳಲೆ ಮರುಳೆ
ಗುರುಧ್ಯಾನವ ಮಾಡು ಹಗಲಿರುಳು
ಹುಟ್ಟಿದಾಗಳೆ ತಂದೆತಾಯಿಗಳು
ನಟ್ಟನಡುವೇಲಿ ಹೆಂಡಿರುಕ್ಕಳು
ನಾನು ನೀನೆಂಬುದು ಸುಳ್ಳು ಬರೀ ಸುಳ್ಳು.

ಏನೋನನ್ಗೆ ತಿಳ್ದಿದ್ದು ನೆಪ್ಪಿದ್ದಿದ್ದು ನಿಮ್ಗೇಳಿದ್ನಿ ತಪ್ಪು ಒಪ್ಪು ಇದ್ರೆ ಒಟ್ಟ್ಯಾಕಾಕ್ಕೋಬೇಕು ಇಲ್ಗೇ ನನ್ಮಾತು ಮುಗಿಸ್ತೀನಿ ಸ್ವಾಮಿ ನಮಸ್ಕಾರ.

○

ಕತೆಗಾರನಿಂದ ಹರಿದಾಳೆ ಗಂಗಿ....

(ಈರಬಡಪ್ಪ ಹೇಳುವ ಕೆಲವು ಪ್ರಾತಿನಿಧಿಕ ಕತೆಗಳು)

1. ಬಡಕುದುರೆ ಬಡಜ್ಜ

ಕರಮಾರಳ್ಳಿ ಅಂಬೋದೊಂದು ಪಟ್ನ, ಅದ್ರಾಗೊಬ್ಬ ರಾಜ. ಆ ರಾಜ್ಗೈದು ಜನ ಮಕ್ಕಳು. ಆ ಐದು ಜನ ಮಕ್ಕಳನ್ನೂ ಮಠಕ್ಕೆ ಸೇರಿಸಿಬಿಟ್ಟ, ರಾಜನ್ಮಕ್ಕಳು ಹೋಗ್ತಾರೆಂದಾಗ ಇನ್ನು ಊರಾಗ್ನ ಮಕ್ಕಳನ್ನ ಕೇಳಾಕಾಗುತ್ತ ? ಎಲ್ಲಾ ಹೋಗಾಕತ್ತಿದ್ವು ಆದ್ರೆ ಇವರೆಲ್ಲರಿಂದ ರಾಜನ್ಮಕ್ಕಳನ್ನ ಬ್ಯಾರೆ ಮಾಡಿ ಕ್ಲಾಸು ಮಾಡಾಕೆ ಬ್ಯಾರೆ ಮೇಷ್ಟ್ರ ಒಂದಿಕಂಡ್ರು. ಒಂದು ವರ್ಷ ಆದ್ರೂನೂ ಕೂಡ ಒಂದೂ ಅ ಆ ಇ ಈ ಅಕ್ಷರ ಕಲೀಲಿಲ್ಲ. ಅವ್ರ ಜೊತೆ ಹುಡುಗ್ರು ನಾಕು, ಐದ್ನೇ ಕ್ಲಾಸಿನ್ತಂಕ ಓದಿದ್ರು. ಇವ್ರು ಒಂದಕ್ಷರನೂ ಕೂಡ ಕಲೀಲಿಲ್ಲ. ರಾಜನ್ಗೆ ಬಾಳ ಯೋಶ್ನೆ ಆಯ್ತು. ನನ್ಮಕ್ಳು. ಒಂದು ವರ್ಸ ಆದ್ರೂನೂ ಕೂಡ ಒಂದಕ್ಷರ ಕಲೀಲಿಲ್ಲ. ನನ್ನಿಗೆ ನೋಡಿದ್ರೆ ವಯಸ್ಸಾಗ್ತಾ ಬತು. ಈ ರಾಜ್ಯದರ್ಭಾರ ಆಳಾರ್‍ಯಾರು ? ಅಂತ ಯೋಚ್ನೆ ಮಾಡ್ದ. ರಾಜ್ಗೊಬ್ಬ ಮಂತ್ರಿ ಇದ್ದ. ಮಂತ್ರಿಗೊಬ್ಬ ಮಗಳು ಇದ್ಲು ಬಾಳ ವಿದ್ಯಾವಂತೆ. ಬೆಳಿಗ್ಗೆ ಎದ್ದೇಟ್ಗೆ ರಾಜ ಆಸ್ಗೆ ಮೇಲೆನೆ ಮಂತ್ರೀನ ಕರೇಕಳಿಸ್ಕಂಡ "ಏನ್ ಮಂತ್ರಿ, ನನ್ಮಕ್ಕಳು ಮೋಡ್ರಾದ್ರು ಸುತ್ತಮುತ್ತ ಇರೋ ಮೇಷ್ಟ್ರುಗಳೆಲ್ಲ ಊದ್ರೋದ್ರು ನೀನು ನಾಳೆ ಮದ್ಯಾನದೊಳಗೆ ಇವ್ರಿಗೆ ವಿದ್ಯಾ ಕಲ್ಸೋವಂತ ಗುರುವನ್ನ ತಂದು ನಿಲ್ಸಬೇಕು. ಇಲ್ದಿದ್ರೆ ನಿನ್ನ ತಲೆ ಏಳುನೂರಾಗಂಗೆ ಒಡಿತೀನಿ". ಮಂತ್ರಿ ಮನೆಗೆ ಹೋಗಿಬಿಟ್ಟು ಮಂಚ್ಕ ಮಕಾಡೆ ಮನಗ್ಬಿಟ್ಟ. ಮಂತ್ರಿ ಮಗಳು ಕ್ಲಾಸಿಗೆ ಹೋಗಿದ್ಲು. ಬಂದು ಅಪಾ ಯಾಕಂಗೆ ಮನಿಕ್ಕಂಡಿದ್ದೀಯ ಅದೇನು ? ಎದ್ದೇಳು ನನ್ಕೊಟೆ ಹೇಳು ಇಷ್ಟಕ್ಕಾಗಿ ಇಂಗೆ ಮನಿಕ್ಕಂಬಿಟ್ರೆ ? ಎಂಗೆ ಏನಿದ್ರೂ ನಾನು ನಿನ್ಗೆ ತೀರುವಳಿ ಮಾಡ್ತೀನಿ ಅಂದ್ಲು. ಅವಾಗ ಮಂತ್ರಿ ಊಟ ಮಾಡ್ದ ಆಯಮ್ನವು ಓದಿದವು ಒಂದು ಪಲ್ಲ ಚೀಲ ಪುಸ್ತಕ ಇದ್ವು, ಅವನ್ನೆಲ್ಲ ತಂದು ನಡುಮನೆಯಲ್ಲಿ ಸುರುವಿದ್ಲು ಅದ್ರಾಗೆ ಒಂದು ಕ್ಯಾಲೆಂಡ್ರು ಸಿಕ್ತು ಅದ್ನೇ ತೋರುಸ್ತ "ಈ ದಿಕ್ಕಿನಾಗೆ ಹೋಗಿಬಿಡಪ್ಪ ಈಗ ಒಳ್ಳೆ ಮದ್ಯಾನದ ವಳಗೆ ಅರನ್ನಾಡವಿಗೆ ಹೋಗ್ತೀಯ. ಅಲ್ಲಿ ಒಂದು ಬಾವಿ ಸಿಗುತ್ತೆ. ಅದ್ರತ್ರ ಹೋಗಿ ನೀರು ಕುಡಿ. ಅಲ್ಲಿ ಒಂದು ಆಲ್ದಮರ ಇರುತ್ತೆ. ಆ ಆಲ್ದಮರದೆಡೇಲಿ ಕುತ್ಕ ಅತ್ಕಡೆ ನೋಡು. ಅವ್ನೇ ಗುರು ಬರ್ತಿರ್ತಾನೆ. ಅವ್ನು ಬಂದು ನಿನ್ನತ್ರ ಕುಕ್ಕಮ್ತಾನೆ. ಏನಪ್ಪಾ ಎಲ್ಲಿಗೆ ಪ್ರಯಾಣ ಅಂತ ಅನ್ನು ನಾನಿಂಗೆ ರಾಜನ್ಮಕ್ಕಳಿಗೆ ಇದ್ಯಾಭ್ಯಾಸ ಕಲಿಸೋಕೆ ಹೋಕ್ತಾ ಇದೀನಿ ಅಮ್ತಾನೆ. ಅವಾಗ ನೀನು ನಮ್ಮ ರಾಜನ್ಮಕ್ಕಳು ಇದಾರೆ ಬರ್ತೀರಾ ಸ್ವಾಮಿ ಅನ್ನು. ಅವ್ನು ಬರ್ತಾನೆ...." ಅಮ್ತಂದು ಮಗಳು ಮಂತ್ರಿಗೆ ಹೇಳ್ತಾಳೆ. ಮಂತ್ರಿ ಅವಳು ಹೇಳ್ದಂಗೆ ಮಾಡ್ತಾನೆ. ಸರಿ ಗುರು ಒಪ್ತಾನೆ. ಆದ್ರೆ ನಾನು ಕೇಳಿದ್ದು ಕೊಡ್ಬೇಕು ಅಂತ ಷರತ್ತು ಹಾಕ್ತಾನೆ. ನೀನು ಏನೇ ಕೇಳಿದ್ರೂ ಕೊಡೋಕೆ ತಯಾರು ಸ್ವಾಮಿ

ಅಂತಂದು ಅವನ್ನ ಕರ್ಕಂಡು ಮಧ್ಯಾನದೊಳಗೆ ರಾಜನ ಮನೆಗೆ ಮಂತ್ರಿ ಬಂದ. "ಇಗಳ್ರೀ ಸ್ವಾಮಿ ತಂದೀನಿ ನೋಡ್ಕಳ್ರೀ" "ಏನ್ರೀ ಕಲಿಸ್ತೀರಾ," "ನಾ ಕೇಳಿದ್ದು ಕೊಡ್ತೀನಂದ್ರೆ ಕಲಿಸ್ತೇನೆ." ನೀನು ರಾಜನಾದ್ರೆ ಇವತ್ತು ಸಾಯಂಕಾಲದೊಳಗೆ ಊರುಬಿಟ್ಟು ಆರು ಮೈಲಿದೂರ ಇಸ್ಕೂಲು ಕಟ್ಸು. ನಿನ್ಮಕ್ಳು ಐದು ಜನ ನಾನೊಬ್ಬ ಆರು ಜನ. ಆರು ತಿಂಗಳಾಗೋ ವರ್‍ಗೂ ಬರ್ತೇವು ಏರು. ನಿಮ್ಮಕ್ಕಳನ್ನು ಕಳಿಸಿಕೊಡು ಈಕಡಿಕೆ ಅಂತಂದು ಅವ್ರನ್ನ ಕರ್‍ಕೊಂಡೋಗಿ ಕೂಡ್ಕಂಬಿಟ್ಟ, ಆರು ತಿಂಗಳು ಮಾತಾಡಿದ್ದು ಮೂರೇ ತಿಂಗಳು ಒಳಗಾಗಿ ಬೇಕಾದಂತೆ ವಿದ್ಯೆ ಕಲಿಸಿಬಿಟ್ಟ, ಎಲ್ಲಾರ್‍ಗಿನ ಚಿಕ್ಕ ಹುಡುಗನಿಗೆ ಬಾರಿ ವಿದ್ಯೆ ಕಲಿಸಿ ಬಿಟ್ಟ. ಆಮೇಲೆ ರಾಜನ್ಗೋಗಿ ತಿಳಿಸ್ದ. ನಿನ್ಮಕ್ಕಳ ವಿದ್ಯಾಭ್ಯಾಸ ಪೂರ್ತಿ ಆಗಿದೆ ಅಂತ. ಅವಾಗ ರಾಜ ಒಂದು ಕ್ಲಾಸು ಮಾಡ್ರಿ ಅಂದ. ಅಲ್ಲಿ ಯಂಗಪ್ಪ ಮಾಡೋದು ಉರ್‍ನಾಕೆ ಕರಕಂಬಾ ಈ ಸುತ್ತಮುತ್ತಿನ ಮೇಷ್ಟ್ರುಗಳೆಲ್ಲ ನನ್ನ ಕೈಲಾಗಲ್ಲ, ನನ್ನ ಕೈಲಾಗಲ್ಲಾಂತ ಬಿಟ್ಟೋದ್ರಲ್ಲ ಅವರ್‍ನ ಕರೆಕಳಿಸ್ಕಂಬ್ತೀನಿ ಊರಿನಾಗೆ ಇಲ್ಲಿ ಒಂದು ಕ್ಲಾಸು ಮಾಡು. ಊರ್‍ನಾಕೆ ಕರಕಂಬಂದು ಐದು ಜನ ಮಕ್ಕಳನ್ನೂ ಸಾಲಾಗಿ ನಿಲ್ಲಿಸಿ ಗುರು ಸ್ವಲ್ಪ ದೂರ ನಿಂತ್ಕಂಡು ಪುಸ್ತಕ ಕೈಲಿ ಹಿಡ್ದ. ಇದೇ ಪಾಠ ತಗದನಂಬೋದು ಅವ್ರಿಗೇನ್ಗೊತ್ತು? ಅವ್ರು ಬಾಳ ಚೆನ್ನಾಗಿ ಪಾಠ ಹೇಳಿದ್ರು, ಅಮ್ಯಾಲೆ ಇಡೀ ಗ್ರಾಮವೆಲ್ಲಾ ಬಾಳ ಸಂತೋಸಪಡ್ತು. ಆವಾಗ ಮಕ್ಕಳು ಮನೀಗೆ ಓಡಿವೋದ್ರು, ರಾಜನೂ ಹೋದ. ರಾಜನಿಂದೆ ಗುರವೂ ಹೋದ. ನೀವೇನೇ ಕೇಳಿ ನಾನು ಕೊಡೋಕೆ ತಯಾರು ಅಮ್ತಾನೆ ರಾಜ. ನಿನ್ನ ರಾಜ್ಯಗೀಜ್ಯ ಏನೂ ಬೇಡಯ್ಯ ನಿಮ್ಮೈದು ಜನ ಮಕ್ಕಳಲ್ಲಿ ಒಂದುಡುಗನ್ನ ಕೊಡಬೇಕು. ರಾಜ ನೆಲಕ್ಕೆ ತಲೆತಗ್ಗಿಸಿದ ಏನೇ ಕೇಳಿದ್ರೂ ಕೊಡೋಕೆ ತಯಾರಿದ್ದೋನು ಹುಡುಗನ್ನ ಕೊಡು ಅಂದಾಗ ಮಾತ್ರ ತಲೆತಗ್ಗಿಸಿದ. ಎಲ್ಲಾರಿಗಿಂತಲೂ ಹಿರೇಮಗನ್ನ ಕರ್ದ".... ಏನಪ್ಪಾ ನೀನು ಹೋಗ್ತಿಯೆನೋ ? ಏನಪ್ಪಾ ನಿನ್ಗೆ ಯತ್ಲಾಗೆ ತೀಳಿತೈತಿ ನಾನು ಗನವಾಗಿ ವಿದ್ಯ ಕಲ್ತಿದಿನೀ ಕಣಪ್ಪ. ಈ ಪಟ್ಟಕ್ಕೆ ನೀ ಸತ್ರೆ ರಾಜ ನಾನೇ ಕಣಪ್ಪ ಅಂದ. ಅವ್ನಿಂದ್ಲನ್ನ ಕರ್ದ "ಏನಪ್ಪಾ ನೀನು ಹೋಗ್ತೀಯೇನಾ ?" ಏನನ್ಪಾ ನಾನೂ ಗನವಾಗಿ ವಿದ್ಯೆ ಕಲ್ತಿದೀನಿ, ಅಣ್ಣಯ ರಾಜ ಆದ್ರೆ ನಾನು ಮಂತ್ರಿ ಆಗ್ತೀನಿ." ಅವನಿಂದ್ಲವ್ನ ಕರ್ದ ಏನಪ್ಪಾ ನೀನು ಹೋಗ್ತೀಯೋ ನಾ? "ಇಲ್ಲಪ್ಪ. ಅಣ್ಣಯ್ಯರು ರಾಜ ಮಂತ್ರಿ ಆದ್ರೆ ನಾನೊಂದು ಜೊತೆ ಎತ್ತುಗಳ ತಗೊಂಡು ಬಾಡ್ಗೆ ಪಾಡ್ಗೆ ಹೊಡೀತೀನಿ." ಅವನ ಹಿಂದ್ಲಾನ್ನ ಏನಪ್ಪಾ ನೀನ್ಹೋಗ್ತಿಯೇನಾ ? "ಊಹು ನಾನೋಗಲ್ಲ ನಾನೊಂಜೊತೆ ಎತ್ತು ತಗೊಂಡು ಕೂರ್‍ಗೆನಾರ್‍ಗೆ ಹೊಡಿತೀನಿ (ಏನಪ್ಪಾ ಮಲ್ಲೇಶಿ ಎಷ್ಟು ಜನಾದ್ರು ? ನಾಕು ಜನಾದ್ರ ?) ಸರಿ ಕೊನೇನ್ನ ಕರ್ದ ಅವ್ನು ಬಂದು ಯಪ್ಪಾ ಯಪ್ಪ ನೀನು ಹೋಗಾಂದ್ರ ನಾನು ಹೋಗ್ತಿನಿ ಕಣಪ್ಪ. ಹೋಗ್ತೀಯನಪ್ಪ ಮಗ್ನೆ, ನೀನು ಹೋಗಂದ್ರ ಹೋಗ್ತೀನಿ. ಆಮೇಲೆ ಅದೇ ಹುಡ್ಗ ಆಳುಗಳಿಗೆ ಗುರುವಿಗೊಂದು ತನಗೊಂದು ಸರಿಯಾದ ಕುದ್ರೆಗಳ ಜೀನ ಮಾಡಿ ನಿಲ್ಸಿದ. ಜೀನ ಮಾಡಿ ನಿಲ್ಸು ಅಂದ್ರೇನು ಗೊತ್ತೆ? ಅಂದ್ರೆ ಸಬ್ರಗಿಬ್ರ ಹಾಕಿ ರೆಡಿ ಮಾಡು ಅಂತ. ಆ ಗುರುವು ನನಿಗೆ ಏನೂ ಬ್ಯಾಡಯ್ಯಾ ಅಂದು ಒಳ್ಟೇಬಿಟ್ಟ. ಇವ್ನು ತಕ್ಷಣ ಗುರುವಿನಿಂದೆ ಯಂಗೋಗಾಕಾಗುತ್ತೆ? ತಾಯಿ

ತಂದೆ ಬಂದು ಬಳಗ ಎಲ್ಲಾ ಆ ಮಗನ್ನ ತಡಕಂಡು ಅಳ್ತಿದ್ರು. ಆಮ್ಯಾಲೆ ಆ ಹುಡ್ಗ" ಅಪ್ಪಾ ನಾನು ನಿಮ್ಮ ಬೀಜಕ್ಕೆ ಹುಟ್ಟಿದ್ರೆ ಬಂದು ತಿರುಗಿ ನೋಡ್ತಿನೋ ಏನೋ ನೀವ್ಯಾಕೆ ಅಲೋಸ್ನೆ ಮಾಡ್ತೀರಾ ? ಈಗಿರೋ ಅಣ್ಣಗಳನ್ನೇ ನೋಡ್ಕೊಂಡು ಸಂತೋಸಪಡ್ರಿ. ತಾಯಿ ತಂದ್ಗೆ ನಮಸ್ಕಾರ ಮಾಡಿ ಸುತ್ತಮುತ್ತ ಪ್ರಜೆಗಳಿಗೆಲ್ಲಾ ನಮಸ್ಕಾರ ಮಾಡಿ ಕುದ್ರಿಗೆ ಕಾಲ ಹಚ್ಚಿಬಿಟ್ಟ. ಕುದ್ರಿಗೆ ಹತ್ತ್ಕೊಂಡ್ಕೊಡ್ಲೆ ಅಂತರಮಾರ್ಗದಲಿ ಆರೋಗಿಬಿಡ್ತು. ಆ ಗುರುವು ಊರು ಬಿಟ್ಟ. ಅರ್ಧ ಮೈಲಿ ಹೋಗಿದ್ದ. ಆ ಉಡ್ಗನ್ಗೂ ಎಷ್ಟು ಸಾಹಸ ಮಾಡಿ ಕುದ್ರೆ ಹೊಡದ್ರೂ ಕೂಡ ಆ ಗುರುವನ್ನೂ ಒದಗಿಸಿಕೊಂಬಕ್ಕೆ ಸಾಧ್ಯವಾಗಿಲ್ಲ. ಹುಡುಗನೂ ಹೊಡ್ದು ರೋಸಿಬಿಟ್ಟ. ಕುದ್ರೆ ಮೇಲೆ ಅಂಗೆ ಮನಿಕಂಬಿಟ್ಟ.

ಆ ಗುರುವು ಬಾವಿಹತ್ರ ಹೋಗಿ ಒಂದಾಲದ ಮರ್ದಡೇಲಿ ಕುತ್ಕಂಡು ಎಷ್ಟೋ ಹೊತ್ಗೆ ಈ ಹುಡ್ಗನ ಕುದ್ರೆ ಅಲ್ಲೆ ಬಂತು. "ಏನೋ ಇಷ್ಟೋ ತಂಕನ ಕುದ್ರೆಮೇಲೆ ಮಜ ಮಾಡ್ಕೊಂಡು ಬಂದ್ಯೋ? ಕಟ್ಟಾಕು ಆಕಡ್ಗೆ. ಕುಡ್ದು ಬರೋಗು ನೀರ" ಅಂತಂದ ಆ ಹುಡ್ಗ ನೀರತ್ರ ಹೋಗಿ ಕೈತೊಳಿಯೋಷ್ಟತ್ಗೆ ಇಲ್ಲಿ ಕುಂತಿದ್ದ ಗುರುವು ಆ ಕುದ್ರೆನ್ನ ನುಂಗಿಬಿಟ್ಟ. ಆಮೇಲೆ 'ಲೇ ಪಾಪ, ಓಡಿಬಾರ ನಿನ್ನ ಕುದ್ರೆ ಆರ್ಕಂಡು ಊರ್ಕಡೆ ವಳ್ಳೋಗಿಬಿಡ್ತು' ಅಂತೇಳ್ದ. ಆ ಹುಡ್ಗ ಗಾಬ್ರಿಪಟ್ಟು ಊರ್ಕಡೆ ಓಡಾಕಚ್ಚಿದ. 'ಅಲ್ಲಿನ್ಯಾಕ ಹೋಗ್ತೀಯೋ ಇಷ್ಟರಲ್ಲೇ ನಿಮ್ಮೂರು ಬಿದ್ದೈತೆ ಕುದ್ರೆ. ಬಾ ನೀರ್ಕುಡಿ ಟೈಮಾಗುತ್ತೆ' ಅಂತಂದ. ಆ ಹುಡ್ಗ ಮತ್ತೆ ನೀರ್ಕುಡ್ದು ಆ ಗುರುವಿನತ್ತ ಕುಕ್ಕಂಡ. ಟೈಮಾಗುತ್ತೆ ಅಂತೇಳಿ ಗುರುವು ಟೈಮಾಗುತ್ತೆ ಅಂತಂದ. ಆ ಹುಡ್ಗ ಮತ್ತೆ ನೀರ್ಕುಡ್ದು ಆ ಗುರುವಿನತ್ರ ಕುಕ್ಕಂಡ. ಟೈಮಾಗುತ್ತೆ ಅಂತೇಳಿ ಗುರುವು ಒಳ್ಟೇಬಿಟ್ಟ. ಅಂತರ ಮಾರ್ಗದಲ್ಲಿ ಹಾರಿಹೋಗೋ ಕುದ್ರೇನ ಒದಗಿಸಿಮ್ಮಾಕೆ ಆಗ್ಲಿಲ್ಲ. ಈ ಹುಡ್ಗ ನಡಕಂಡು ಒದಗಿಸಿಕಮ್ಮಾದು ಬದ್ವೆ ? ಓಡಿ ಓಡಿ ಮೈಯಿ ಕಾಲು ಕೈಯೆಲ್ಲಾ ಗಾಯ. ಒಳ್ಳೆ ಸಾಯಂಕಾಲದ ಹೊತ್ತು ಏಳು ಬಾಕ್ಲ ಗವಿ. ಆ ಗವಿವಳಕ್ಕೆ ಬಾಗ್ಲು ತೆಗೆದು ಶೀದ ಒಳಕ್ಕೆ ಕರ್ಕಂಡು ಹೋದ. ಅಲ್ಲೊಂದು ಬೆಂಚಾಕಿ ಕುತ್ಕ ಅಲ್ಲಿ ಅಂದ. ಆ ಮಗ ಅಲ್ಲಿ ಕುಕ್ಕಂಡ. ಆಮೇಲೆ ಆ ಗುರುವು ಮೊದ್ಲ ಬಾಕ್ಲನ್ನು ಹಾಕ್ದ. ಆ ಬಾಕ್ಲಿಗೆ ಒಂದು ಏಳೆಡೆ ಸರ್ಪ ಬಿಟ್ಟ. ಇನ್ನೊಂದು ಬಾಗ್ಲ ಹಾಕದ್ದ ಅದ್ಕೊಂದು ಕಿರುಬನ್ನ ಕಟ್ಟಿದ. ಇನ್ನೊಂದು ಬಾಕ್ಲು ಹಾಕ್ದ, ಅದ್ಕೊಂದು ಕಲ್ದಿಬಿಟ್ಟ. ಮತ್ತೊಂದು ಬಾಕ್ಲು ಆಕ್ದ, ಅದ್ಕೊಂದು ಗುಂಡುದೊಬ್ಬಿದ. ಇನ್ನೊಂದು ಬಾಕ್ಲ ಹಾಕ್ದ ಅದ್ಕೊಂದು ಬಾರೆ ಕಳ್ಳೆ ಬಡ್ದ. ಆಮೇಲೆ ಗುರುವು ಹೊರಗಡೆ ಬಂದ.

ಪೂರ್ಕೈಸಿ ಬಿಟ್ನಲ್ಲ ಬಾಗ್ಲು. ಬಾಗ್ಲ ದಡದಲ್ಲಿ ಈ ಕಡೆ ಒಂದು ಕಲ್ಕಂಬ. ಆ ಕಡೆ ಒಂದು ಕಲ್ಕಂಬ, ಕಲ್ಕಂಬದ ಮ್ಯಾಲೆ ಅಡ್ಡಪಟ್ಟಿ, ಅದ್ಕೊಂದು ಗಂಟೆ, ಅಲ್ಲಿ ಬಾವಿ ಹತ್ರ ಆ ಮಗುವಿಂದು ಕುದ್ರೆ ನುಂಗಿದ್ನಲ್ಲ ಅದನ್ನ ಅಲ್ಲಿ ಬದುಕಿಸಿ ಆ ಕಲ್ಲಕಂಬಕ್ಕೆ ಕಟ್ಟಿದ. ಆ ಗವಿಗೂನು ಆ ಗುರುವಿನಕ್ಕ ಇರೋದುಕ್ಕೂ ಏಳುಯೋಜ್ನೆ ಐತೆ. ಗವಿನ ಇಷ್ಟು ಬಂದೋ ಬಸ್ತು ಮಾಡಿಸಿ ಇವ್ನು ಇನ್ನೆತ್ಲಾಗೆ ಹೋಗ್ತಾನೆ ಅಂತಂದು ಗುರುವಿನ ವೇಸದಾಗೆ ಇದ್ದ ರಾಕ್ಷಸಿ ತನ್ನಕ್ಕನ್ನ ಕರ್ಕಂಬರಾಕೆ ಹೋಗಿ ಬಿಡ್ತು. ಆ ಕುದ್ರೆ ಅಂತಕ್ಕದ್ದು

ಬಾಗ್ಲಲ್ಲಿ ನಿಂತ್ಕೊಂಡು ನನ್ನ ಮಗ ಎಷ್ಟು ಹೊತ್ಗೆ ಬಂದಾನೋ ಅಂದ್ಕೊಂಡು ಅಬ್ರುಸಂತ್ಯೆತಿ. ಈ ಹುಡ್ಗ ಒಳಗಡೆ ಕತ್ತಲು ಗವಿಯಾಗೆ ಕುಕ್ಕಂಡು ತಪಸ್ಸು ಮಾಡ್ತಾ ಇದ್ದ. ಅವ್ನ ತಲೆ ಮ್ಯಾಲೆ ಸಾವಿರಾರು ರಾಜನ್ಮಕ್ಳ ತಲೆಗಳು ನೇತಾಡ ಬಿದ್ದಾವೆ. ಅವತ್ತು ಅವನ ಸತ್ಯಕ್ಕೆ ಮೆಚ್ಚಿ ಆ ಶಿರಸ್ಸುಗಳು ಪಕಪಕ ನಕ್ಕುಬಿಟ್ಟವು.

ಇದೇನು ಇಷ್ಟೊಂದು ಜನ ಇಂಗ ನಗ್ತಾರಲ್ಲ ಅಂದ್ಕಂಡು ಮ್ಯಾಲ್ಕ ತಲೆಯೆತ್ತಿ ನೋಡ್ದ ಆ ಹುಡ್ಗ ಆ ಶಿರಸ್ತುಗಳು ಆ ಹುಡ್ಗನ ಕೂಟೆ ಮಾತಾಡಿದವು. ಅಯ್ಯೋ ಪಾಪ, ನೀನ್ಯಾಕೆ ಬಂದ್ಯೋ ? ಈ ಸೂಳೆಮಗನ್ನ ಕೈಗೆ ಸಿಕ್ಕಿಬಿಟ್ಟಲ್ಲಪ್ಪಾ ನಮ್ಮನ್ನೆಲ್ಲ ಇಂಗೆ ಕರಕಬಂದು ತಿಂದು ಬಿಟ್ಟು ಈ ತಲೆಗಳನ್ನೆಲ್ಲ ಇಂಗೆ ನೇತಾಟೆ ಕಟ್ತಾನೆ. ನಿನ್ನ ಬಾವಿಹತ್ರ ಕುದ್ರೆ ಅರ್ಕಂಡು ಓಡೋತು ಅಂದ್ನಲ್ಲ ಆ ಗುರು ಅವ್ನೇ ಆ ಕುದ್ರೇನ ನುಂಗಿಬಿಟ್ಟಿದ್ದ. ಇವಾಗ ಆ ಕುದ್ರೇನೇ ಬಾಗ್ಲ ಹೊರಗಡೆಯಲ್ಲಿ ಬದುಕಿಸಿ ಕಲ್ಕಂಬಕೆ ಕಟ್ಟಿ ಅವರಕ್ಕನ ಕರಕಬಂದು ನಿನ್ನೊಬ್ಬನ, ಆ ಕುದ್ರೆನ ಈ ಇಬ್ರಾಳನ್ನ ತಿಂಬಾರು. ಇಂತಾ ಬದ್ಕು ಮಾಡ್ತವ್ನೆ ಕಾಣಪ್ಪ....ಇದಕ್ಕೆ ಎನಾಡಬೇಕು ಸ್ವಾಮಿ ಅಂತಂದು ಆ ಹುಡ್ಗ ಕೇಳ್ತಾನೆ. ಅದ್ಕೆ ಅವ್ರು ಒಂದು ಉಪಾಯ ಹೇಳ್ತಾರೆ. ಅಲ್ಲೊಂದು ಕರೇಬಾನದ ಸೋಲು ಐತೆ ಆ ಸೋಲು ಇಳಿಸು, ಆ ಸೋಲಿನಲ್ಲಿ ಮದ್ಲೆ ಸೆಟ್ಟಿಗೆ, ಅದ್ರಲ್ಲಿ ಮೂರು ಕೋಳಿಗುಡ್ಡು ಅದಾವೆ ಅವುನ್ನೊಂದ್ರಕೆ ಕಟ್ಟಿಗ್ಯ. ಇನ್ನೊಂದ ಸೋಲು ಇಳಿಸು ಅದ್ರಲ್ಲಿ ಅಸೇ ಮಾಂಸ ಐತೆ. ಅದ್ನೊಂದು ಸೋಲು ಇಳಿಸು ಅದ್ರಲ್ಲಿ ಒಂದು ಕವ್ಗೋಲು ಐತೆ (ಕವ್ಗೋಲು ಅಂದ್ರೇನು ಗೊತ್ತೆ?) ಸರಿ, ಅದ್ನತಗೊಂಡು ನಿನ್ನ ಕಂಕುಳದಾಗ ಸಿಗಿಸ್ಗ್ಯ ಇನ್ನೊಂದು ಸೋಲು ಇಳಿಸು ಒಂದಗ್ಗ ಐತೆ ನಡುವ್ಗೆ ಕಟ್ಗ. ಇನ್ನೊಂದು ಸೋಲು ಇಳ್ಸು ರಾಕ್ಷಸೀವು ಮಂತ್ರವೆ ಅವನ್ನ ಕೈಯಿಗೆ ಹಿಡ್ಕೊಂಡು ನಿನ್ನ ಬುದ್ಧಿ ಇದ್ದಂತೆ ನೀನು ವಳ್ಗೋಗಪ್ಪ-ಮಗ್ನೆ....ಅಮ್ತಾನ ಆ ಶಿರಸ್ಸುಗಳು ಹೇಳಿದವು.

ಆಮೇಲೆ ಆ ಹುಡ್ಗ ಆ ಸಾಮಾನೆಲ್ಲ ಒಂದ್ರಾಕಾಕಿ ಅವನತ್ರ ಇಟ್ಕೊಂಡು ಮೊದ್ಲ ಬಾಕ್ಲು ತಗ್ದ, ಏಳೆಡೆ ಸರ್ಪ ಬೋರ್ಮಲಿತಾ ಎದ್ದು ನಿಂತು ಬಿಟ್ತು. ಅದ್ಕೆ ಆ ಕೋಳಿಗುಡ್ಡನ್ನ ಉಳ್ಳುಬಿಟ್ಟ. ತಿನ್ನಾಕೆ ಆ ಸರ್ಪ ತಲೆತಗ್ಗಿಸಿ ಬಿಡ್ತು. ಆ ಮೇಲೆ ಆ ಹುಡ್ಗ ಆ ಕಡೆ ನೆಗೆದುಬಿಟ್ಟ. ಇನ್ನೊಂದು ಬಾಗ್ಲಲ್ಲಿ ಹೋಗಿ ಅದನ್ನ ತೆಗೆದ ಕಿರುಬ ಅಡ್ಡಬಂತು. ಅದ್ಕೆ ಅಸಿ ಮಾಂಸ ಮುಂದಿಟ್ಟ. ಅದು ತಿಂಬಾಕೆ ಬಗ್ತು, ಆಮೇಲೆ ಆಕಡೆ ನೆಗ್ದ. ಇನ್ನೊಂದು ಬಾಕಲತ್ರ ಬಂದ ಕಳ್ದಿ ಅಬ್ಬರಿಸಿಕೊಂಡು ಬಂತು. ಈ ರಾಗಿಹಿಟ್ಟನ್ನ ಕದ್ರಿ ಮುಂದಿಟ್ಟ, ಅದು ತಿನ್ನಕ್ಕಾಗಿ ತಲೆತಗ್ಗಿಸಿಬಿಡ್ತು. ಆ ಮೇಲೆ ಆ ಕಡೆ ನೆಗೆದುಬಿಟ್ಟ, ಇನ್ನೊಂದು ಬಾಗ್ಲು ತೆಗೆದುಬಿಟ್ಟ, ಬಾಗ್ಲಲ್ಲಿ ಬಾರೆಕಳ್ಳಿ ಬಡ್ಡಿತ್ತು. ಈ ಕವ್ಗೋಲು ತಗಂಡು ಬಾರೆಕಳ್ಳಿ ಅರಗುಮಾಡ್ದ. ಆ ಮೇಲೋಗಿ ಇನ್ನೊಂದುಬಾಗ್ಲು ತೆಗ್ದ. ಗುಂಡಿತ್ತು. ಝೂಡ್ಸಿ ಕಾಲಾಗೆ ಒದ್ದ. ಆಮೇಲೆ ಕುದ್ರೆ ಅಂತಕ್ಕಂತಾದ್ದು 'ಅಪ್ಪಾ ಮಗ್ನೆ ಸರ್‍ರನ ಬಾ ಅಲ್ಲೆ ರಾಕ್ಷಸಿ ಬರ್‍ತ ಐತೆ ನನ್ಗೆ ಇಲ್ಲೆ ಕಾಣ್ತೈತಿ ನೀನೆಷ್ಟೊತ್ತಿಗೆ ಬಂದಾನೋ ಅಂತ ಕಾದಿದ್ದೆ ನಾನು. ಅತ್ಕೋ ನನ್ಮೇಲೆ ಮನಿಕ್ಕಂಡು ನನ್ನೊಟ್ಟೆ ಅಡೇಲಿ ನಿನ್ನ ಬೆನ್ನ ಮ್ಯಾಕೆ ಅಗ್ಗ ಬೆಕ್ಕಂಬಿಡು ನಾನು ಮ್ಯಾಲೆ ಆಬ್ರಿಡ್ತಿನೀ. ರಾಕ್ಸಸಿ ಮಂತ್ರ ಕೈಯಾಗೆ ಐದವೋ?" "ಹೌದು ಐದಾವೆ" "ನಾನು

ಒಲ್ದನೇನಪ್ಪ ಮಗನೆ'....ಅಂತೇಳಿ ಹಾರಿಬಿಡ್ತು ಆ ಕುದ್ರೆ, ಬಾಗ್ಲ ಪಂಚೇಲಿರವ ಗಂಟೆ ಡಣಿಡಣಿ ಅಂದುಬಿಡ್ತು. ಆ ರಾಕ್ಷಸಿಗೆ ಆ ಸಬ್ದ ಕೇಳಿಬಿಡ್ತು. ಆ ಕೂಡ್ಲೆ ರಾಕ್ಷಸಿ ಅಕ್ಕನಕೂಟ "ಅಕ್ಕ ಅಕ್ಕ ಮನೇತ್ರ ಏನೋ ಅನಾನುಕೂಲವಾಗ್ಯೆತಿ ಅಂತೇಳಿ ಸರ್ರನೆ ಬಂದು ಬಿಡ್ತು ಗವಿಬಾಗ್ಲಿಗೆ. ಇಲ್ಲಿ ಬಾಗ್ಲೆಲ್ಲ ಆರೋಡಿದಿದ್ವು, ಅದ್ಕೆ ಬಾರಿ ಹೊಟ್ಟೆ ಉರಿದುಬಿಡ್ತು. ಆ ರಾಕ್ಷಸಿ ಅಂತಕ್ಕಂತದ್ದು ಅಬ್ರಸಿಕೊಂಡು ತಿಂದೇನು ತೇಗೇನು ಅಮ್ತಾನ ಒಳ್ಟುಬಿಡ್ತು. ಈ ರಾಕ್ಷಸಿ ಒಳ್ಟೊಗೋದ್ರೊಳಗಾಗಿ ಆ ಕುದ್ರೆ ಆ ಮಗ್ನ ತಗೊಂಡು ಏಳು ಯೋಜ್ನ ಹೋಗಿತ್ತು. ಈ ರಾಕ್ಷಸಿ ಒಂದೈದು ನಿಮ್ಸಿದಲ್ಲಿ ಹೋಗಿ ಆ ಕುದ್ರೆನ್ನ ಒದಗಿಸಿಕಂಬಿಡ್ತು. ಆವಾಗ ಕುದ್ರೆ ಮ್ಯಾಲೆ ಮನಗಿದ್ನಲ್ಲ ಆ ಹುಡ್ಗನ್ನೆ ಆ ರಾಕ್ಷಸಿ ಕಂಡ ಕೂಡ್ಲೆ ಹೆದ್ರಿಕೆ ಆತು. ಆ ಕೂಡ್ಲೆ ಅವನು ಒಂದು ಮಂತ್ರದ್ದು ಕಲ್ಲಳ್ಳು ಕೆಳಗೆ ಹಾಕ್ದ. ಆಗ ಅದು ಒಂದು ಬೆಟ್ಟವಾಗಿಬಿಡ್ತು. ಆ ಬೆಟ್ಟವೆಲ್ಲಾ ತುಂಬಾ ಚಳಿಯಿಂದ ಕೂಡಿತ್ತು. ರಾಕ್ಸ ಬೆಟ್ಟದಲ್ಲಿ ತೂರ್ಕೊಂಡು ಮೈಯೆಲ್ಲಾ ಗಾಯ ಕೈಯೆಲ್ಲಾ ಗಾಯ ರಾಣಾರಂಪಾಮಾಡ್ಕಂಡು ಕಾಡಿಗೆ ಒಳ್ಟುಬಿಡ್ತು. ಅಷ್ಟೊತ್ರೊಳಗಾಗಿ ತಿರ್ಗ ಏಳು ಯೋಜ್ನ ಹೋಗಿತ್ತು ಕುದ್ರೆ.

ತಿರ್ಗ ಹೋಗಿಬಿಟ್ಟ ರಾಕ್ಸ ಆ ಕುದ್ರೆನ ಒದಗಿಸಿಕೊಂಡುಬಿಡ್ತು. ಆವಾಗ ಹುಡ್ಗ ಬಂತು ಬಂತು ಅಂತ ಕೂಗಾಡ್ಕಂಡ. ಆಗ ಕುದ್ರೆ, ಅಪ್ಪಾ ಮಗ್ನೆ ಇನ್ನೊಂದು ಮಂತ್ರ ಹಾಕು ಅಂತು. ಅದು ಆಕಾಸ್ಕೂ ಭೂಮಿಗೂ ಅಗ್ನಿಯಾಗಿ ಉರೀತಿತ್ತು. ಆ ರಾಕ್ಸ ಅಂತಕ್ಕಂತಾದ್ದು ಆ ಬೆಂಕಿವಳಗೆ ನುಗ್ಗಿ ಬಿಟ್ಟು ಮೈಯೆಲ್ಲಾ ರಾಣರಂಪಾ ಮಾಡ್ಕಂಡು ಕಡಿಕೆ ಒಲ್ಟು ಬರೋವೊತ್ಗೆ ಕುದ್ರೆ ಮತ್ತೇಳು ಯೋಜ್ನ ಹೋಗಿತ್ತು. ಈ ರಾಕ್ಸ ತಿರ್ಗ ಹೋಗಿ ಒದಗಿಸಿಕೊಂಡುಬಿಡ್ತು. ಆವಾಗ ಮತ್ತೆ ಇನ್ನೊಂದು ಮಂತ್ರ ಹಾಕ್ದ ಆವಾಗ ದೊಡ್ಡದೊಂದು ಸಮುದ್ರ ಆತು. ಅಲ್ಲಿಗೆ ಸುಸ್ತೂಡೆದು ರಾಕ್ಸ ನಿಂತುಬಿಡ್ತು. ಆ ಹುಡ್ಗನೂ ಕುದ್ರೆ ಸಮುದ್ರದ ಆಕಡ್ಗೆ ಆದ್ರೆ, ರಾಕ್ಷಸಿ ಈಕಡೆ ಗಡ್ಯಾಗೆ ನಿಂತೈತಿ. ಊಗ್ಲಿಕ್ಕಿ ರಾಕ್ಷಸಿ ಕುದುರೆಗೆ ಹುಡ್ಗುನಿಗೆ ಹೇಳ್ತು. "ಲೇ ಕುದ್ರೆ ನಾನ್ತಿಂಬತುತ್ತು ನೀನ್ತಕಂಡು ಹೋಗ್ತೀಯ ಇನ್ನೆಂಟು ದಿನ ಅಂಬಾದ್ರೊಳಗೆ ನೀನೆಲ್ಲಿದ್ರು ಬಿಡ್ದಂತೆ ನಾನು ತಿಂಬದ ಮ್ಯಾಲೆ ನನ್ನ ರಾಕ್ಷಸಿ ಅಮ್ತ ಕರಿಬ್ಯಾಡ ಹೋಗು ಅದೆಲ್ಲಿ ಬಚ್ಚಿಕಮ್ತ್ಯೆಬಚ್ಚಿಕ್ಕ್ಯ" ಅಂತ ಶಾಪಕೊಟ್ಟು ಹಿಂದಕ್ಕೆ ತಿರುಗಿಬಿಡ್ತು.

ಆ ಮೇಲೆ ಆ ಕುದ್ರೆ ಹೋಗ್ತಿರಬೇಕಾದ್ರೆ "ಏನಪ್ಪಾ ಮಗ್ನೆ ನನ್ನಂತ ಕುದ್ರೆ ಈ ಪರಪಂಚಾದಾಗೆ ಇಲ್ಲ ನಾನು ಪಂಚಕಲ್ಯಾಣಿ ಕುದ್ರೆ, ನಿನ್ನಂತ ಹುಡ್ಗ ಪರಪಂಚದಾಗೆ ಇಲ್ಲ. ನಾವಿಬ್ರಾಳು ಎಗ್ಗುರುತಾಗಿ ಎಲ್ಲಿಗೋದ್ರೂನು ಸಿಕ್ತಾ ಇದಿವಿ. ಇದ್ಕೆ ಎನ್ ಬುದ್ದಿ ಹುಡ್ಕಾನ?" ಅಂಗಂದ್ಕಮ್ತಾ ಆ ಹುಡುಗನ್ನೆ ಹೊತ್ಕೊಂಡು ರೋಡಗುಂಟನೆ ಹೋಗ್ತಾ ಇತ್ತು. ಅಲ್ಲೊಂದು ಬಡಕುದ್ರೆನ್ನ ರೋಡ್ನಲ್ಲಿ ಒಡ್ಡು ಒಡ್ಡು ಲಾಸೆಬ್ರಿಸಿ ಒಂದು ಶರಂಡಿ ಕಡೆ ದಬ್ಬಿ ಅದೇ ಹೋಗಿದ್ರು, ಅದು ಸತ್ತು ಬಿದ್ದಿತ್ತು ಅದು ಈ ಪಂಚಕಲ್ಯಾಣಿ ಕುದ್ರೆಗೆ ಆ ಬಡ ಕುದ್ರೆ ಕಂಡುಬಿಡ್ತು. "ಅಪ್ಪಾ ಮಗ್ನೆ ಇಲ್ಲೊಂದು ಬಡ ಕುದ್ರೆ ಸತ್ತು ಬಿಟ್ಟೈತಿ. ಚಂದ್ರಾಜ್ಯ ತಗಂಬಿಟ್ಟು ಇಳಿದು ಆ ಕುದ್ರೆ ಎಂಗೈತೋ ಅಂಗೆ ಶರ್ಮ ತಕ್ಕಂಬಿಡಪ್ಪ

ಮಗ್ನೆ." ಆ ಹುಡ್ಗನೂ ಚಂದ್ರಾಜ ತಗಂಡು ಆ ಕುದ್ರೆಯಂಗ್ಯೆತೋ ಅಂಗೇ ಸುಲಿದು ಬಿಟ್ಟ. "ಅಪ್ಪಾ ಮಗ್ನೇ ಆ ಶರ್ಮವನ್ನೂ ಮಡ್ಸಿ ಒಂದ್ಕೆಗಿಟ್ಟುಕೊಳ್ಳಪ್ಪ" ಅಮ್ತಾ ಹೇಳ್ತು. ಇನ್ನೂ ಮುಂದೆ ಹೋದ್ರು, ಅಲ್ಲೊಬ್ಬ ಸಾಬ್ರಜ ಬಸ್ಸಿನ ಅಡೀಕೆ ಬಿದ್ದು ಸತ್ತು ಬಿಟ್ಟವ್ನೆ. ಅವ್ನ ಶರಂಡಿಗೆಳೆದು ಅದೇ ಹೋಗಿಬಿಟ್ಟವ್ರೆ. ಅದ್ನ ಈ ಕುದ್ರೆ ನೋಡಿಬಿಡ್ತು. "ಅಪ್ಪಾ ಮಗ್ನೆ ಅವಜ್ಜಯೆಂಗದನಾ ಅಂಗೆನೇ ಶರ್ಮ ತಗೋ".... ಆ ಹುಡ್ಗ ಇಳಿದುಬಿಟ್ಟು ಚಂದ್ರಾಜ್ಯ ತಗಂಡು ಅವಜ್ಜ ಯಂಗದನೋ ಅಂಗೆ ಶರ್ಮವನ್ನ ತೆಗೆದುಬಿಟ್ಟ ಅವಾಗ ಬಡಕುದ್ರೆ ಶರ್ಮನ ಪಂಚಕಲ್ಯಾಣಿ ಕುದ್ರೆಗೆ ಹಾಕ್ದ. ಬಡಜ್ಜನ ಶರ್ಮನ ಆ ಹುಡ್ಗ ಆಕೊಂಡ. ಬಡ್ಕೇಬಡ್ಕ ಆಗಿಬಿಡ್ತು ಆ ಕುದುರೆ. ಪಟ್ಣದತ್ತ ಹೋದ್ರು. ಅದಕ್ಕೆ ಏಳು ಸುತ್ತಿನ ಕ್ವಾಟೆ, ಆ ಕ್ವಾಟೆ ಹೊರಗೆ ಒಂದು ಹನುಮಂತ್ರಾಯನ ಗುಡಿ. ಆ ಗುಡಿಯೊಳಗೆ ಬಡಜ್ಜ ಬಡಕುದುರೆ ಇಳುಕೊಂಡ್ರು. ಈ ಪಟ್ಣದಾಗೆ ಏನು ನಡೀತಪ್ಪ ಅಂದ್ರೆ...ಪಟ್ಣದಾಗೊಬ್ಬ ದೊರೆ, ಆ ದೊರೆಗೆ ಮೂರು ಜನ ಹೆಣ್ಮಕ್ಳು. ಅದ್ರಾಗೆ ಇಬ್ರಾಳ್ದು ಮದುವೆ ಆಗ್ಯೆತಿ. ಇನ್ನೊಬ್ಬಳದು ಮದ್ವೆ ಆಗಿಲ್ಲ. ಅದ್ಕೆ ಆ ದೊರೆ ಏನಂತ ಬೋರ್ಡು ಆಕಿಸ್ತಾನಂದ್ರೆ ಏಳು ಸುತ್ತಿನ ಕ್ವಾಟೆ ಹೊರಗೆ ದಿವ್ಸಾ ಅಲ್ಲಿಗೊಂದು ಹುಲಿ ಬರುತ್ತೆ. ಯಾರು ಬಂದ ಹುಲಿ ಹೊಡಿತಾರೋ ಅವ್ನಿಗೆ ನನ್ನ ಮಗಳನ್ನ ಕೊಟ್ಟು ಈ ಚಳ್ಳಕೆರೆ ಪಟ್ಣಕೆ ರಾಜ್ನಾಗಿ ಬಿಡ್ತೇನೆ....ಅಮ್ತಂದು ಬೊರ್ಡು ಹಾಕಿಸಿದ್ದ. ಅದ್ನ ಹೊರಗೆ ಬಡಜ್ಜ ಬಡ ಕುದುರೆ ನೋಡ್ತಿದ್ರು. "ಅಪ್ಪಾ ಮಗ್ನೆ ಇಲ್ಲಿಗೊಂದು ಹುಲಿ ಬರುತ್ತಂತೆ ನಾನು ಸಿನ್ನದಲ್ಲಿ ಆಗ್ತಿನಿ. ನೀನು ಬಂಗಾರದ ನೊಣ ಆಗು. ಚಂದ್ರಾಜ್ಯ ತಗ ಊರಬಾಕ್ಲ ಕಲ್ಲಿಗೆ ಹೋಗಿ ಆತ್ಕಮ್ಕಾನ. ಹುಲಿ ಬಂದಾಗ ನಾನು ಲೊಚ ಲೊಚ ಅಂತ ಹಲ್ಲಿ ನುಡ್ದಂಗೆ ನುಡಿತೀನಿ. ನೀನು ಕತ್ತಿ ಒಳ್ ಬಿಡದಂಗೆ ಎತ್ತಿಹೊಡೆದುಬಿಡು ಆಮೇಲೆ ಕೊನೆ ಬಾಲ ಕಿವಿ ಕೊಯ್ಕಳಪ್ಪ" ಅಂತೆಳ್ತು. ಆ ಉಡ್ಗ ಅವಜ್ಜ ಹೇಳ್ದಂಗ ಮಾಡ್ದ.

"ಸ್ವಾಮಿ ಸ್ವಾಮಿ ಐದಿರಾ, ನಮ್ಮ ವ್ರಾಲೆ ಒತ್ತೇವು ಭರಣಿ ಎಲ್ಲಾ ಮಾಡ್ತಾ ಐದಾರೆ ದಿನ ಬಾಳ ಚೆನ್ನಾಗ್ಯೆತೆ. ಹುಲಿ ಹೊಡೆದುಬಿಟ್ಟೆ ನಾನು. ಮದ್ವೆ ಪ್ರಯತ್ನ ಇಟ್ಟುಕೊಂಡುಬಿಡಬೇಕು" ಅಂತ ಒಬ್ಬ ಅಗ್ಸ ಹೇಳ್ತಾನೆ. ಅಯ್ಯೋ ಅಯ್ಯೋ ತಡಿಯಪ್ಪಾ ಬೋರ್ಡು ಹಾಕಿರೋದೆ ಬದ್ದ ಅದೀಲೋಗೋ ದಾಸಯ್ಯಾಗಾಲಿ ಕೊಡಬೇಕು. ಅದೆಂತ ಮಾತು? ಯಾರ್ನನ ಕೇಳನ. ಹೇಳಾನ ಒಬ್ರೊ ಕಾಣದಂತಾಗ್ಯೆತೇನು ಕೆಲಸ... ಇಡೀ ಪ್ರಜೆಗಳನ್ನ ಕರೆಕಳಿಸಿದ. ಏನಪ್ಪ ನೀನೋಡ್ದ್ಯ "ಇಲ್ಲ ಸ್ವಾಮಿ." ಇಂಗೇನೆ ಒಂದು ಕಡೆಯಿಂದಾನಾ ಸಿನಿಮಾದಾಗೆ ಟಿಕೆಟ ತಗೊಂಡು ಎಂಗೆ ಒಳಗೆ ಬಿಡ್ತಾರೆ ಅಂಗೆ ಒಂದು ಕಡೆಯಿಂದಾ ವಿಚಾರಣೆ ಆಯ್ತು. ಆ ಮೇಲೆ ದೊರೆ.... "ಏನೋ ಪುರವೆಲ್ಲಾ ಆಯ್ತೇನೋ" ಅಂತ ಕೇಳ್ದ. "ಆಯ್ತು ಸ್ವಾಮಿ ಆದ್ರೆ ಆ ಊರು ಹೊರ್ಗಡೆ ಹನುಮಂತಾಯನ ಗುಡಿಯಾಗಿ ಒಂದು ಬಡಕುದ್ರೆ ಬಡಜ್ಜ ಐದಾರೆ. "ಮತ್ತೆ ಅವ್ರನ್ನ ಕರೆದು ಬರಾಗು ಅವ್ರು ಎಂತಾವ್ರು ಅಂತ ಅಮ್ತಾನೆ ರಾಜ. ಅವಾಗ ಅವಜ್ಜನ ಕೈ ಹಿಡಿದು ಆ ಕುದ್ರೆ ಹೊಡ್ಕಂಡು ದೊರೆ ಹತ್ರ ಕರ್ಕಂಡು ಹೋದ. 'ಏನಜ್ಜ ಹುಲಿ ಹೊಡೆದಿದ್ಯ?'....'ಹೌದು ಸ್ವಾಮಿ....ನಾನೇ ಹೊಡ್ದೆದ್ದು'....'ಎನ್ ಕುರ್ತು'....'ಕಿವಿಬಾಲಕುರ್ತು'....

ಅದಕ್ಕಾಕ್ಷವು ಯಾತ್ರವು?....ಮೋಟು ಕಿವಿ ಮೋಟುಬಾಲ....ಹಿಂಗೆ ನಡೀತು ರಾಜ ಮತ್ತು ಅಜ್ಜನ ಮಾತುಗಾರಿಕೆ ಅವಾಗ ಅಗಸನ ಮೋಸ ಮೋಸಗಾರಿಕೆ ನೋಡಿ ಅರಸ ಕ್ವಾಪಗೊಂಡು "ಆಕ್ರಲಾ ಅವನ್ನ ಸುಣಕಲ್ಲು ಬಿರಿಗೆ"....ಅಂತೇಳಿ ಅವನ್ನ ಸುಣಕಲ್ಲುಬಿರಿಗೆ ಆಕಿಸಿದ್ದೂ ಆಯ್ತು ಆಮೇಲೆ ರಾಜ.... ಅಯ್ಯೋ ಪಾಪ ಅಗಸ್ರೋನು ದಿಮ್ಮನಾಗದ್ರೂ ಇದ್ದ ಕೊಳಕುನಾತ ನಾರ್ತಾನೆ ಈವಜ್ಜ. ಇವನಿಗೆ ಎಂಗಪ್ಪಾ ಕೊಡೋದು ನನ್ಮಗಳನ್ನ" ಅಂತ ಚಿಂತೆ ಮಾಡ್ತಾನೆ. ಅಕ್ಕಗಳು ಆ ಹುಡ್ಗಿ ಮುಂದೆ ನಗೆಯಾಡ್ತಾರೆ. ಆ ಹುಡ್ಗಿ "ಅಕ್ಕ ನೀವ್ಯಾಕೆ ನಗೋದು ನನಿಗೆ ಅವ್ನೆ ಗಂಡ. ಪಾಲಿಗೆ ಬಂದದ್ದು ಪಂಚಾಮೃತ ನನ್ಗೆ ಸಕಲ ಸಂಪತ್ತೂ ಅವನೆ ನೀವ್ಯಾಕೆ ನಗೋದು..." ಅಂತೇಳಿ ಅವಜ್ಜನ್ನೆ ಅವಳು ಮದ್ವೆ ಆಗ್ತಾಳೆ. ಆದ್ರೆ ರಾಜನ್ಗೆ ಸ್ವಲ್ಪ ಯೋಚ್ನೆ ಆಯ್ತು ಮಗಳನ್ನು ಮುದುಕನ್ಗೆ ಕೊಟ್ಟುಬಿಟ್ನಿಲ್ಲಾ ಅಮ್ತಾ ಈ ಇಬ್ರನ್ನ ಮನೆಯಾಗೆ ಒಬ್ರೂ ಸೆರ್ದಂಗಾಗಿಬಿಟ್ರು, ಬಡಕುದುರೆಗೂ, ಬಡಜ್ಜಂಗೂ ಆ ಮಗಳಿಗೂ ವಾಸಮಾಡಾಕೆ ಬ್ಯಾರೆ ಒಂದು ಮನೆ ಕಟ್ಸಿಸಿ ಅದ್ರಾಕೆ ಬಿಟ್ಟು ದಿವ್ಸಾ ಒಂದು ಹೂವಜ್ಜಿಯನ್ನು ನೇಮಿಸಿದ ರಾಜ.

ಇಂಗೆ ಒಂದು ನಾಲಕ್ಕಾಲ ಬಾಳಿಕೊಂಡು ಹೋದ್ರು, ಬಾಳಿಕೊಂಡು ಹೋದ ಕಾಲ್ದಲ್ಲಿ ರಾಜನ ಆಳೇರು ಒಂದು ಬ್ಯಾಟೆಮಾರ್ಗ ಹೋದ್ರು ದಂಡುದಳ ಎಲ್ಲಾ ಕರ್ಕಿಂಬಿಟ್ಟು ಬೇಕಬೇಕಾದ ಬಟ್ಟೆ ಬರೆಗಳನ್ನೆಲ್ಲಾ ಇಟ್ಕೊಂಡು ಕೈಗೆ ವಾಚು ಕಟ್ಟಿಕೊಂಡು ಆನೆ ವಂಟೆಗಳನ್ನು ಹೊಡ್ಕೊಂಡು ಊರಹೊರಗೆ ಬ್ಯಾಟಿಗೆ ಹೊರಟುನಿಂತ್ರು, ಆಮೇಲೆ ಬಡಜ್ಜ ಹೆಂಡ್ತಿಗೆ ಹೇಳ್ದ "ಏನೆ ಏನೆ ನಿಮ್ಮಾವ್ರುಗಳೆಲ್ಲಾ ಬ್ಯಾಟೆ ಮಾರ್ಗ ಹೋಗ್ತಾರಂತೆ. ನನಗೂ ಬೇಜಾರು ಆಗ್ತೈತಿ ನಾನವ್ರ ಜೊತೆ ಹೋಗಿ ಬರ್ತೀನಿ." ಅಂತೇಳಿ ಹೆಂಡ್ತಿನ ಕೇಳಿದ. "ಕಂಡ್ರು ಸೇರ್ದೋರು ಕರಕಂಡುಬಾದುಬದ್ವೆ ನೀನು ನೂಕಿದ್ರೆ ನೂರು ತಾಕೆ ಬೀಳ್ತೀಯ. ಅವರು ಒಳ್ಳೆ ಜನರಲ್ಲ ಎನು ಬ್ಯಾಡ" ಅಮ್ತಂದು ಹೇಳ್ತಾಳೆ.... ಇಲ್ಲಾ ಕಣೆ ನಂಗೆ ಬಾಳ ಬೇಜಾರಾಗ್ಯತೆ ನಾನು ಹೋಗ್ಲೇಬೇಕು. ಅಂತೇಳಿ ಅವರ ಜೊತೆಗೆ ಹೊರಟೇಬಿಟ್ಟ, ಅವ್ರತ್ರ ಹೋಗ್ತಾನೆ ಬಡಜ್ಜ ಬಡಕುದುರೆ ಅಕ್ಕೊಂಡು. ಆ ಅಳೇರಲ್ಲ ಏ ಮುದ್ಕ ನೀನ್ಯಾಕೆ ಬಂದು ನಮ್ಮ ತಾವ ಒದ್ದಾಡ್ತೀಯ ಏನಾಗುತ್ತೆ ನಿನ್ಕೈಲಿ ಬ್ಯಾರೆ ಎಲ್ಲಾನ ಹೋಗು ಕೊಳಕನಾತ ನಾರ್ತೀಯ ಅಂಗೇನ. ನಾವು ನೋಡು, ಎಂಗಿದೀವಿ ಗಬ್ ನನ್ಮಗ ಈ ಚೋಟುದ್ದ ಮೀಸೆ ಬಿಟ್ಕೊಂಡು ನೂಕಿದ್ರೆ ಮೂರುತಾಕೆ ಬೀಳಂಗವ್ನೆ ಬ್ಯಾಟೆ ಮಾರ್ಗ ಹೋಗತೀನಿ ಅಂತ ಬಂದವ್ನೆ ಹೋಗಾ ಅತ್ತೆತ್ಲಾಗನ್ನ ನೀನೊಂದು ಕಡೀಕೆ. ನಮ್ಮ ಜೊತೆ ಬಂದೆ ಅಂದ್ರೆ ಹೇತಗಮ್ಮಾಂಗೆ ಒದ್ದು ಬಿಡ್ತೀವಿ...." ಅಂದ್ರು, ಅವಾಗ ಈವಜ್ಜ "ಅಪ್ಪ ಸ್ವಾಮಿಗಳಿರಾ ಏನೊ ನನ್ಗೆ ಬೇಜಾರಾಯ್ತು ಬಂದೆ. ನಾನು ನಿಮ್ಮನ್ನೇನು ಮಾಡ್ತೀನಪ್ಪ" ಅಂದ. ಏನೂ ಬ್ಯಾಡ ಹೋಗುದು ಅಂತೇಳಿ ಅವ್ರೆಲ್ಲ ಒಂದು ಕಡಿಗೆ ಹಾದಿ ಇಡದ್ರು ಇವನಿಗೆ ಒಂದು ಕಡೆ ಅದಿ ತೋರಿಸಿದ್ರು, ಈವಜ್ಜ ಒಂದು ದಿನ್ನಿ ಮರೆಯಾಗತಂಕ ಸುಮ್ಮಿದ್ದು ಆಮೇಲೆ ಬಡಕುದ್ರೆ ಶರ್ಮ ಉಗಿಸಕಂಬಿಟ್ಟ ಅವರ ಮ್ಯಾಲಾಸಿ ಏಳು ಯೋಚ್ನೆ ಹಾರಿಸಿಬಿಟ್ಟ, ಇಡೀ ಪ್ರಪಂಚದಾಗೆ ಕಾಡುಪ್ರಾಣಿಗಳು ಎಲ್ಲೆಲ್ಲಿ ಅದಾವೋ ಅವೆಲ್ಲವೂ ಒಂದೂ ಅವರಿಗೆ ಸಿಗದಂತೆ ಹಿಡಿದುಬಿಟ್ಟು ಒಂದು

ತ್ವಾಟ ಮಾಡಿಬಿಟ್ಟು ಅದ್ರೆಕೆಲ್ಲಾ ಕೂಡಿಬಿಟ್ಟ ಆ ತ್ವಾಟದತ್ರ ಒಂದು ಬಾವಿ. ಒತ್ತು ಹುಟ್ಟಿ ಬರೋಸಮಯ. ಆ ಬವಿಹತ್ರ ಆ ಪಂಚಕಲ್ಯಾಣಿ ಅಂಬೋಕುದ್ರೆ ಕಟ್ಟವ್ನೆ. ಅವ್ನೂ ಬಾವಿಗಡ್ಡೆಗೆ ಕುಂತ. ಸೂರ್ಯನಾರಾಯಣನೇ ಒಂದು ರೀತಿ ಹುಟ್ಟಿದ್ರೆ ಈ ಹುಡ್ಗನೂ ಆ ಪಂಚಕಲ್ಯಾಣಿ ಎಂಬ ಕುದ್ರೆ ಒಂದು ರೂಪಿಲಿ ಕಾಣಸ್ತಾವ್ರೆ.

ಇತ್ತ ಬ್ಯಾಟೆ ಮಾರ್ಗ ಹೊಂಟೋರೆಲ್ಲ ದಿಕ್ಕುದೆಸೆನೆಲ್ಲ ತಿರುಗಿಬಿಟ್ಟು ಎಲ್ಲೆಲ್ಲೂ ಒಂದು ಕಾಡಮೃಗ ಸಿಗದಂತೆ ಓಟು ಪರದಾಡಿಕೊಂಡು ಸೀದ ಅವನತ್ತಲೆ ಹೋದ್ರು. ಇವನೇ ಬಡಜ್ಜ ಅಂಬೋದು ಅವರಿಗೇನು ಗೊತ್ತು. ಅಂಗೇ ರಾಜಕುಮಾರ ಆಗವ್ನೆ. ಇವ್ರೆಲ್ಲಾ ಅಲ್ಲಿಗೆ ಹೋಗಿಬಿಟ್ಟು "ಸ್ವಾಮಿ ನಾವಿಂತ ಚಳ್ಳಕೆರೆ ಪಟ್ನದಿಂದ ಬಂದಿವಿ ದಿಕ್ ದೆಸೇನೆಲ್ಲ ತಿರುಗಿದ್ರೂ ಎಲ್ಲೆಲ್ಲೂ ಒಂದು ಕಾಡುಮೃಗ ಸಿಗ್ಲಿಲ್ಲ. ಬರೇ ಕೈಯಾಗೆ ಹೋದ್ರೆ ನಮ್ಗೆ ಬಾಳ ಅಪಮಾನ ಆಗುತ್ತೆ. ಅದ್ರಿಂದ ನಿಮ್ಮ ತ್ವಾಟದಲ್ಲಿ ನಮಗೊಂದು ಮಿಕ ಕೊಟ್ರೆ ನೀವೆಷ್ಟು ದುಡ್ಡು ಕೇಳಿದ್ರೂ ಕೊಡಾಕೆ ನಾವು ತಾಯರು ಸ್ವಾಮಿ.... ಅಂದ್ರು. ಅಯ್ಯಾ ಬರ್ರಿ, ಮುದುರ್ರಿ ಪಂಚೆ ನೀವೇನೂ ದುಡ್ಡುಪಡ್ಡು ಕೊಡಬ್ಯಾಡ್ರಿ ನನ್ಗೆ" ಅಂತೇಳಿ ಎಲ್ಲಾರ ಪಂಚೆ ಮುದುರಿಸ್ದ. ಎಲ್ಲರತ್ರ ಒಂದೊಂದು ಬೊಟ್ಟಿನಷ್ಟು ಗುರ್ತಿಗೆ ವಳದೊಡೆಗಳನ್ನ ಕೊಯ್ಕಂಬಿಟ್ಟ. ಹೋಗ್ರಿ ನಿಮ್ಗೆ ಬೇಕಾದನ್ನ ಹೊಡಕಳ್ರಿ ಅಂದುಬಿಟ್ಟ. ಅವ್ರು ತಮಗೆ ಬೇಕು ಬೇಕಾದ ಪ್ರಾಣಿಗಳೆನ್ನೆಲ್ಲ ಹೊಡದುಕೊಂಡು ಬಿಟ್ಟು ಆನೆ ಒಂಟೆ ಮ್ಯಾಲೆ ಅಕ್ಕಂಬಿಟ್ಟು "ಸ್ವಾಮಿ ನಾವು ಹೋಗ್ತೀವಿ ನಮಸ್ಕಾರ ಅಂತೇಳಿ ಹೋದ್ರು. ಆಮೇಲೆ ಈವಜ್ಜ ಆ ತ್ವಾಟದೊಳಗಿನ ಮಿಕಗಳನ್ನೆಲ್ಲ ಬಿಟ್ಟಿಟ್ಟ.

ಪಂಚಕಲ್ಯಾಣಿ ಕುದ್ರೆ ಅಕ್ಕಂಬಿಟ್ಟು ಅವ್ರಮ್ಯಾಲಾಸಿ ಏಳು ಯೋಜ್ನೆ ಹಾರಿಬಿಟ್ಟ. "ಅಯ್ಯೋ ಸೂಳೆಮಗನ್ನ ನೋಡೋ ದೊಣ್ಣಿಕ್ಯಾತನ್ನ ಹೊಯ್ಕಂಡು ಕುತ್ಕಂಡಿದಾನೆ ನೋಡಲೇ ನಾವು ಯಂತಾ ಮಿಕಗಳನ್ನ ತಗಂಡು ಬಂದ್ವಿ ದೊಣ್ಣೆಕ್ಯಾತನ್ನ ಹೊಯ್ಕಂಡು ನಮ್ಜೊತೆ ಊರೊಳಗೆ ಬರಬ್ಯಾಡ. ನೀನು ಮುಂದೆ ಹೋಗು ಇಲ್ಲಾಂದ್ರೆ ಹಿಂದೆಬಾ...." ಅಂದ್ರು ನೀವ್ಯಾಕೆ ಅಂಗೆ ಕ್ವಾಪ ಮಾಡ್ಕಂತೀರಿ ನಾನು ನಿಮ್ಮ ಹಿಂದೇನೆ ಬರ್ತೀನಪ್ಪ" ಅಂತೇಳಿ ಹಿಂದುಳ್ಕಮ್ತಾನೆ. ಅಳೇರೆಲ್ಲ ರಾಜನ್ಗೆ ಹೇಳಿಕಳಿಸ್ತಾರೆ ಅವಾಗ ಇವರ ಹೆಂಡ್ರು ಒಳ್ಳೊಳ್ಳೆ ಸೀರೆ ಉಟ್ಕೊಂಡು ರತ್ನದಾರ್ತಿ ಮುತ್ತಿನಾರ್ತಿ ತೆಗ್ದುಕೊಂಡು ನಂದಿಕೋಲು ಕುಣಿಸ್ಕಂಡು ಕಳ್ಳಿಚಮಾಳ ಬಾರಿಸ್ಕೊಂಡು, ಕೋಲಾಟ ಆಡ್ಕೊಂಡು ದಿಬ್ಬೀರ್ತವಾಗಿ ಬ್ಯಾಂಡುಗಳು ಮಾಡಿಸಿಕೊಂಡು ತಮ್ಮ ಗ್ರಂಡ್ರ ಎದುರೀಗೆ ಬರ್ತಾರೆ. ಅವಾಗ ಬಡಜ್ಜನ ಹೆಂಡ್ತಿ "ನಮ್ಮಕ್ಕಗಳು ಎಲ್ಲಾ ಹೋಗ್ತಾರೆ ಅಂದಮ್ಯಾಗೆ ನಾನ್ಯಾಕೆ ಸುಮ್ನೆ ಇರಲಿ" ಅಂತ ಅಂದ್ಕೊಂಡು ಅಯಮ್ಮನು ಒಂದು ಸೀರೆ ಉಟ್ಕಂಡು ಒಂದು ಆರ್ತಿ ತಗಂಡು ಅವರ ಜತ್ಗೇನೆ ಆಯಮ್ಮ ಬಂದುಬಿಡ್ತು. ಅಳೇರು ಎಲ್ರೂ ಸಾಲಾಗಿ ನಿಂತಿದ್ರು ಅವ್ರವ್ರ ಮುಂದೆ ಹೆಣ್ತೀರು ಆರ್ತಿ ಬೆಳಗಿಕೊಂಡು ಪದ ಹೇಳ್ತಿದ್ರು. ಈ ಬಡಜ್ಜನೇಣ್ತಿ ಅವಜ್ಜನ್ಮುಂದ್ಕೆ ಹೋಗಿ ಅವಳಿಗೆ ಬಾಯಿಗೆ ಬಂದದ್ದು ಯಂತದೋ ಒಂದು ಹಾಡನ್ನು ಹೇಳಿದ್ಲು. ರಾಜ್ನ ಅಳೇರೆಲ್ಲಾ ಬೇಕಾದಷ್ಟು ಹಣವಂತ್ರು ದಿಮ್ನ ಒಂದೊಂದು ಚಿಲ್ರೆ ತಗಾಬಿಟ್ಟು ಆರ್ತಿತಟ್ಗೆ ಜಣಜಣ ಉದ್ರಿಸಿಬಿಟ್ರು. ಈ ಕಡೆ ಬಡಜ್ಜನೂ ಕೂಡ ಕೆಳಗಡೆ ಬಗ್ಗಿ ಒಂದಿಡಿ

ದಿಮ್ಮನ ಕಲ್ಲಳ್ಳು ಬಾಸ್ಕಂಬಿಟ್ಟು ಅವ್ನೂ ಜಣಜಣ ಉದುರುಸಿಬಿಟ್ಟ. ಎಲ್ಲ ಹೆಣ್ಮಕ್ಕುಳು ಬಡಜ್ಜ ಎನಾಗವ್ನೆ ನಡೀರಿ ನೋಡಾನ ಅಂತಂದು ಓಡಿಬಂದು ಬಗ್ಗಿ ನೋಡಿದ್ರು ಅದ್ರಾಗೆ ಇರೋವೆಲ್ಲ ಬರೀ ಕಲ್ಲಳ್ಳು. ಆಗ ಅವ್ರು ಕುಚೇಷ್ಟೆ ಮಾಡ್ತ ತಮ್ಮ ತಟ್ಟೆ ಒಳಗೆ ಇರೋ ಹಣವನ್ನ ಈಕೆಗೆ ತೋರಿಸಿದರು. ಈಯಮ್ಗೆ ಬಾಳ ಸಿಟ್ಟು ಬಂದುಬಿಡ್ತು. "ನನ್ಗಂಡ್ನೂ ಸರಿಸಮನಾಗಿ ನಿಮ್ಮಾರಂಗಿದ್ದರೆ ಆಡ್ಕಾಮ್ತರ್ಲಿಲ್ಲ. ನನ್ಗೆ ಇದೇ ಬಂಗಾರ ನಾನು ನಿಮ್ದೇನನ್ನ ನೋಡಾಕೆ ಬಂದಿದ್ನೇನ್ರೆ ? ನೀವ್ಯಾಕೆ ಬಂದದ್ದು ನಂತಾಕೆ ? ಈ ಮಾರಾಯ ಬ್ಯಾಡಾಂದ್ರೂ ಕೇಳ್ಳಿಲ್ಲ. ಅಮ್ತಾ ನಡಿ ಹೋಗಾನ ಮಂತಾಕೆ. ನಾನು ಮದ್ಲೆ ಹೇಳ್ದೆ ಕಂಡ್ರು ಸೇರ್ದೋರು ಕರ್ಕಂಡುಬಾದುಬದ್ವ? ಅಂತೇಳಿ ತನ್ನ ಗಂಡನ್ನ ಮನಿಗೆ ಕರ್ಕಂಡು ಹೋದ್ಲು.

ಅವತ್ತಿಗೆನೆ ರಾಕ್ಷ ಹೇಳಿತ್ತೆಲ್ಲ ವಾಯ್ದೆ ಅದು ಮುಗ್ದೋಗಿತ್ತು. ಆ ವಾಯ್ದನ ಇವ್ನು ಮರೆತುಬಿಟ್ಟಿದ್ದ. ಅವನು ಆ ಬಡಜ್ಜನ ಚರ್ಮ ತೆಗೆದಿಟ್ಟು ತಲೆದಿಂಬಿಗೆ ಇಟ್ಕೊಂಡು ಹೆಣ್ತಿಮಗ್ಗುಲಾಗೆ ಮನಗವ್ನೆ ಅಷ್ಟೇ ಅಲ್ಲ ಆ ಬಡಕುದುರೆ ಶರ್ಮಾನೂ ಉಗಿಸಿಬಿಟ್ಟವ್ನೆ. ಒಳ್ಳೆ ಗೊರಕೆ ನಿದ್ದೆ ಹೊಡಿತಾ ಐದಾನೆ. ಅವಾಗ ಆಯಮ್ಗೆ ಎಚ್ರ ಆಯ್ತು. ಎದ್ದು ನೋಡ್ತಾಳೆ ಚಂದ್ರ ಸೂರ್ಯ ಇದ್ದಂಗವೆ. ಮನೆಯೆಲ್ಲಾ ದೀಗೆ ಹಚ್ಚಿದಂಗಾಗ್ಯೆತೆ. ಅಂತಾರೂಪಸ್ತ ಹುಡುಗ. ಅವಳಿಗೆ ಬಾಳ ಆನಂದ ಆಗ್ಬಿಟ್ಟು ಯಾಕೋ ಏನೋ ಅವನ ತಲೆದಿಂಬಿಗೆ ಕೈ ಇಟ್ಲು. ಅವಳಿಗೆ ಬಡಜ್ಜ ಬಡಕುದುರೆ ಶರ್ಮ ಸಿಕ್ಕಿಬಿಡ್ತು. ಓಹೋ ಇದ್ರಿಂದ ಏಸಬದ್ಲು ಮಾಡಕಮ್ತಿರಬಹುದು ಅಂದ್ಕೊಂಡು ಆ ಶರ್ಮನ್ನ ಹಿತ್ಲಕಡೆ ತಗಂಡೋಗಿಬಿಟ್ಟು ಬೂದಿಮಾಡಿದ್ಲು. ಆಮೇಲೆ ಬಂದು ಗಂಡನತ್ರ ಆನಂದವಾಗಿ ಮನಗಿದ್ಲು. ಅವ್ನಿಗೆ ಎಚ್ಚರ್ಕೆ ಆಯ್ತು. ಆವಾಗ ಎದ್ದಾಳ್ತಾನೆ ಕುದ್ರೆ ಕಟ್ಟಿದ ಕಣ್ಣಿಲೆ ಅಬ್ರಸ್ಕಮ್ತಾಐತೆ. "ಅಪ್ಪಮಗ್ನೆ ಅನ್ಯಾಯ ಮಾಡಿಬಿಟ್ಟೆಲ್ಯಪ್ಪ, ಏನಪ್ಪ ನೋಡು ರಾಕ್ಸ ಬರ್ತಾಐತೆ" ಅಂತೇಳ್ತು. ಅವಾಗ ಇವ್ನು ಹೆಣ್ತಿಕೇಳ್ದ. 'ನನಗೇನುಗೊತ್ತು ನೀನು ಒಂದಿವಸನ್ನ ನನ್ನತ್ರ ಹೇಳಿದ್ರೆ ನಾನ್ಯಾಕೆ ಇಂಗೆ ಮಾಡ್ತಿದ್ದೆ' ಅಂದ್ಲು ಅವಾಗ ಕುದ್ರೆ ಗೋಳಾಡ್ತ "ಅಪ್ಪಾ ಮಗ್ನೆ ನನ್ನ ಸಾಯ ಬಿಡ್ತಿಯಲ್ಲಪ. ನಾನೇಳ್ದಂಗೆ ಕೇಳ್ತಿಏನಪ್ಪಾ ? ಕೇಳ್ತೀನಿ. ಏನಿಲ್ಲ ಊರ್ಬಾಕ್ಲ ಕಲ್ಗೋಗಿ ಬಂಗಾರದ ನೊಣ ಆಗಿ ಅದಿಕ್ಯ ತಿಂದೇನು ತೇಗೇನು ಅಮ್ತಾರಾಕ್ಸ ಬರುತ್ತೆ ಅದು ಬಾಕ್ಲ ತೂರಿ ಬರಿಬೇಕಾದ್ರೆ ಕತ್ತಿ ಒಳ್ಬಿಡ್ದಂಗೆ ನೆಟ್ಗೆ ಕಡ್ದು ಬಿಡು. ಕತ್ತಿನೇನಾದ್ರೂ ಒಳ್ಬಿಟ್ರೆ ಈ ಪ್ರಪಂಚದಾಗೆ ಇಲ್ಲದಂತ ಒಂದು ಹೆಣ್ಮಗಳಾಗಿ ನಿನ್ನತ್ರ ಪಕ ಪಕ ನಗ್ತಾ ನಿಂತ್ಕಮ್ತಾಳೆ. ಅವಾಗ ನಿನ್ಗೆ ಕಡಿಯಾಕೆ ಆಗ್ದೆ ಮಬ್ಬುಬಂದುಬಿಡುತ್ತೆ" ಅಂತೇಳ್ತು ಕುದ್ರೆ, ಕುದ್ರೆ ಹೇಳಿದ ರೀತೀಲಿ ಈ ಹುಡ್ಗ ಬಂಗಾರದ ನೊಣವಾಗಿ ಊರ ಬಾಕ್ಲ ಕಲ್ಲಿಗೆ ಅದಿಕ್ಕಂಬಿಟ್ಟ ತಿಂದೇನು ತೇಗೇನು ಅಮ್ತಾಲೆ ರಾಕ್ಸ ಬಂದುಬಿಡ್ತು. ಅವ್ನು ಎತ್ತಿ ಹೊಡಿಬೇಕಾದ್ರೆ ಕತ್ತಿಒಳ್ಬಿಡ್ತು. ಈ ಪ್ರಪಂಚದಾಗೆ ಇಲ್ದೆ ಇರೊವಂತ ಹೆಣ್ಮಗಳಾಗಿ ಆ ರಾಕ್ಸ ರೂಪ ತಾಳ್ತು. ಅವಾಗ ಅವ್ನಿಗೆ ಕಡಿಯಾಕೆ ಮನ್ಸು ಬರ್ಲಿಲ್ಲ. ಅವಾಗ ಆ ರಾಕ್ಸ ಕುದ್ರೆ ಹತ್ರ ಬಂದು ಎಲ್ಲು ತುಂಡುಮಾಡಿ ರೈತ ಕುಡ್ದುಬಿಟ್ತು. ಎಂತಾ ಎಡವಟ್ಟು ಕೆಲ್ಸ ಆಯ್ತಲ್ಲ ಅಂತೇಳಿ ಆ ಗಂಡ ಹೆಂಡ್ತಿ ರಾತ್ರೆಲ್ಲಾ ಆ ಸತ್ತ ಕುದ್ರೆ ಮೇಲೆ ಬಿದ್ದು ಬಿದ್ದು

ಅತ್ತುಬಿಟ್ರು. ಅವಾಗಿನ್ನೇನು ಮಾಡಾಕಾಗುತ್ತೆ ಗೋಳಾಡಿ ಗೋಳಾಡಿ ರೋಸಿ ಮನಿಕ್ಕಂಬಿಟ್ರು.

ಬೆಳಿಗ್ಗೆ ಎದ್ದು ಕುರ್ಚಿಮ್ಯಾಲೆ ಕಾಲ ಮೇಲೆ ಕಾಲು ಹಾಕ್ಕೊಂಡು ಕುಕ್ಕಂಡಿದ್ದ. ಹೂಗಾರಜ್ಜಿ ಹೂತಗಂಬದ್ಲು. ನೋಡ್ತಾಳೆ ಈ ಹುಡುಗನ್ನ ! ಅಂಗೇನೆ ಸಮ್ಮತ್ರಿಬೀಳಂಗಾಗಿಬಿಡ್ತು. ಅವಾಗ ಕೂಡ್ಲೆ ಅವಜ್ಜಿ, ದೊರೆತಾಕ ಓಡಿಹೋದ್ಲು. "ಸ್ವಾಮಿ ಸ್ವಾಮಿ ಬಡಜ್ಜಗೆ ಕೊಟಿದ್ರಲ್ಲ ನಿನ್ನಮಗಳನ್ನ ಅವಜ್ಜನ್ನ ಏನೋ ಮಾಡಿಬಿಟ್ಟು ಎಂತಾನ್ನ ತಂದಿಟ್ಟಕೊಂಡಿದಾಳೆ ಸ್ವಾಮಿ ನಿನ್ನ ಮಗಳು. ಈ ಪಟ್ನದಾಗೆ ಯಾರೂ ಅವ್ನಿಗೆ ಸಾಟಿಯಿಲ್ಲ ಅಂತೇಳಿ ಬಿಟ್ಟಳು. ಅವಾಗ ದೊರೇನೆ ನೇರ್ವಾಗಿ ಇವ್ನ ಮನೇತನ್ಕ ಬಂದು ನೋಡ್ತಾನೆ. ದೊರೇನೆ ಅವನಿಗೆ ನಮಸ್ಕಾರ ಮಾಡ್ತಾನೆ. ಅಮೇಲೆ ಸ್ವಾಮಿ ನೀವ್ಯಾರೂ? ಎಲ್ಲಿಂದ ಬಂದ್ರಿ? ಎಲ್ಲಾ ವಿಚಾರ ಹೆಳ್ಬೇಕು. ಅಂತ ಕೈ ಮುಗುದುಕೇಳ್ಕಮ್ತಾನೆ. ಮಾವ ನೀನೇನೂ ಹೆದರಬ್ಯಾಡ ಬಾ, ಆ ಬಡಜ್ಜ ನಾನೆ. ಹುಲಿ ಹೊಡ್ಡೋನು ನಾನೆ. ನಾವು ಯಾವುದೋ ಒಂದು ಮೋಸಕ್ಕೆ ಸಿಕ್ಕಿಹಾಕ್ಕೊಂಡು ಇಂತಿಂತಾ ಬದ್ಕು ಆಯ್ತು. ರಾಕ್ಸ ಬಂದು ನನ್ನ ಕುದ್ರೆನೆ ಕಡ್ತು ಹೋಗಿಬಿಡ್ತು. ನಿನ್ಗೆ ಅಲ್ಲೂ ನಂಬ್ಕೆ ಬರದಿದ್ರೆ ಬ್ಯಾಟೆ ಮಾರ್ಗ ಹೋದೋರ್ನೆಲ್ಲ ಕರಿ. ಅಂತ ಹೇಳ್ದ. ಇವ್ನ ಮಾತ್ನಂತೆ ಎಲ್ರೂ ಬಂದ್ರು. ಅವ್ರಿಗೆ ಪಂಚೆಮುದುರಿಸಿದ. ಈ ತೊಡೆಕೊಯ್ಕಂಡಿದ್ನಲ್ಲ ಅವನ್ನೆಲ್ಲ ಆಯಾ ಜಾಗಕ್ಕೆ ಕಚ್ಚಿಸಿಬಿಟ್ಟ. ಆವಾಗ ಎಲ್ಲಾರ್ಗೂ ಆಶ್ಚರ್ಯವೋ ಆಶ್ಚರ್ಯ. ಅವನಿಗೆ ನಮಸ್ಕಾರ ಹಾಕಿದ್ರು.

ಮಾರ್ನೆ ದಿನ ರಾಜ ಇಡೀ ಪ್ರಜೆಗಳನ್ನೆಲ್ಲ ಕಲೆಹಾಕಿಬಿಟ್ಟು ಆ ಹುಡ್ಗನ ತಂದೆ ತಾಯಿಗಳನ್ನ ಅವರ ಪರಿವಾರ್ದ್ದೋರ್ನ ಕರೆಕಳಿಸಿಕಂಬಿಟ್ಟ ಆಗಲ್ಲ ಮದ್ವೆ ಈಗ ಅಂತೇಳಿ ಪಟ್ಟಣ ಕುಟ್ಟಿ ಪಟ್ಣ ಸಾರ್ಸಿ ದಿಬ್ತೀರ್ತವಾಗಿ ಮದ್ವೆ ಮಾಡಿಬಿಟ್ಟ. ಮದ್ವೆ ಆಗಿ ಅವರು ಚಳ್ಕೆರೆ ಪಟ್ನದಾಗೆ ರಾಜದರ್ಬಾರ ಅಳ್ಕೊಂಡು ಹೋಗ್ತಾ ಐದಾರೆ. ನಾವಿಲ್ಲಿ ಕುಕ್ಕಂಡು ತೂಗುಡುಸ್ತಾ ಇದೀವಿ.

○

2. ಸಾವಿತ್ರಿ ಸ್ವಪ್ನ

ಕರಮರಳ್ಳಿ ಅಂಬೋದೊಂದು ಊರು. ಆ ಊರಾಗೆ ಇಬ್ರು ಗಂಡ–ಹೆಂಡ್ತಿ ಇದ್ರು, ಅವ್ರಿಗೆ ಮೂರು ಜನ ಗಂಡುಮಕ್ಳು ಇದ್ರು. ಅವ್ರು ಬಾರಿ ಅನುಕೂಲಸ್ತ್ರರು. ಮೂವರು ಮಕ್ಳನ್ನೂ ಇಸ್ಕೂಲ್ಗೆ ಆಕಿಬಿಟ್ರು. ಗಂಡ ಹೆಂಡ್ತಿ, ಒಬ್ಬ ಸಂಬ್ಳದಾಳನ್ನ ಇಟ್ಕೊಂಡು ಜಮೀನು ಕೆಲಸ ಮಾಡಿಸ್ತಿದ್ರು. ಆ ಮೂವರು ಮಕ್ಳೂ ಕೂಡಾ ವಿದ್ಯಾಭ್ಯಾಸವೆಲ್ಲ ಮುಗಿಸ್ಕಂಡು ಮನೆಗೆ ಬಂದ್ರು. ಮನೆಗೆ ಬಂದು 'ಯಮ್ಮಾ ಅಪ್ಪಯ್ಯ ಎಲ್ಲೋದ್ನಮ್ಮ' ಅಂತ ಕೇಳಿದ್ರು. 'ನಿಮ್ಮಪ್ಪಯ್ಯ ಆಳಿಟ್ಕಂಡು ಒಲ್ದಾಗೆ ಕೆಲ್ಸ ಮಾಡಿಸ್ತೈತೆ' ಅಂತ ತಾಯಿ ಹೇಳ್ತು. ಮೂವರೂ ಊಟ ಮಾಡಿದ್ರು. ಅದ್ರಾಗೆ ಚಿಕ್ಕುಡ್ಗ 'ಏನ್ರಣ್ಣ ವಲ್ದತ್ರ ಹೋಗಿ ಬರಾನ ನಡಿರಿ' ಅಂದ. ಎಲ್ರೂ ಹೋದ್ರು. ಅವರಪ್ಪ ವಲ್ದಾಗೆ ಕೆಲ್ಸ ಮಾಡ್ತಿದ. ಇವ್ರು ತಂದೆ ತಾಕೂ ಹೋಗ್ಲಿಲ್ಲ. ಮೂವರು ಸಾಲ್ಗೆ ಒಂದು ಬದುವಿನ ಮ್ಯಾಲೆ ಕುತ್ಕಂಡ್ರು. ಕುತ್ಗಂಡ್ಮೇಲೆ ಎಲ್ಲರಿಗಿನ ಚಿಕ್ಕುಡ್ಗ 'ಏನಣ್ಣ ನಾವು ಇಂಗೆ ಕುಕ್ಕಂಡ್ರೆ ಏನ್ ಗೊತ್ತಾಗುತ್ತೆ ? ನಾವು ಹೋಗಿ ಒಂದು ಮಂತ್ರ ಕಲ್ತಗಂಡು ಬರಾನ ನಡಿರಿ' ಅಂದ. ಅವಾಗ ಹಿರಿಯಣ್ಣ 'ಇದೇನ ಇಂಗಮ್ತಿಯ, ನಾವು ಈಗ್ಲೆ ಗನವಾಗಿ ಬುದ್ದಿವಂತ್ರಾಗಿದೀವಿ, ಮಂತ್ರ ಅಂಬೋದು ಎಂತಾದು ? ಪ್ರಶ್ನೆ ಹಾಕ್ತಾನೆ. ಅದ್ಕೆ ಚಿಕ್ತಮ್ಮ ಉತ್ರ ಹೇಳಿ ಎಲ್ಲಾರ್ನೂ ಮಂತ್ರ ಕಲಿಯಾಕೆ ಕರ್ಕಂಡು ಹೋಗ್ತಾನೆ. ಮೊದ್ಲು ಮನ್ಗೆ ಹೋಗಿ 'ಯಮ್ಮಾ ಯಮ್ಮಾ ನಮ್ಮೂವರ್ಗೂ ಉಂಬಾಕೈತೇನಮ್ಮ' ಅಂತ ಕೇಳ್ದ. ಹಿರಿಯರಿಬ್ರಿಗೆ ಮಾತ್ರ ಐತಂತ ಅಮ್ಮ ಹೇಳಿದ್ಲು. 'ಅಂಗಾರೆ ಅವಬ್ರಿಗೆ ಉಣ್ಣಾಕಿಕ್ಕು' ಅಂತೇಳಿ 'ಏನಣ್ಣ ನೀವು ಉಂಡುಬಿಟ್ಟು ಸರಿಯಾದ ಕುದ್ರೆ ಜೀನ ಮಾಡ್ಕಂಡು ಪೂಜಾರ ಕಪ್ಲಿತಾಗೆ ಉಂಚೆಮರದಡೀಲಿ ಕುಕ್ಕಳ್ರಿ. ನಾನೂ ಉಂಡ್ಕಂಡು ಬರ್ತೀನಿ' ಅಂತೇಳಿ ಅವರನ್ನ ಕಳಿಸ್ಕೊಟ್ಟ. ಅಮ್ಯಾಲೆ ಅವ್ನು ಉಂಡುಗಿಂಡು ಒಂದು ಕುದುರೆ ಜೀನು ಮಾಡ್ಕಂಡು ತಾಯಿಗೆ ನಮಸ್ಕಾರ ಮಾಡಿ ಕುದ್ರಿಗೆ ಕಾಲಚ್ಚಿದ. ಪೂಜಾರ ಕಪ್ಲಿತಾವ ನೋಡ್ತಾನೆ. ಯಾರೂ ಇಲ್ಲ. ಅವಾಗ ಮುಂದಕ್ಕೆ ಹೋದ. ಹೋಗ್ತ ಇರುವಾಗ ಒಂದು ಸೀಳಾದಿ ಕಂಡ್ತು. ಅದ್ರಾಗೆ ಕುದ್ರೆ ಹೆಜ್ಜೆನೂ ಕಂಡ್ತು. ಓ ನಮ್ಮಣ್ಣಗಳು ಇತ್ಲಾಗೆ ಹೋಗಿರಬೇಕು ಅಮ್ತಂದು ಇವ್ನನೂ ಅತ್ಲಾಗೆ ಕುದುರೆ ತಿರುಗಿಸ್ದ. ಆ ದಾರಿ ಸೀದ ಒಂದು ಗುಡ್ಡ ಗೋರಾರಣ್ಯಕ್ಕೆ ತಗೊಂಡೋಗಿಬಿಡ್ತು. ಭರ್ತಿಕಾನು. ಇವುನು ಎಂದೂ ಕಾಡಿಗೆ ಹೋದವನಲ್ಲ. ಹುಲಿ ಕಿರುಬನ ಕಾಟ ಬಾಳ. ಆ ಕಾನ್ನಾಗೆ ದೊಡ್ಡದೊಂದು ಅಳ್ಳ. ಆ ಅಳ್ಳದಾಗೆ ಕುದ್ರೆ ಇಳೀವಲ್ದು.

ಆ ಕನ್ನಾಗೆ ಒಂದು ಕಳ್ಳನ ಮನೆ ಆ ಕಳ್ಳೊಗ್ಬ ಹೆಣ್ಮಗಳು ಇದ್ಲು. ಅವಳ ಹೆಸರು ಸಾವಿತ್ರಿ ಅಂತ. ಸಾವಿತ್ರಿಗೆ ಒಂದು ಕೀಲು ಕುದ್ರೆ, ತಂದೆಗೆ ಒಂದು ಕೀಲುಕುದ್ರೆ ಇತ್ತು. ಆ ಕಳ್ಳ ಸ್ವತಂತ್ರವಾಗಿ ಕಳ್ತನ ಮಾಡ್ತಿರಲಿಲ್ಲ. ಮಗಳು ಮನಿಕ್ಕಂಡು ಕನಸುಕಂಡು ಹೇಳ್ದಾಗ ಕಳ್ತನಕ್ಕೆ ಹೋಗ್ತಿದ್ದ. ಸಾವಿತ್ರಿ ಸ್ವಪ್ನದಾಗೆ ಈ ಕರಮರಳ್ಳಿ ಹುಡ್ಗ ಕಂಡು ಬಂದ. ಆ ಕೂಡ್ಲೆ ಸಾವಿತ್ರಿ 'ಅಪ್ಪಾ ಅಪ್ಪಾ, ಇಲ್ಗೆ ಮೂಡಲ ದಿಕ್ಕಿನಾಗೆ ಏಳು ಯೋಜ್ನೆ ದೂರ್ದಲ್ಲಿ ಒಬ್ಬ ರೈತನ್ಮಗ ಒಂದು ಹಳ್ಳದಾಗೆ ಕುದುರೆ ಇಳಿಸ್ತ ಐದಾನೆ. ನೀನು ಈ ಕೂಡ್ಲೆ ಅಲ್ಲಿಗೆ ಹೋಗಿ ಆ ಹುಡುಗನ್ನ ಇಡ್ಕಂಡು ಬಾರಪ್ಪ. ಆದ್ರೆ ಅವ್ನ ಪ್ರಾಣ ತೆಗೀಬ್ಯಾಡ. ಅವ್ನು ಬಾಳ ರೂಪಸ್ತ ಹುಡ್ಗ. ನಾನು ಅವ್ನ ಮದ್ವೆ ಆಗ್ಬೇಕು' ಅಂತ ಹೇಳಿದ್ಲು. ತಂದೆ ಕೀಲು ಕುದ್ರೆ ಜೇನು ಮಾಡ್ಕೊಂಡು ತಕ್ಷಣ ಅಲ್ಲಿಗೆ ಹೋದ. ಈ ಹುಡ್ಗ ಹಳ್ಳದಾಗೆ ಕುದ್ರಿ ಇಳಿಸ್ತಾ ಇರ್ವಾಗ ಈ ಕಳ್ಳ ಅಲ್ಲಿಗೇನೆ ತನ್ನ ಕೀಲುಕುದ್ರೆ ಅಡ್ವಾಗಿ ಇಳಿಸಿಬಿಟ್ಟ. ಇಳಿದುಬಿಟ್ಟು ಈ ಹುಡ್ಗನ್ನ ಕುದ್ರೆ ಲಗಾಮು ಹಿಡ್ಕಂಡು 'ಇಳಿಯಾ ಕೆಳಾಕೆ' ಅಂತಂದು ಗದ್ರಿಸಿದ. 'ಸ್ವಾಮಿ, ನಾನು ಸಿಗಬಾರದಾಗಿತ್ತು. ಸಿಕ್ನಿವ್ನಿ ನೀನು ಸ್ವಲ್ಪ ದೂರನಿಂತ್ಕ. ಭಯವಾಗುತ್ತೆ ನಾನು ಇಳಿತೀನಿ' ಅಂದ. ಅವ್ನು ಅದ್ಕೆ ಒಪ್ಪಿ ದೂರಸರ್ಕಂಡು, 'ಇವ್ನು ನನ್ನ ಕೈಗೆ ಸಿಕ್ಕಮ್ಯಾಲೆ ಇನ್ನೆಲ್ಲಿ ಹೋಗ್ತಾನೆ ಅಂದ್ಕಂಡು, ತನ್ನ ಕೀಲು ಕುದ್ರೆ ಮಡಿಸ್ಕಂಡು ಜೇಬ್ನಾಗೆ ಇಟ್ಕೊಂಡ. ಈ ಹುಡ್ಗ ಇಳಿಯಾನಂಗೆ ಒಜ್ಡಾಡಿ ಇದ್ದಕ್ಕಿಂದ್ದಂಗೆ ಕುದ್ರೆಗೆ ಒಂದೇಟು ಕೊಟ್ಟ. ಆ ಕುದ್ರೆ ಒಂದೇ ಗಳಿಗ್ಗೆ ಆಕಾಶಮಾರ್ಗದಾಗೆ ದುರ್ಗದ ಪಟ್ನ ಸೇರ್ತು. ಆ ದುರ್ಗದ ಜನಗಳೆಲ್ಲ ಇವನ್ನ ನೋಡಿ ಈ ಹುಡ್ಗಂದು ಯಾವೂರು ? ಯಾಕಿಂಗೆ ಗಾಬರಿಯಿಂದ ಐದಾನೆ ? ಒಳ್ಳೆ ರಾಜಕುಮಾರ ಇದ್ದಂಗವ್ನಲ್ಲ ಅಂತಂದು ಈ ಹುಡ್ಗನ್ನ ವಿಚಾರಸ್ಕಮ್ತಾರೆ. ಆ ಹುಡುಗ ನಡೆದ ಕತೆನೆಲ್ಲಾ ಹೇಳ್ತಾನೆ. 'ನೋಡ್ರಪ್ಪಾ ನನ್ನೂರು ಕರಮರಳ್ಳಿ. ನನ್ನ ಹೆಸ್ರು ಮಲ್ಲಯ್ಯ. ನಾನು ಯಾವ್ದೊ ಕೆಲ್ಸಕ್ಕಾಗಿ ಆರ್ನಡ್ವಿಯಾಗೆ ಹೋಗ್ತಿದ್ದೆ. ಕಳ್ಳ ಹಿಡ್ಕಂಡು ಬಿಟ್ಟಿದ್ದ. ಅವ್ನಿಂದ ತಪ್ಪಿಸ್ಕೊಂಡು ಬಂದುಬಿಟ್ಟೆ' ಅಂತ ಹೇಳ್ದ. ಅವ್ನು ಇವಾಗ ಬರ್ತಾನೇನೋ ಅಂತಂದು ಒಂದೆ ಸಮನೆ ನಡಗ್ತಾ ಇದಾನೆ. ಇವ್ನ ತಾರಾಟ ನೋಡಿ ದುರ್ಗದೊಳಗಿನ ಜನ್ರೆಲ್ಲಾ ಸೇರ್ಕೊಂಡು ಒಂದು ಸಭೆ ನಡೆಸಿ ಆ ಕಳ್ಳನ್ನ ಒದಿಯಾಕೆ ಎಲ್ಲಾ ಕುಮ್ಮಕ್ಕಾದ್ರು. ಅದೇ ಸಮಯಕ್ಕೆ ಕಳ್ಳನೂ ಬಂದುಬಿಟ್ಟ. ಅವ್ನು ಏನಮ್ತಾನಂದ್ರೆ 'ಸ್ವಾಮಿ ಸ್ವಾಮಿ, ಇರೋಳು ಒಬ್ಬ ಮಗಳು. ಇವ್ನಿಗೆ ಕೊಟ್ಟು ಮದ್ವೆಮಾಡಿದ್ವಿ. ನಾನೆತ್ಲಾಗೋ ಹೋಗಿದ್ದೆ. ನನ್ಮಗಳು ಸಾವಿತ್ರಿ ಇವ್ನು ಗುದ್ದಾಡಿಬಿಟ್ಟಿದ್ದಾರೆ. ಅದ್ಕೆ ಇವ್ನು ಆಗ್ಲೆ ಮುನಿಸ್ಕಂಡು ಬಂದ್ಬಿಟ್ಟವ್ನೆ. ಅದ್ಕಾಗಿ ಕರಕಂಡೋಗಾಕಾಗಿ ನಾನು ಬಂದೆ ಸ್ವಾಮಿ' ಅಂದ. ಅಲ್ಲಿ ನೆರೆದಿದ್ದೋರ್ಗೆ ಏನೂ ಹೊಳೀಲಿಲ್ಲ. ತಿರ್ಗ ಅವನೇ ಹೇಳ್ತಾನೆ. 'ಏನ್ ಸ್ವಾಮಿ ನನ್ನಳಿಯ ನೋಡಿದ್ರೆ, ನನ್ನನ್ನೇ ಕಳ್ಳ ಅಂತಾ ನಿಮ್ತಾಗೆ ಹೇಳಿದಾನೆ, ನೀವು ನೋಡಿದ್ರೆ, ನ್ಯಾಯ ಇಂಗಡಿಸೋಕೆ ಆಗ್ತಾ ಇಲ್ಲ ಅಂತೀರಿ. ನನ್ಮನೆ ಕಾಡ್ನಾಗೆ ಐತೆ. ನನ್ಮಗಳು ಒಬ್ಳೇ ಇರೋಳು. ನೀವೆಲ್ಲ ಬರ್ರಿ ನಾನು ಕೂಡ ನಿಮ್ಜೊತೆ ಇರ್ತೀನಿ. ನನ್ಮಗಳು ಸಾವಿತ್ರಿ ನಮ್ಮನ್ನ ಕಂಡೇಟಿಗೆ ಬಾಗ್ಲಾಗೆ ಚಾಪೆ ಆಸ್ಬಿಟ್ಟು ಒಂದು ತಂಬಿಗೆ ನೀರು ಇಡ್ಕೊಂಡು ಅಳ್ತಾ ನಿಂತ್ಕಮ್ತಾಳೆ. ನೀವೆಲ್ಲಾ ಯಾಕಮ್ಮ ಅಳ್ತೀಯಂತ

ಕೇಳಿ. ಈ ಹುಡುಗನ್ನ ತೋರಿಸ್ತ 'ಅವ್ರು ನನಗಂಡ ಸ್ವಾಮಿ ಒಂದಿನ ನಮ್ಮಪ್ಪಯ್ಯ ಯತ್ಲಾಗೋ ಹೋಗಿದ್ದ. ಏನೋ ಒಂದು ಮಾತು ತಮಾಸೆಗೆ ಬಯ್ದೆ, ನಾನು ಒಂದೀಟು ತಮಾಸೆ ಮಾಡೋದು ಜಾಸ್ತಿ. ಆವತ್ತು ದಿನಾ ಮಾಡ್ದಂಗೆ ತಮಾಸೆ ಮಾಡ್ದೆ. ಅದ್ಕೇನೆ ಇವ್ರು ನನ್ನ ಒದ್ದು ರಂಪಾಟ ಮಾಡಿ ಮನೆ ಬಿಟ್ಟು ಹೋದ್ರು. ಅಪ್ಪಯ್ಯ ಬಂದಾಗ ನಡೆದಿದ್ದೆಲ್ಲ ಹೇಳ್ದೆ. ಅವಾಗ ಅಪ್ಪಯ್ಯ ನನ್ಗಂಡನ್ನ ಹುಡ್ಕಂಡು ಬಂದ' ಅಮ್ತಂದು ಹೇಳ್ತಾಳೆ. ಆವಾಗಾದ್ರೂ ನಿಮ್ಗೆ ಗ್ಯಾರಂಟಿ ಆಗುತ್ತೆ. ನಡಿರಿ ಹೋಗಾನ ಅಂದು ಎಲ್ಲಾರ್ನು ಕರಕಂಡು ಬಂದುಬಿಟ್ಟ. ಬರುವಾಗ ದಾರಿಮದ್ಯ 'ಸ್ವಾಮಿ ನೀವೆಲ್ಲ ದುರ್ಗದ ದೊಡ್ಡ ದೊಡ್ಡ ಮನ್ಸೇರು. ನಿಮ್ಮ ಮಾನ ಮರ್ಯಾದಿಗಾಗಿಯಾದ್ರೂ ನಾನು ಒಂದು ಅಂಗಡಿ ಮನೆಗೆ ಹೋಗಿ ಸ್ವಲ್ಪ ಸಾಮಾನು ತಗಂಡು ಬರ್ತೀನಿ, ನೀವು ನಡೀರಿ' ಅಂತೇಳಿ ಆದಿ ತೋರಿಸಿ ಹಿಂದ್ಗಡೆ ಸರ್ಕಂಡ. ಅಮ್ಯಾಲೆ ಕಾಣ್ದಂಗೆ ಕೀಲುಕುದ್ರೆ ಮ್ಯಾಲೆ ಸೀದಾ ಸಾವಿತ್ರಿತಾಗೆ ಹೋದ. 'ನೋಡಮ್ಮಾ ಮಗಳೇ, ಆ ಸೂಳೆಮಗ ತಪ್ಪಿಸ್ಕೊಂಡು ದುರ್ಗ ಸೇರಿಬಿಟ್ಟಿದ್ದ. ಅಲ್ಲಿರೋ ಜನಗಳನ್ನ ಕಲೆಹಾಕಿ ಇಲ್ಲಿಗೆ ಕರಕಂಡು ಬರ್ತಿದೀನಿ' ಅಂತಂದು ಅವರಿಗೆ ಹೇಳಿದ್ದನೆಲ್ಲ ಇಂಗಿಂಗೆ ಅಂತ ಹೇಳಿ ಹಿಂದಿರುಗಿ ಮತ್ತೆ ಅವರ ಜೊತೆಗೆ ಸೇರ್ಕಂಡ. ಈ ಮಲ್ಲಯ್ಯನಿಗಾದ್ರೆ ಎದೆ ಡವ ಡವ ಅಮ್ತಾ ಐತೆ. ಯಂತಾ ಕೆಲಸ ಆಯ್ತಲ್ಲ? ಏನು ಉಪಾಯ ಉಡ್ಕಾನ. ಈಗ ನಾನು ಏನೇಳಿದ್ರೂ ನಡಿಯಾಕಿಲ್ಲ. ಅದ್ರಿಂದ ಸುಮ್ಕಿರೋದೆ ವಾಸಿ. ಅಂದ್ಕೊಂಡು ಅವ್ರಿಂದೆ ತುಟಿಪಿಟಿಕ್ ಅಮ್ದಂಗೆ ಬರ್ತಿದ್ದ. ದುರ್ಗದ ಜನಗಳೆಲ್ಲಾ ಕಳ್ಳನ ಮನೆತಾಕೆ ಬಂದ್ರು. ಸಾವಿತ್ರಿ ಇವರನ್ನ ಕಂಡ್ಕೊಡ್ಲೆ ಒಂದು ಚಾಪೆನ ಬಾಗ್ಲ ಮುಂದ್ಕೆ ಹಾಸಿಬಿಟ್ಟು ಒಂದು ಚಂಬು ನೀರು ಇಡ್ಕಂಡು ಆಳ್ತಾ ನಿಂತ್ಕಂಡ್ಲು. ಈ ಜನರೆಲ್ಲ 'ಯಾಕಮ್ಮಾ ಇಂಗೆ ಅಳ್ತೀಯ' ಅಂತಂದ್ರು, 'ಸ್ವಾಮಿ ನಮ್ಮಪ್ಪಯ್ಯ ಯತ್ಲಾಗೋ ಹೋಗಿದ್ದಾಗ ನಾನು ಒಂದಿನ ತಮಾಸ್ಗೆ ಒಂದು ಚೇಷ್ಟೆ ಮಾಡ್ದೆ. ನಾನು ಆಗಿಂದಾಗ್ಗೆ ಚೇಷ್ಟೆ ಮಾಡ್ತಲೆ ಇರ್ತೀನಿ. ದಿನಾ ಮಾಡ್ದಂಗೆ ಇವತ್ತೂನು ಒಂದು ಚೇಷ್ಟೆ ಮಾಡ್ದೆ. ಅದ್ಕನೆ ಇವ್ರು ಜಗಳಕ್ಕೆ ಬಂದುಬಿಟ್ಟು ಒದ್ಬಿಟ್ಟು ಮನೆ ಬಿಟ್ಟುಹೋದ್ರು' ಅಮ್ತಂದು ಹೇಳಿದ್ಲು. ಅವಾಗ ಬಂದ ಜನಕ್ಕೆ ಇವಳ ಮುತ್ತಿನಂತ ಮಾತು ಕೇಳಿ ಮರುಗಿಬಿಟ್ರು. 'ಎಲಾ ಇವ್ನ ನಮ್ಕೂಟೆ ತನ್ನ ಮಾವನ್ನೇ ಕಳ್ಳ ಅಂತ ಹೇಳಿಬಿಟ್ನಲ್ಲ ಇವ್ನು ಎಂತಾ ಪಡಪೋಸಿ ಇರ್ಬೇಕು. ಮತ್ತೆ ಇವ್ನ ಹುಡ್ಗಿ ಬಿಟ್ಟು ಬಂದಿರೋದು ನೋಡಯ್ಯ ! ಇನ್ನೂ ಪ್ರಾಯದ ಹುಡ್ಗಿ ಏನೋ ತುಂಟಾಟ ಮಾಡಿರ್ಬೋದು, ಅದ್ಯಾಕಪ್ಪ ಇವ್ನು ಇಂಗೆಲ್ಲ ರಂಪಾಟ ಮಾಡ್ಕೊಬೇಕು, ಇವ್ನಿಗೆ ಬಿಸಿ ತಾಕಿಸಬೇಕು, ಒಳೀಕೆ ನೂಕಿ ಕಂಬಕ್ಕೆ ಕಟ್ಟಿ ಹಾಕ್ರಿ' ಅಂತೇಳಿ ಅವನ್ನ ಒಳೀಕೆ ಕೂಡಿ–ಕಂಬಕ್ಕೆ ಕಟ್ಸಿಸಿ ಚೆನ್ನಾಗಿ ಉಗ್ದು ಅದೇ ಹೋಗಿಬಿಟ್ರು.

ದುರ್ಗದ ಜನ ಹೋದ ಕೂಡ್ಲೆ ಕಳ್ಳನ ಮನಸ್ಸು ಕೊತಕೊತ ಅಂತ ಮಾಂಸದ್ ಸಾರು ಕುದ್ದಂಗೆ ಕುದ್ದುಬಿಡ್ತು. ಕಳ್ಳ ಬಡ್ಡಿಮಗ ನನ್ನನ್ನ ಎಷ್ಟೊಂದು ತಾಪತ್ರಯಕ್ಕೆ ಸಿಕ್ಸಿಬಿಟ್ಟ, ಚಾಂಡಾಲನ ಇವತ್ತು ಸ್ವರ್ಗ ಕಾಣಿಸ್ತೀನಿ. ಅಮ್ತಂದು ಒಂದು ಚೂರಿ ಮಾಸೆಯಾಕೆ ಸಿದ್ವಾದ. ಆದ್ರೆ ಸಾವಿತ್ರಿಗೆ ಮಾತ್ರ ಮಲ್ಲಯ್ಯನ ಪ್ರಾಣ ತಗಿಯಾಕೆ ಮನಸ್ಸು

ಒಪ್ಪಲಿಲ್ಲ. ಅವಾಗ ಅವಳು ಒಂದುಪಾಯ ಮಾಡಿದ್ಲು 'ಯಪಾ ಯಪಾ ಈ ಹುಡುಗನ್ನ ಬಂದೋಬಸ್ತಾಗಿ ಕಟ್ಟಿಬಿಟ್ಟಿದೀವಿ ನನ್ಗೆ ಒಂದು ಕನಸು ಬಿದ್ದೈತೆ ಇಲ್ಗೆ ಏಳು ಯೋಜ್ನೆ ದೂರ್ದಾಗೆ ಏಳು ಮದ್ವೆಗಾಡಿ ಬರ್ತಾವೆ. ಬೇಕಾದಷ್ಟು ಒಡ್ವೆ ವಸ್ತ್ರ ಐದಾವೆ. ಅಲ್ಲಿರೋರೆಲ್ಲ ಬರೇ ಹೆಂಗಸ್ರು ಅದ್ರಿಂದ ನೀನು ಅಲ್ಲಿಗೆ ಹೋಗ್ಬರೋಗಪ್ಪ ನೀನು ಬರೋತಂಕ ಇವನ್ನೇನು ಬಿಡಾಕಿಲ್ಲ' ಅಂತೇಳಿದಾಗ ಅವ್ನು ಸಾವಿತ್ರಿ ಮಾತ್ನಂಗೆ ಹೋಗಿಬಿಟ್ಟ. ಅವ್ನು ಅತ್ಲಾಗೆ ಹೋದ ಕೂಡ್ಲೆ ಇತ್ಲಾಗೆ ಇವುಳು ಮಲ್ಲಯ್ಯನ ಕಟ್ಟಿದ್ದ ಕಟ್ಟುಗಳನ್ನೆಲ್ಲಾ ಬಿಚ್ಚಿಟ್ಟು ಮನೇವಳೀಕೆ ಕರಕಂಡೋಗಿಬಿಟ್ಟು ಸುಡುಸುಡಾ ನೀರು ಹೊಯ್ದು ಸುಡುಸುಡಾದು ಉಂಬಾಕೊಟ್ಟು ಆಮೇಲೆ ಈಳ್ಯಾ ಕೊಟ್ಲು. ಮಲ್ಲಯ್ಯ ಸಂತೋಷದಿಂದ ವೀಳ್ಯ ಜಗಿತಾ ಕುತ್ಕಂಡವ್ನೆ ಅವನು ಸಾವಿತ್ರೀನ ನೋಡ್ತಾ 'ಹುಡ್ಗಿ ಎಂತಾ ಚಂದುಳ್ಳಿಯಾಗಿ ಕಾಣ್ತವ್ಳೆ ನಾ ಯಾಕಾರ ಮದ್ವೆ ಮಾಡ್ಕೊಬಾರ್ದು ಅಮ್ತಂದು ಮನಸಿನಾಗೆ ಗುಣಾಕಾರ, ಭಾಗಾಕಾರ ಅಕ್ಕಮ್ತಾ ಐದಾನೆ ಇಂಗಿರುವಾಗ್ಲೆ ಸಾವಿತ್ರಿನೇ ಬಾಯಿ ಬಿಟ್ಟು 'ಮಲ್ಲಯ್ಯ ಮಲ್ಲಯ್ಯ, ನನ್ಗೆ ನೀನು ತುಂಬಾ ಇಷ್ಟ ಆಗಿದೀಯ, ನಾನು ನಿನ್ನ ಮದ್ವೆ ಆಗ್ತೀನಿ' ಅಂತಂದು ಹೇಳಿದ್ಲು ಇವನಿಗೂ ಅದೇ ಬೇಕಾಗಿತ್ತು ರೋಗಿ ಬಯಸಿದ್ದು ಆಲೂ ಅನ್ನ ಪಂಡಿತ ಹೇಳಿದ್ದೂ ಆಲೂ ಅನ್ನ ಕೇಳಬೇಕೆ.... 'ಸೈ' ಅಂದ. ಅವಾಗ ಬೇಕು ಬೇಕಾದ್ದೆಲ್ಲ ತಗಂಬಿಟ್ಟು ಕಳ್ಳನಿಗೆ ಗೊತ್ತಿಲ್ದೆ ಅವನು ಬರೋವತ್ಗೆ ಅಲ್ಲಿಂದ ಕೀಲುಕುದ್ರೆ ಹತ್ಕೊಂಡು ಪರಾರಿ ಆದ್ರು, ಓದನ್ನಓದನ್ನೊದ್ರು, ಬಾಳ ದೂರ ಹೋದ್ರು, ಹೋಗ್ತಾ ಇರ್ವಾಗ ಒಂದು ಉಂಚೆಮರ ಸಿಕ್ತು ಅಲ್ಲಿ ಇಬ್ರೂ ಇಳಕಂಡ್ರು.

ಇತ್ಲಾಗೆ ಮದ್ವೆಗಾಡಿ ಕಾಯ್ತ ಕುಕ್ಕಂಡಿದ್ದ ಕಳ್ಳ ನೋಡಿ ನೋಡಿ ಬೇಸತ್ತು ಬಿಟ್ಟ. ಏಟೋತ್ತಾದ್ರೂ ಮದ್ವೆಗಾಡಿ ಬರ್ಲಿಲ್ಲ ಅವಾಗ ಸಾವಿತ್ರಿ ನೆಪ್ಪು ಬಂದುಬಿಟ್ಟು ಮನೆಗೆ ಬಂದ್ಬಿಟ್ಟ, ಬಂದು ನೋಡ್ತಾನೆ ಸಾವಿತ್ರಿನೂ ! ಇಲ್ಲ, ಮಲ್ಲಯ್ಯನೂ ಇಲ್ಲ. ಅವಾಗ ಇದು ಸಾವಿತ್ರಿ ಕುತಂತ್ರ ಅಂದ್ಕೊಂಡು ಇವ್ರು ಹೋದ ದಾರೀ ಸುಳಿವು ತಗಂಡು ಅವರು ಹೋದ ಕಡೀಕೆನೆ ಹುಡುಕ್ಕೊಂಡು ಬಂದ್ಬಿಟ್ಟ. ಇತ್ತ ಹುಂಚೇ ಮರದಡೀಲಿ ಕುಕ್ಕಂಡಿದ್ರಲ್ಲ ಸಾವಿತ್ರಿ, ಮಲ್ಲಯ್ಯ ಆವಾಗ ಸಾವಿತ್ರಿಗೆ ಕನಸುಬಿದ್ದು ಬಿಡ್ತು. 'ಮಲ್ಲಯ್ಯ ಮಲ್ಲಯ್ಯ, ನನ್ನ ಸ್ವಪ್ನದಾಗೆ ನಮ್ಮಪ್ಪಯ್ಯ ಬಂದ್ಬಿಟ್ಟಿದ್ದ ಅದ್ಕಾಗಿ ನೀನು ಮರ ಹತ್ಬಿಟ್ಟು ಎಲ್ಲಾದ್ರೂ ಬರ್ತಾನೇನು ನೋಡು ಅಮ್ತಂದು ಸೂಚ್ನೆ ಕೊಡ್ತಾಳೆ. ಮಲ್ಲಯ್ಯ ಮರಹತ್ತಿ ನೋಡ್ತಾನೆ, ಅತ್ಕಡೆಯಿಂದ ಕಳ್ಳ ಕೀಲುಕುದ್ರೆ ಮೇಲೆ ಬರ್ತಿದ್ದ 'ಸಾವಿತ್ರಿ ಸಾವಿತ್ರಿ ನಿಮ್ಮಪ್ಪ ಇತ್ಲಾಗೆ ಬರ್ತಿದಾನೆ. ಈಗ ನನ್ನ ಸಾಯಿಸಿ ಬಿಡ್ತಾನೆ. ನಾನೇನು ಮಾಡ್ಲಿ' ಅಂತಂದು ಹೆದರ್ಕಂಡು ಕೆಳ್ತಾನೆ. 'ಅಂಗ್ಯಾಕೆ ಎದರ್ತೀಯ ಮಲ್ಲಯ್ಯ, ನನ್ನ ಕೀಲುಕುದುರೆ ಕೊಡ್ತೀನಿ ಅದನ್ನ ಜೀನು ಮಾಡಿಕೊಂಡು ಮರದ ಸುಳಿ ಮೇಲೆ ಕುಕ್ಕ. ನಮ್ಮಪ್ಪಯ್ಯ ಇಲ್ಲಿಗೆ ಬರೋವತ್ಕೆ ನಾನು ಮರದ ಬುಡದಾಗೆ ಕೂದ್ಲೆಲ್ಲ ಕೆದರಿಕೊಂಡು ಕುಕ್ಕಮ್ತೀನಿ ಯಾಕಮ್ಮಾ ಸಾವಿತ್ರಿ ನೀನೊಬ್ಬಳೇ ಕೂದ್ಲು ಕೆದರಿಕೊಂಡು ಇಂಗೆ ಕುತ್ಕಂಡಿದಿಯಾ ಅಮ್ತಾ ಕೇಳ್ತಾನೆ. "ನೋಡಪ್ಪಾ ಆ ಹಲ್ಕಾನನ್ಮಗ ನೀನೆತ್ಲಾಗೋ ಹೋಗಿದ್ದಾಗ ಅಗ್ಗ ಉಗಿಸ್ಕೊಂಡು ನನ್ನ ಮೈಕೈಯೆಲ್ಲಾ ಮುಟ್ಟಿ 'ಏನೇನೋ ಮಾಡ್ದ'. ಆ ಮೇಲೆ ಇತ್ಲಾಗೆ ಓಡಿ ಬಂದ ಬೆನ್ನಟ್ಟಿ

ಬಂದಿನಿ. ಅವುನು ಮರ ಹತ್ತಿ ಕೂತಿದಾನೆ". ಅಂತಂದು ಹೇಳ್ತೀನಿ ಅವಾಗ ಅಯಪ್ಪ ಸಿಟ್ಟಿನಾಗೆ ನಿನ್ನ ಹಿಡ್ಕಂಬಾಕೆ ಬರ್ತಾನೆ. ಅವಾಗ ಕೀಲು ಕುದ್ರೆ ನನ್ನ ಕೈಗೆ ಕೊಡ್ತಾನೆ. ಅವಾಗ ನಾವಿಬ್ರೂ ಸವಾರಿ ಹೋಗಾನ. ನಮ್ಮಪ್ಪ ಅವಾಗ ಕೀಲುಕುದ್ರೆ ಇಲ್ದೆ ಬಾಯಿ ಬಾಯಿ ಬಡ್ಕೊತಾನೆ. ನಮ್ಮ ಪಾಡಿಗೆ ನಾವು ಹೋಗಾನ' ಅಮ್ತಂದು ಮಲ್ಲಯ್ಯನಿಗೆ ಧೈರ್ಯ ಹೇಳಿದ್ಲು. ಆಟೊತ್ಗೆ ಕಳ್ಳ ಬಂದ. ಸಾವಿತ್ರಿ ಯೋಚ್ನೆ ಮಾಡ್ದಂಗೆನೇ ಪ್ರಶ್ನೆ ಕೇಳ್ದ. ಇವುಳೂ ಕೂಡ ಹೇಳಬೇಕಾದ್ದೆಲ್ಲ ಹೇಳಿದ್ಲು ಅವಾಗ ಕಳ್ಳನಿಗೆ ಸಿಟ್ಬಂದು 'ಯಲಾ ಮುಂಡೆಮಗ್ನೆ ಇಲ್ಲೀವರ್ಗೂ ಬಂದ್ಯಾ, ಇವಾಗ್ಲೆ ನಿನ್ನ ಮುಗಿಸಿ ಬಿಡ್ತಿನಿ. ಇಡಕಳವ್ವ ಈ ಕೀಲುಕುದ್ರೆನ' ಅಂತಂದುಕೀಲುಕುದ್ರೆನ ಮಗಳಿಗೆ ಕೊಟ್ಟು ಅವ್ನು ಮರ ಹತ್ತಿದ. ಇವ್ನು ಅರ್ದ ಮರಕ್ಕೋಗ್ತನೆ ಮಲ್ಲಯ್ಯ ಕೀಲುಕುದ್ರೆನ ಮಗಳಿಗೆ ಕೊಟ್ಟು ಅವ್ನು ಮರ ಹತ್ತಿದ. ಇವ್ನು ಅರ್ದ ಮರಕ್ಕೋಗ್ತನೆ ಮಲ್ಲಯ್ಯ ಕೀಲುಕುದ್ರೆ ಮ್ಯಾಲೆ ಹಾರೋಗಿಬಿಟ್ಟ, ಮರದ ಕೆಳಗೆ ಕುತ್ಕಂಡಿದ್ದ ಸಾವಿತ್ರಿನೂ ಹಾರೋಗಿಬಿಟ್ಳು ಕಳ್ಳ ಕೆಳಗಿಳಿದು ನೋಡ್ತಾನೆ, ಇಬ್ರೂ ಆನಂದ್ವಾಗಿ ಜೊತೆ ಜೊತೆಗೆ ಹೋಗ್ತಾ ಅವ್ರೆ. ಅದ್ನ ನೋಡ್ಬಿಟ್ಟು 'ಓಹೋ ಇವ್ರು ಮಾತಾಡ್ಕೊಂಡು ಈ ಕೆಲ್ಸ ಮಾಡಿರೋದು ಬದಿಕ್ಕಮ್ಲಿ' ಅಂದ್ಕಂಡು ಮಲ್ಲಯ್ಯನ ಖಾಲಿ ಕುದ್ರೆ ಇತ್ತಲ್ಲ ಅದ್ನ ಆಕ್ಕೊಂಡು ಮನೆಗೆ ಹೋಗಿ ಮಕಾಡೆ ಮನಿಕ್ಕಂಡ.

ಮಲ್ಲಯ್ಯ ಸಾವಿತ್ರಿ ಸೇರ್ಕೊಂಡು ಒಂದು ಕಾಡಿಗೆ ಹೋದ್ರು. ಕಾಡು ಅಂದ್ರೆ ಅಂತಿಂತಾದ್ದಲ್ಲ. ಊರಿಲ್ಲ ಉದ್ಮಾನಿಲ್ಲ ಭರ್ತಿ ಕಾನು. ಕಾನ್ಯಾಗೆ ಎತ್ತರವಾದ ಬಂಡೆ. ಅಂತಾ ಬಂಡೆಮ್ಯಾಕೆ ಇವುರು ಇಳಿದು ಬಿಟ್ರು, ಮನೆಯಿಂದ ಬೇಕಾದ್ನೆ ತಗಂಡೋಗವ್ರೆ ಆದ್ರೆ ಬೆಂಕಿಪಟ್ನನೇ ಮರ್ತವ್ರೆ. ಆವಾಗ ಮಲ್ಲಯ್ಯ ಕೀಲುಕುದ್ರೆ ಹಾರ್ಸಿಬಿಟ್ಟ. ಮ್ಯಾಲಕ್ಕೆ ಹೋಗಿ ಎಲ್ಲಾನ ಊರು ಕಾಣುತ್ತೇನೋ ನೋಡಾನಂತ ಅಂದ್ಕೊಂಡ. ಎಲ್ಲೆಲ್ಲೂ ಒಂದು ಊರು ಕಾಣಂಗಿಲ್ಲ. ಅವಾಗ ಕೆಳಗೆ ಬಂದು ಸಾವಿತ್ರಿತಾಗೆ, 'ಏನೆ ಏನೆ ಇಲ್ಲಿಗೆ ಏಳು ಯೋಜ್ನೆ ದೂರ್ದಾಗೆ ಒಂದು ಬೆಟ್ಟ ಕಾಣ್ತತೆ ಅದ್ರಾಗೆ ಸಣ್ಣದೊಂದು ಸೂಜಿ ಮನೆ ಗಾತ್ರ ಹೊಗೆ ಕಾಣ್ತೈತಿ ಅಲ್ಗೆ ಹೋಗಿ ಬೆಂಕಿ ತಗಂಬರ್ತೀನಿ. ನೀನು ಇಲ್ಲೆ ಇರು' ಅಮ್ತಂದ. 'ಏನು ಸ್ವಾಮಿ, ಇಂಗಮ್ತೀರ ನೀವು ಬೆಂಕಿಗಮ್ತ ಹೋದವರು ಅತ್ಲಾಗೆ ಹೋಗಿಬಿಡನಾ, ನಾನು ಇತ್ಲಾಗೇ ಸಾಯನಾ ? ಅಂಗೆಲ್ಲ ಹೋದಾಗ ಇಬ್ರೂ ಒಂದೇ ಕಡೀಕೆ ಹೋಗ್ಬೇಕು. ಸತ್ರೆ ಒಂದೇ ಕಡೀಕೆ ಸಾಯ್ಬೇಕು. ನಡಿರಿ ಇಬ್ರೂ ಹೋಗಾನ' ಅಂತಂದು ಸಾವಿತ್ರಿ ಹೇಳಿ ಅವರವರ ಕೀಲುಕುದ್ರೆಗಳನ್ನು ಅಲ್ಲಿಗೆ ಹಾರ್ಸಿಬಿಟ್ರು. ಇವ್ರು ಹೋಗಿದ್ದ ಜಾಗ ಎಂತಾದಪ್ಪಂದ್ರೆ ಐವತ್ತು ಜನ ಕಳ್ರು ಇರೋ ಮನೆ ಜಾಗ. ಈ ಐವತ್ತು ಜನನೂ ಒಬ್ಬಜ್ಜಿ ಮಕ್ಕಳು. ಐವತ್ತು ಜನಕ್ಕೂ ಐವತ್ತು ಕೀಲುಕುದ್ರೆ ಇದಾವೆ. ಎಲ್ಲಾರು ಕಳ್ತನಕ್ಕೆ ಹೋಗವ್ರೆ. ತಾಯಿ ಮಾತ್ರ ಮನೆಯಾಗ್ಯೆದಾಳೆ ಮಲ್ಲಯ್ಯ ಸಾವಿತ್ರನ ಕಂಡುಕೂಡ್ಲೆ ಆ ಮುದ್ಕಿ 'ಅಯ್ಯೊ ಪಾಪ, ಯಾವಾಗ ಬಂದ್ರಪ್ಪ, ನೀವು ಸಣ್ಣ ಮಕ್ಳಾಗಿದ್ದಾಗ ನಿಮ್ಮನ್ನ ನೋಡಿದ್ದು ಕಣಪ್ಪ. ಗುರ್ತೇ ಸಿಗಲ್ವಲ್ಲೋ 'ಅಮ್ತಂದು ತುಂಬಾ ಪ್ರೀತಿ ಮಾಡ್ತ ಅವ್ರಿಗೆ ಒಂದು ಮಂಚ ಹಾಕಿ ಅದ್ರ ಮೇಲೆ ಕುಂದ್ರಿಸಿದ್ಲು. ಆಮುದ್ಕಜ್ಜಿ ಒಳೀಕ ಹೋಗಿ ಏನ್ ಯೋಚ್ನೆ ಮಾಡ್ತಾಳಪ್ಪಾಂದ್ರೆ, ಮನೆಗೆ ಬಂದಿರೋ ಹುಡ್ಗಿ ಬಾಳಾ ಬಾಳ ಚೆನ್ನಾಗೈತೆ.

ಅಪರಂಜಿ ಬಂಗಾರ ಇದ್ದಂಗೈತೆ. ಮಾರಿಮ್ಯಾಲೆ ಎಂತಾ ಕಳೆ ತುಳುಕತೈತೆ, ಅಲಲಾ ಒಳ್ಳೆ ದೇವಗನ್ನೆಕೆ ಆಗ್ಯಾಳಲ್ಲಪ್ಪಾ ಇವ್ಳುನ್ನ ನನ್ನ ಮಗನಿಗ್ಯಾಕೆ ಮದ್ವೆ ಮಾಡ್ಕೊಂಬಾರ್ದು' ಅಮ್ತಂದು ಆಲೋಚ್ನೆ ಮಾಡ್ತಾಳೆ ಆವಾಗ ಒಂದು ಬುದ್ದಿ ಹುಡುಕಿದ್ಲು. ಇವರನ್ನ ಯಂಗಾದ್ರು ಮಾಡಿ ನಮ್ಮ ಮಕ್ಳು ಬರೋತಂಕ ಉಳಿಸ್ಕಮ್ಲೇಬೇಕು ಅಂದ್ಕೊಂಡು ಇವರತ್ರ ಅದೂ ಇದೂ ಮಾತಾಡ್ಕೊಂಡು ಕಾಲ ಹಾಕ್ತಿದ್ಲು. ಆಗ ಸಾವಿತ್ರಿಗೆ ಒಂದು ಸ್ವಪ್ನ ಬಿದ್ದುಬಿಡ್ತು. ಸ್ವಪ್ನದಾಗೆ ನೋಡ್ತಾಳೆ. ಐವತ್ತು ಜನ ಕಳ್ಳರ ಮನೆ ಅವರು ಇರೋದು. ಅವಾಗ ಸಾವಿತ್ರಿ ಅವಜ್ಜಿಗೆ ಕಾಣ್ದಂಗೆ ಒಂದು ಬೆಂಕಿ ಪಟ್ನ ತಗಂಬಿಟ್ಟು ಅವಜ್ಜಿ ಏನೆ ಮಾಡಿದ್ರು ನಿಲ್ದಂಗೆ ಮಲ್ಲಯ್ಯನ ಕರಕಂಡು ವಾಪಾಸಾದ್ಲು. ಎಲ್ಲಿಗೆ ಬಂದ್ಲು ? ಸೀದ ಹರ್ತಿ ಕೋಟೆ ಕೆರೆ ತುಂಬಾ ತುಂಬಿತ್ತು. ಆಕೆರೆ ಪಕ್ಕದಾಗೆ ದೊಡ್ಡದೊಂದು ಆಲ್ದಮರ ಆ ಆಲ್ದಮರದ ಅಡೀಕೆ ಕೀಲುಕುದ್ರೆ ತಗಂಬಂದು ಇಳಿಸ್ಕಂಡುಬಿಟ್ರು, ಇಳಿಸಿಕಂಬಿಟ್ಟು ಅಲ್ಲಿ ಒಲೆಗುಂಡು ಹೂಡಿ ಅಡುಗೆ ಮಾಡ್ತಾ ಕುತ್ಕಂಡ್ರು, ಮಲ್ಲಯ್ಯ ಸಾವಿತ್ರಿ ಕಳ್ಳರ ಮನೆಯಿಂದ ಬಂದ ಕೂಡ್ಲೆ ಕಳ್ರು ಕಳ್ತನ ಮಾಡ್ಕೊಂಡು ಅವರ ಗವಿ ಬಾಗ್ಲತ್ರ ಬಂದ್ರು, ಆವಜ್ಜಿ ಏನೇನೆ ಮಾಡಿದ್ರೂ ಒಳಾಕೆಬಿಡ್ದೆ ಜಗಳ ಕಾರಿದ್ಲು "ಸೂಳೆಮಕ್ಳ ಇದೊಷ್ಟು ಮನೇಗಿರೋದ್ನೆಲ್ಲ ಬೆಂಕಿಗಾಕ್ರೊ ಎದಿಯುದ್ದ ಮಕ್ಕಳಾದ್ರೂನೂ ಒಬ್ಬಂದೂ ಮದ್ವೆ ಇಲ್ಲ ಮನೆತಾಕೆ ಎಂತಾ ಅಪರಂಜಿ ಹುಡ್ಗಿ ಬಂದಿದ್ಲು ನಿವ್ಗಳು ಜಲ್ದಿ ಬಂದಿದ್ರೆ ಯಾರಾದ್ರು ಒಬ್ರು ಅವ್ಳನ್ನು ಮದ್ವೆ ಆಗ್ತಿರಲಿಲ್ವೆ." ಅಂತಂದು ಬಾರಿ ಸಿಟ್ಟಾಗಿ ಮಕ್ಕಳ್ನ ಬೈದ್ಲು. ಅವಾಗ ಅವ್ರು "ಯಮ್ಮ ಯಮ್ಮ ಆ ಹುಡ್ಗಿ ಎಲ್ಲಾಸಿಹೋದ್ಲೇಳಮ್ಮ ಈಗ್ಲೆ ತಂದು ನಿಮ್ಮುಂದೆ ನಿಲ್ಲಿಸಿಬಿಡ್ತೀವಿ" ಅಂದ್ರು, ತಾಯಿ "ಇಗೋ ನೋಡು ಈ ದಿಕ್ಕಿನಾಗೆ ಹೋದ್ರು" 'ಅಂತಂದು ಹರ್ತಿ ದಾರಿ ತೋರಿಸಿದ್ಲು. ಆ ಐವತ್ತು ಜನಾನು ಕಳ್ತನ ಮಾಡಿಕಂಡು ಬಂದಿದ್ನೆಲ್ಲ ಅಲ್ಲೆ ಬಿಸಾಕಿ ಐವತ್ತು ಕಿಲುಕುದ್ರೆ ಆಕ್ಕೊಂಡು ಹರ್ತಿ ದಾರಿಹಿಡಿದ್ರು, ಸೀದ ಸಾವಿತ್ರಿ ಇಳಕಂಡಿದ್ದ ಆಲದ ಮರತ್ತಾಕೆ ಬರಬೇಕ ಇವ್ರು ? ಅದೇ ತಾನೆ ಸಾವಿತ್ರಿ ತನ್ನ ಗಂಡ್ಗೆ ಉಂಬಾಕೆ ಇಕ್ಕಿ ಅವುಳು ಉಂಡು ಏನೋನೋ ತಮಾಸೆ ಮಾಡ್ಕಂಡು ಕುತ್ಕಂಡಿದ್ರು, ಆಗ್ಲೆ ಆ ಚಾಂಡಾಲ್ರು ಅಲ್ಗೆ ಬಂದು ಇವರಿಬ್ರಳನ್ನ ಇಡಕಂಬಿಟ್ರು, ಇಬ್ರುನ್ನೂ ಏರಿಮ್ಯಾಕೆ ತಂದ್ರು, ಅವಾಗ ಸಾವಿತ್ರಮ್ಮನ್ನ ಕಳ್ಳರು ಬಾರಿ ಬಯ್ತಾರೆ. "ಎಡ್ಮುಂಡೆ ಮಂತೇಕೆ ಬಂದು ನಮ್ಮಮ್ಮಂಗೆ ಮೋಸಮಾಡಿ ಇಲ್ಗೆ ಓಡಿ ಬಂದ್ಯಾ ನಡೀ ನಮ್ಮೆನೆಗೆ, ನಮ್ಮಮ್ಮಯ್ಯ ಒಬ್ಬೆ ಐದಾಳೆ ಅಲ್ಲಿರುವಂತೆ." ಅಂತಂದು ಸಾವಿತ್ರಿನ ಹೊತ್ಕಮಕೆ ಹೋದ್ರು, ಅವಾಗ ಸಾವಿತ್ರಿ ಕೈಮುಗಿದು "ಯಣ್ಣ ನಂಗೆ ಮದ್ವೆ ಆಗೈತೆ. ನನ್ಗಂಡ ಅಲ್ಲೆ ಐದಾನೆ ನೋಡ್ರಿ, ನಿಮ್ಗೆ ಕಾಲ್ಗೆ ಬೀಳ್ತೀನಿ ಬಿಡ್ರಪ್ಪಾ" ಅಂತ ಏನೇನೋ ಹೇಳಿದ್ರೂ ಅವುರು ಕೇಳಲಿಲ್ಲ. ಆಕಳ್ರು ಐವತು ಜನಾನು ಇವಳ ರೂಪ ನೋಡಿ ಅಲ್ಲೆ ತಲೆಸುತ್ತಿ ಬೀಳಂಗಾಡಿಬಿಟ್ರು, ನಾನು ಮದ್ವೆ ಆಗ್ತೀನಿ, ನಾನು ಮದ್ವೆ ಆಗ್ತೀನಿ ಅಂತಂದು ಒಬ್ಬರಿಗೊಬ್ರು ಪೈಪೋಟಿ ಮಾಡಾಕತ್ತಿದ್ರು, ಅವಾಗ ಇವುಳು ಒಂದುಪಾಯ ಮಾಡಿದ್ಲು. "ನೋಡಪ್ಪ ನೀವಿಂಗೆ ನಂಗಾಗಿ ಕಿತ್ತಾಡದು ಸರಿಯಲ್ಲ, ನನ್ನಯ್ಯಾಗೆ ಒಂದು ಮುತ್ತಿನ ಉಂಗ್ರೈತೆ. ಆ ಉಂಗ್ರನ ಕೆರೆಯಾಕೆ ಎಸೆದುಬಿಡ್ತೀನಿ ಆ

ಉಂಗ್ರನ ಯಾರು ತಂದ್ಕೊಡ್ತಾರೊ ಅವ್ರನ್ನ ಮದ್ವೆ ಆಗ್ರೀನಿ" ಅಂತಂದು ಹೇಳ್ತಾಳೆ. ಆಗ್ಲಿ ಆಕಿ ಬಿಡು. ಅಂತಂದು ಒಪ್ಪಿಬಿಟ್ರು. ಇವಳು ಕೆರೆಯಾಕೆ ನಡಾಮದ್ಯಕ್ಕೆ ಎಸೆದು ಬಿಟ್ಳು ಐವತ್ತು ಜನಾನು ಕೀಲುಕುದ್ರೆ ಮನಗಿಸಿಬಿಟ್ರು. ಪೈಲ್ವಾನ ಸೆಡ್ಡಿ ಅಕ್ಕಂಬಿಟ್ರು. ಎಲ್ರೂ ಸುರಂಗ ಹೂಡಿಯರ್ನ ಕೇಳ್ತೀಯ, ಪಲ್ಟಿ ಹೊಡಿಯಾರ್ನ ಕೇಳ್ತೀಯ, ದಬದಬ ಅಂತ ಬೀಳಾರ್ನ ಕೇಳ್ತೀಯಾ ಅಂತೂ ಎಲ್ರೂ ಮುಣಿಗಿ ಉಂಗ್ರ ತರಾಕೆ ಹೋಗಿಬಿಟ್ರು. ಇವ್ಳು ಏನ್ಮಾಡಿಬಿಟ್ಲು ? ಗಂಡಂದು ಚಂದ್ರಾಜ್ಯ ಇತ್ತು. ಅದ್ನ ತಗಂಬಿಟ್ಳು. ಇವುಳು ದುಮಿಕೆಬಿಟ್ಲು. ಯಾರ್‍ಯಾರು ಮುಣಿಗಿ ಮೇಲಕ್ಕೆ ಎಳ್ತಿದ್ರೋ ಅಂತವರ ಪಟ್ಟಿಸಿರನೆಲ್ಲಾ ನೆಗೆದುಬೀಳಂಗೆ ಕಡಿದು ಬಿಟ್ಲು. ನಲವತ್ತೊಂಬತ್ತು ಜನಗಳನ್ನೂ ಇಂಗೇನೆ ಮುಗಿಸಿಬಿಟ್ಳು. ಅದ್ರಾಗೆ ಒಬ್ಬ ದೂರ ಮುಣಕ್ಕಂಡು ಹೋಗವ್ನೆ ಇದು ಅವಳಿಗೆ ಗೊತ್ತಿಲ್ಲ ಎಲ್ಲಾರ್‍ನೂ ಮುಗಿಸಿದ್ನಿ ಅಂದ್ಕೊಂಡು ಗಡ್ಗೆ ಬಂದು ತುಂಡು ತುಂಡಾಗಿದ್ದ ತನ್ನ ಗಂಡನ ಸಿರ, ಕೈಕಾಲು, ಹೊಟ್ಟೆ ಎಲ್ಲಾ ಜೋಡಿಸಿ ಪರಮೇಶ್ವರನ ಧ್ಯಾನ ಮಾಡಿದ್ಲು ಅವಾಗ ಈಕೆ ಭಕ್ತಿಗೆ ಮೆಚಿ ಶಿವ-ಪಾರ್ವತಿ ಪ್ರತ್ಯಕ್ಷವಾಗಿಬಿಟ್ಟು ಅವಳ ಗಂಡನ್ನು ಬದುಕಿಸಿಕೊಟ್ರು. ಮಲ್ಲಯ್ಯ ಹರ ಹರಾ ಎಷ್ಟೊತ್ತು ಮನಗಿದ್ನಪ್ಪಾ ಅಂತಾ ಎದ್ದುಬಿಟ್ಟ. ಆವಾಗ ಆಯಮ್ಮ ಅವನಿಗೆ ಉಂಬಾಕಿಟ್ಳು." ನೋಡು ನೋಡು ನರಮನ್ಸೋರ್ನ ನಂಬೋದು ಬ್ಯಾಡಂದ್ರೆ ಕೇಳಲ್ಲ ಆ ಪೋಲಿನನಮಕ್ಳು ಐವತ್ತು ಜನಾನೂ ಯಂತಾ ಮೋಸಮಾಡಿಬಿಟ್ರು" ಅಂತ ಹೇಳ್ತಾ ಕಣ್ಣೀರು ಹಾಕಿದ್ಲು. ಇವ್ರು ಉಮ್ತಾ ಇರಬೇಕಾದ್ರೆ ಆ ಐವತ್ತು ಜನ ಪೈಕಿ ಒಬ್ಬ ಉಳ್ಕದ್ನಲ್ಲ ? ಅವನೇನು ಮಾಡಿಬಿಟ್ನಪ್ಪ ಅಂದ್ರೆ, ಒಂದು ಕೋಲು ಊರ್‍ಕೊಂಡು ಸೀದ ಇವ್ರತ್ರ ಬಂದುಬಿಟ್ಟ, ಬಂದುಬಿಟ್ಟು "ಸ್ವಾಮಿ ಸ್ವಾಮಿ, ನಾನು ಪೂರಾಬಡವ ಏನೋ ನಿಮ್ಮ ಕಾಲಸಂದೀಲಿ ಇದ್ಕೊಂಡು ಕುದ್ರಿಗೆ ಹುಲ್ಲು ತರೋದೋ, ಮೈ ಒರೆಸೋದೋ, ನೀರ್‍ಕುಡ್ಸೋದೋ ಇಂತಾವೇ ಬದುಕು ಮಾಡ್ಕೊಂಡು ಇರ್ತೀನಿ. ನಂಗೆ ಒಂದು ಚೂರು ಉಂಬಾಕೆ ಇಡ್ರಿ" ಅಮ್ತಂದು ಬೇಡ್ಕಂಡ. ಇವ್ನು ಇರೋದು ಸಾವಿತ್ರಮ್ಮಂಗೆಬೇಕಿಲ್ಲ. ಬ್ಯಾಡ ಬ್ಯಾಡ ನರಮನ್ಸೋರ್ನ ನಂಬಾಂಗಿಲ್ಲ. ಯಾರ್ನ ನಂಬಿದ್ರೂನೂ ಕೈ ಕೊಡ್ತಾರೆ. ಇಂಗೇನೇ ಬಾಳ ಬಾಳ ಆಗಿದಾವೆ. ಎಲ್ಲಾರೂ ಮೋಸಗಾರ್ರೆ ಹೇಳೋದೊಂದು ಮಾಡೋದೊಂದು" ಅಂತಂದು ಹೇಳ್ತಾಳೆ. ಆದ್ರೆ ಈ ಮಲ್ಲಯ್ಯ ಒಂದೀಟು ಮೆತ್ತನ್ನ ಮನುಷ್ಯ. ಅಯ್ಯೋ ಅಂದೋರ್ಗೆ ಪಾಪ ಅಂತ ಕರುಣೆ ತೋರಿಸ್ತಾನೆ, ಅದ್ಕಾಗಿ "ಬಿಡೇ ಸಾವಿತ್ರಿ ಈ ಅಜ್ಜ ಏನ್ಮಾಡ್ತಾನೆ ನಮ್ಮನ್ನ? ಒಂದೀಟು ಕೆಲ್ಸಪಲ್ಸ ಮಾಡ್ಕೊಂಡು ಮನಿಯಾಗೆ ಬಿದ್ದಿರ್‍ತಾನೆ" ಅಂತಂದು ಸಾವಿತ್ರಿನ ಒಪ್ಪಿಸಿ ಅವಜ್ಜನ ಮನೆಯಾಗೆ ಇಟ್ಕೊತಾನೆ.

ಇಂಗೇ ನಾಕಾಲ ಕಳೀತು. ಇವ್ರು ದಿನಾ ನೀರ್‍ಕಡೆ ಹೋಗ್ವಾಗ ಈವಜ್ಜ ಅವರಿಗೆ ನೀರ್ತಗಂಡು ಹಿಂದ್ಹೋಗೋನು. ಚಂದ್ರಾಜ್ಯ ಮಾತ್ರ ಅವಜ್ಜನ ಕೈಲಿ ಕೊಟ್ಟಗಿಟ್ಟ್ಯಾ ಅಂತಂದು ಹೆಂಡ್ತಿ ದಿನಾ ಗಂಡಂಗೆ ಹೇಳ್ತಿದ್ಲು. ಒಂದಿನ ಏನತಪ್ಪಾಂದ್ರೆ ಮಲ್ಲಯ್ಯ ನೀರ್‍ಕಡೆ ಹೋದ. ನಿಕ್ಕರ್ ಲಾಡಿ ಗಂಟು ಬಿರೀನೆ ಬರ್ಲಿಲ್ಲ. "ಇಂಗೆ ಚಂದ್ರಾಜ್ಯ ಇಡ್ಕ" ಅಂತೇಳಿ ಅವಜ್ಜನ ಕೈಲಿ ಕೊಡ್ತಾನೆ. ಅವ್ನು ನೀರ್‍ಕಡಿಕೆ ಕುಕ್ಕಂಡ. ಆಮೇಲೆ ನೀರುತಗಂಬಾರ

ಅಂತಂದು ಕರ್ದ. ಈವಜ್ಜ ನೀರುಕೊಟ್ಟ. ಮಲ್ಲಯ್ಯ ನೀರು ಇಸ್ಕಂಡು ಬಕ್ಕೊಂಡುತಿಕ ತೊಳ್ಕಮಿತ್ತಿದ್ದ. ಇದೇ ಸಮಯ ಅಂದ್ಕೊಂಡು ಎಲ್ಡು ತುಂಡಿಗೆ ಮಲ್ಲಯ್ಯನ ಕಡ್ದಾಕಿದ. ಯಾರ್ದೇಳು ? ಅವ್ನೆ ಆ ಅಜ್ಜನಂತೆ ಬಂದಿದ್ನಲ್ಲಾ ಅವ್ನು. ಸರಿ, ಅವನು ಸಾವಿತ್ರಿತಾಕೆ ಹೋಗಿ. "ಕತ್ತೆ ಮುಂಡೆ, ನಾನಾರಂತ ತಿಳ್ಕೊಂಡಿದ್ದಿಯ ? ನಮ್ಮಣ್ಣಾರ್ನೆಲ್ಲ ಕಡಿಬೇಕಾದ್ರೆ ನಾನೆಲ್ಲಿದ್ದೆ ಅಂದ್ಕೊಡ್ಯಾ. ಅಲ್ಲೊಂದು ಜಬ್ಲಾಗೆ ಅವಿಕ್ಕೊಂಡು ನೀಮಾಡೋ ಅವ್ತಾರನೆಲ್ಲ ನೋಡ್ತಿದ್ದೆ. ನಡೀ ಹೋಗಾನ ನಮ್ಮನೆಗೆ. ನಿನ್ರೂಪ ಹಿಡಿಸ್ಯೆತಿ. ನಮ್ಮನಿಯಾಗೆ ಅಮ್ಮಯ್ಯ ಒಬ್ಬೆ ಐದಾಳೆ" ಅಂತಂದು ಅವಳ ಕೈಹಿಡಿಯಾಕೆ ಹೋದ. ಅವಾಗ ಅವಳು ಏನೂ ಮಾಡ್ದೆ ಸುಮ್ನೆ ಇದ್ದು "ಆಯ್ತು ಸ್ವಾಮಿ ನೀನು ನನ್ಗಂಡಗಿಂತ ಬಾಳ ರೂಪಸ್ತ ಆಗಿದೀಯ. ನಿನ್ನಂಥ ರೂಪಸ್ತ ಈ ಜಗತ್ನಾಗೆ ಇಲ್ಲ. ಆಯ್ತು ಬರ್ತೀನಿ. ನೀನೇ ನನ್ನ ಗಂಡನಾಗ್ವಂತೆ. ಆದ್ರೆ ಏಟೇ ಆಗ್ಲಿ ಇಷ್ಟುದಿನ ನನ ಜೊತೆಗಿದ್ದ ಈ ಮಲ್ಲಯ್ಯನ ಶವ ಎಂಗೆ ಬಿಟ್ಟೋಗೋದು. ಅದ್ಕಾಗಿ ನೀನು ಸ್ವಲ್ಪ ಪುಡಿಕಳ್ಳೆ ಎಳಕಂಡು ಬಂದುಬಿಡು. ಸುಟ್ಟು ಬೂದಿ ಮಾಡಿ ಹೋಗಿಬಿಡಾನ", ಅಂತಂದು ಈ ಕಳ್ಳನಿಗೆ ಹೇಳಿದ್ಲು. ಅವ್ನು ಕಳ್ಳೆ ಎಳಕಂಡು ಬಂದ. ಸ್ವಾಮಿ ಸ್ವಾಮಿ ಈ ಕಳ್ಳೆ ತೊಳ್ಳು ಬೆಂಕಿ ಆಗುತ್ತೆ. ಶವ ಸರಿಯಾಗಿ ಸುಡೊಲ್ಲ ಅದ್ಕಾಗಿ ನೀವು ಆ ಕಳ್ಳೆಮ್ಯಾಲೆ ನಿಂತ್ಕಂಡಿರಿ. ಆಶವ ಸುಡ್ತೂಲು ನೀವು ಈ ಕಡೆ ಬಂದುಬಿಡ್ರಿ, ಆವಾಗ್ಗೆ ನಾನು ನೀವು ಕೂಡ್ಕೊಂಡು ಆರಾಮವಾಗಿ ಮಲಗಿ ಬಿಡಾನ" ಅಮ್ತಿದ್ದಂಗೆ ಅವ್ನಿಗೆ ಇವಳ ಮಾತು ಕೇಳಿ ಸ್ವರ್ಗಲೋಕ ಮೂರೇ ಗೇಣು ಆದಂಗೆ ಆತು. ಇವ್ಳು ಕಳ್ಳೆಮ್ಯಾಲೆ ಒಂದು ಡಬ್ಬ ಸೀಮೆಎಣ್ಣೆ ಹೊಯ್ದುಬಿಟ್ಟು ಆ ಕಳ್ಳನ ಆದ್ರಮ್ಯಾಲೆ ನಿಲ್ಸಿಬಿಟ್ಲು ಕಳ್ಳೆಮ್ಯಾಕೆ ಗಂಡನ ಶವ ಆಕ್ದೆ ಬೆಂಕಿ ಇಟ್ಟುಬಿಟ್ಲು. ಈಕಳ್ಳಂಗೆ ನಾನು ಸುಟ್ಹೋಗ್ತನಿ ಅಂಬೋ ಪರಿವೇನೇ ಇಲ್ಲ. ಬರೀ ಸಾವಿತ್ರಿ ಗ್ಯಾನದಾಗೆ ಐದಾನೆ. ಯಾವಾಗ ಇವುಳು ಬೆಂಕಿಹಚ್ಚಿದ್ಲೊ ಇಡೀ ಕಳ್ಳೆನೆ ದಗದಗ ಅಂತ ಅತ್ಕೊಂಡು ಆ ಕಳ್ಳನೂ ಅತ್ಕೊಂಡು ಉರ್ದು ಸತ್ಹೋದ. ಆವಾಗ ಸಾವಿತ್ರಿ ಗಂಡನತ್ರ ಬಂದು ಅವ್ನ ರುಂಡಮುಂಡ ಒಂದತ್ರ ಇಟ್ಟು ತಿರ್ಗ ಶಿವಪಾರ್ವತಿ ದ್ಯಾನಮಾಡಿದ್ಲು. ಶಿವ ಪಾರ್ವತಿ ಬಂದು ಸಾವಿತ್ರಿ ಗಂಡನ್ನ ಬದುಕಿಸಿಕೊಟ್ಟರು. ಆವಾಗ ಸಾವಿತ್ರಿ ಗಂಡನ್ನ ನೋಡಿ ಅಳ್ತಾ "ನರಮನ್ಸೋರ್ನ ನಂಬೋದು ಬ್ಯಾಡಾಂದ್ರೆ ಕೇಳ್ಳಿಲ್ಲ. ಎಂತೆಂತ ಹಲ್ಕಾ ಕೆಲ್ಸ ಮಾಡ್ತಾರೆ ನೋಡು. ಒಂದು ರೂಪಸ್ತ ಹೆಣ್ಣನ್ನ ಬಾಳೋದಿಕ್ಕೆ ಬಿಡಲ್ಲ ಈ ಚಾಂಡಾಲ ಗಂಡಸ್ಸರು" ಅಮ್ತಂದು "ನಡಿ ಹೋಗಾನ ನಿಮ್ಮ ಅಪ್ಪ ಅಮ್ಮ ಇರೋ ಊರ್ಗೆ" ಅಂತೇಳ್ತಾಳೆ. ಅವಾಗ ಅವರಿಬ್ರೂ ಅಲ್ಲಿಂದ ಸೀದ ಕರಮರಳ್ಳಿ ಮಕದ ಕಡೆ ಕಾಲುಹಾಕಿದ್ರು, ಅರ್ದದಾರಿಗೆ ಬರೋಹೊತ್ಗೆ ಕತ್ಲಾತು.

ದಾರಿ ನಡ್ವೆ ರಂಗೇನಳ್ಳಿ ಅಂಬೋದೊಂದು ಪಟ್ನಸಿಕ್ತು. ಆ ಪಟ್ನಕೆ ಬರೋಹೊತ್ಗೆ ಆ ಪಟ್ನದ ಕ್ವಾಟೆಬಾಗ್ಲು ಹಾಕಿಬಿಟ್ಟಿದ್ರು. ಆ ಪಟ್ನದ ಹೊರಗೆ ಮಾಂಕಾಳಮ್ಮನ ಗುಡಿ ಇತ್ತು. ಇವರು ಆ ಗುಡಿಯಾಗೆ ಇಳ್ಕಂಡ್ರು, ಅವತ್ತು ರಾತ್ರಿ ಆ ಪಟ್ನದಾಗೆ ಏನ ನಡೀತಪ್ಪಾಂದ್ರೆ ಅವೂರು ದೊರೆ ಸತ್ತು ಹೋಗವ್ನೆ. ಆ ದೊರ್ಗೆ ಒಬ್ಬೆ ಮಗಳು. ಅವರ ತಾಯಿ ಏನಂತ ಓಲೆ ಬರಿಸ್ತಾಳಪ್ಪಂದ್ರೆ ನಮ್ಮ ಪಟ್ಟದಾನೆ ಯಾರಿಗೆ ಹೂವಿನ ಮಾಲೆ

ಹಾಕುತ್ತೋ ಅವ್ರುರು ನನ್ಮಗಳ ಮದ್ವೆ ಆಗಿ ಈ ಪಟ್ನದ ರಾಜ್ಯ ದರ್ಭಾರ ಮಾಡಬಹುದು. ಅಂತ ಓಲೆ ಬರಿಸ್ಲಾಳೆ. ಆವಾಗ ವಿಷ್ಯ ತಿಳಿದ ಸುತ್ತು ಮುತ್ತಿನ ರಾಜಕುಮಾರ್ರೆಲ್ಲ ಬಂದ್ರು. ಪಟ್ಟದ ಆನೆ ಕೈಲಿ ಹೂವಿನ ಮಾಲೆ ಕೊಟ್ಟವ್ರೆ. ಸುತ್ತರ್ಕಂಡು ದುಂಡಗೆ ರಾಜಕುಮಾರ್ರು ಠೀವಿಯಿಂದ ಕುಂತವ್ರೆ. ಆ ಕಡೆ ಮಾಂಕಾಳಮ್ಮನ ಗುಡಿಯಾಗೆ ಇದ್ರಲ್ಲ ಮಲ್ಲಯ್ಯ ಸಾವಿತ್ರಿ ಇವ್ರಿಗೆ ಆ ವಿಷ್ಯ ತಿಳೀತು. ಅವಾಗ ಮಲ್ಲಯ್ಯ ಸಾವಿತ್ರಿತಾಗೆ "ಸಾವಿತ್ರಿ, ಸಾವಿತ್ರಿ, ಪಟ್ನದೊಳಗೆ ಏನೋ ಮೋಜು ನಡೀತ ಐತೆ. ನಾನು ಸರ್ರನೆ ಅಲ್ಲಿಗೆ ಹೋಗಿ ಬರ್ತೀನಿ ನೀನಿಲ್ಲೆ ಮನಿಕ್ಕ" ಅಂತೇಳಿ ಅವ್ನು ಆ ಸಭೆತಾಕೆ ಹೋದ. ಆನೆ ಮೂರುಸುತ್ತು ತಿರುಗಿಬಿಟ್ಟು ಸೀದ ಮಲ್ಲಯ್ಯಂತಾಕೆ ಬಂದುಬಿಟ್ಟು ಅವ್ನಿಗೆ ಹೂವಿನಾರ ಹಾಕಿಬಿಟ್ತು. ಅವಾಗ ಆ ದೊರೆಗಳಿಗೆಲ್ಲ ಬಾಳಿಸಿಟ್ಟು ಬಂದು ಬಿಡ್ತು. ಎಂತಾ ಆನೆ ಇದು. ಯಾವನೋ ತಿರ್ಕಂಡು ತಿಮ್ಮಾನ್ಗೆ ಆಕಿಬಿಡ್ತಲ್ಲ ಅಂತ ಎಗರಿ ಎಗರಿ ಬಿದ್ರು. "ಈ ಆನೇನ ಒದ್ದು ಕಟ್ರಿ ಒಳಗೆ. ಬ್ಯಾರೆ ಇನ್ನೊಂದು ಆನೆ ಒಡಕಂಡುಬರ್ರಿ. ಆ ಹುಡ್ಗನ್ನ ದೂರ ಗದುಮ್ರಿ" ಅಂತಂದು ಹೇಳಿಬಿಟ್ರು. ಇನ್ನೇನು ಮಾಡ್ತಾರೆ ? ಅವ್ರು ಹೇಳ್ದಂಗೆ ಮಾಡ್ತಾರೆ. ಆ ಮಲ್ಲಯ್ಯನ ದೂರ ಕಳಿಸ್ತಾರೆ. ಇನ್ನೊಂದು ಆನೆ ತಂದ್ರು. ಅದೂ ಕೂಡ ಮಲ್ಲಯ್ಯಂಗೆ ಹಾಕ್ತು. ಅವಾಗ ಬೇರೆ ಉಪಾಯ ಹೊಳೀದೆ ಇವ್ನೆ ಈ ಪಟ್ನದ ರಾಜ ಅಂತಂದ್ರು. ಆದಿಗೆ ಅಂದ್ರಾ ಹಾಕಿ, ಬೀದಿಗೆ ಸಪ್ರ ಹಾಕಿ, ದಿಬ್ಬೀರ್ತವಾಗಿ ಮದ್ವೆ ಮಾಡಿಬಿಟ್ರು ಮಲ್ಲಯ್ಯನ್ಗೆ. ಬಂದಿದ್ದ ರಾಜಕುಮಾರ್ರೆಲ್ಲ ಬಾಯಾಗೆ ಬೆಟ್ಟು ಇಟ್ಕೊಂಡು ಅದೇ ಹೋದ್ರು.

ಈ ಮಲ್ಲಯ್ಯ ಅಂಬೋನು ಗುಡಿಯಾಗೆ ಇದ್ಲಲ್ಲ ಸಾವಿತ್ರಿ, ಅವಳನ್ನ ಮರ್ತೇಬಿಡ್ಬೇಕಾ? ಆಮೇಲೆ ನಾಕು ದಿನದ ಮ್ಯಾಲೆ ನೆಪ್ಪಿಗೆ ಬಂತು. ಏಟೇ ಆಗ್ಲಿ, ನನ್ನ ಜೀವ ಕಾಪಾಡ್ದೋಳು, ರೂಪಸ್ತಿ, ಅಂತವಳನ್ನ ನಾನು ಕೈಬಿಟ್ರೆ ನನ್ಗೆ ತುತ್ತು ಅನ್ನ ಸಿಕ್ಕಲ್ಲ. ಅವಳನ್ನ ಯಾವ ರೀತಿ ಕರೇ ಕಳಿಸಿಕಮ್ಮಾನ ಇಲ್ಲಿಗೆ ? ಅಂತಂದು ಯೋಚ್ನೆ ಮಾಡ್ತ ಇಡೀ ರಾಜ್ಯನೇ ನನ್ದು. ನಂಗ್ಯಾಕೆ ಭಯ ಅಮ್ತಂದು ಒಂದು ಡಂಗೂರ ಸಾರಿಸ್ದ. ಏನಾಂತಪ್ಪಾಂದ್ರೆ ಇವತ್ತು ಮಹಾರಾಜ್ರು ಅನ್ನಚತ್ರ ಇಡಿಸ್ಯಾರೆ. ಪಟ್ಣದಾಗಿರೋರೆಲ್ಲ ಒಬ್ರೂ ಬಿಡ್ದಂಗೆ ಬಂದು ಉಂಡೋಗಬೇಕು. ಅಂತಂದು ಡಂಗೂರ ಸಾರಿಸ್ದ. ಅನ್ನ ಚತ್ರದತ್ತ ಒಂದು ಬಾಗ್ಲ ಪಂಚೆಗೆ ತನ್ನ ಪೋಟೊ ನೇತಾಕ್ದ. ಮೇಲೆ ಆಳುಗಳಿಗೆ ಒಂದು ಮಾತ್ನ ಹೇಳ್ತಾನೆ. ಏನಂತಂದ್ರೆ "ಆಪೋಟೊದತ್ತ ಯಾರಾದ್ರೂ ಬಂದು ಅತ್ರೆ ಅವರನ್ನ ಒಳಗೆ ಕರಕಂಡು ಬಾ" ಅಮ್ತಂದು ಹೇಳ್ದ. ಆಟೊತ್ತಿಗೆ ಸಾವಿತ್ರಮ್ಮಂಗೆ ಬಾಳ ದುಃಖ ಆಗೈತೆ. ಇಷ್ಟು ದಿನಾದ್ರೂ ಬರ್ಲಿಲ್ಲವಲ್ಲ. ನನ್ನ ಮರ್ತವ್ನೆ ಅಂದ್ಕಂಡು ಕನಸಿನಾಗೂ ಮನಸಿನಾಗೂ ಮಲ್ಲಯ್ಯನ್ನೆ ಧ್ಯಾನ ಮಾಡ್ತ ನಾಕೇದಿನ್ಕೆ ಅಷ್ಟು ದಪ್ಪ ಇದ್ದೋಳು ಸಣ್ಕೆ ಆಗಿಬಿಟ್ಳು. ಮಕದಾಗೆ ಒಂದೀಟು ಕಳೆ ಅಂಬೋದೆ ಇಲ್ಲ. ಇಂಗಿರುವಾಗ ಡಂಗೂರದ ಮಾತುಕೇಳಿ ನಾನು ಹೋಗಾನ ಅಂತಂದು ನಿರ್ಧಾರ ಮಾಡಿ ಸೀರೆ ಉಟ್ಕೊಂಡು ಹೋಗಾದು ಬ್ಯಾಡ ಗಂಡು ರೂಪಲಿ ಹೋಗಾನ ಅಮ್ತಂದು ನಿರ್ಧಾರ ಮಾಡಿ ಮಲ್ಲಯ್ಯನ ಬಟ್ಟೆಗಳನ್ನ ಹಾಕ್ಕೊಂಡ್ಳು. ಬರೋ ಅದ್ಯಾಗೆ ರಾಜನಮನೆ. ಎಲ್ಲಾರು

ಉಂಡುಂಡು ಬಾಯೊರಿಸಿಕೊಂಡು ಬರ್ತಾವ್ರೆ. ಇವುಳು ಕೂಡ ಅಲ್ಲಿಗೆ ಹೋಗಿಬಿಟ್ಳು. ಫೋಟೋ ಹಾಕಿದ್ರಲ್ಲ ಅಲ್ಲಿ ತಲೆ ಎತ್ತಿ ನೋಡಿದ್ರೆ ಮಲ್ಲಯ್ಯನ ಫೋಟೋನೆ ಕಾಣ್ಬೇಕೆ? ಆವಾಗ ಸಾವಿತ್ರಿ ಕಣ್ಣಾಗೆ ನೀರು ಪಳಪಳ ಉದ್ರಿ ಬಿಟ್ವು. ಮಲ್ಲಯ್ಯ ಕಷ್ಟದಾಗಿದ್ದಾಗ ತಾನು ನೆರವಾಗಿದ್ದು, ಅವನ ಜೊತ್ಗೆ ತಮಾಸೆ ಮಾಡ್ತಿದ್ದು, ಸರಸ ಆಡ್ತಿದ್ದು, ಇನ್ನೂ ಏನೇನೋ ನೆಪ್ಪಿಗೆ ಬಂದುಬಿಟ್ಟು ಬಿಕ್ಕಿಬಿಕ್ಕಿ ಅಳಾಕೆ ಸುರು ಮಾಡಿದ್ಲು. ಅವಾಗ ಅಲ್ಲಿದ್ದ ಆಳುಗಳು ರಾಜಂತಾಕೆ ಕಳಿಸಿದ್ರು. ಅವಾಗ ನೋಡ್ತಾಳೆ, ಮಲ್ಲಯ್ಯ ಅಂಗೇನೆ ರಾಣಿ ಪಕ್ಕದಾಗ ಸಿಮ್ಹಾಸನದ ಮ್ಯಾಲೆ ಕುತ್ಕಂಡವನೆ ನಗತ. ಸಾವಿತ್ರಮ್ಮಂಗೆ ಅವಾಗ ಹೋದಜೀವ ಬಂದಂಗಾತು. ಗೋಳೋ ಅಂತ ಅತ್ತುಬಿಟ್ಲು. ಸಿಮ್ಹಾಸನದ ಮ್ಯಾಲಿದ್ದ ಮಲ್ಲಯ್ಯ ಆ ಕೂಡ್ಲೆ ಕೆಳಾಕ್ಬಂದು ಸಾವಿತ್ರಿ ಕೆನ್ನೆಮ್ಯಾಕೆ ಕೈಯಿಟ್ಟು ಸಮಾಧಾನ ಮಾಡ್ತಾ ತನ್ನ ಕಿರಿಹೆಂಡ್ತಿನೂ ಕರ್ದು ಅವ್ರಿಬ್ರು ಆವೂರ್ಗೆ ಎಂಗಂಗೆ ಬಂದು ಏನೇನ ಪಡಿಪಾಟ್ಲು ಬಿದ್ರು ಅಂಬೋದ್ನೆಲ್ಲ ಹೇಳ್ದ. ಅವಾಗ ಚಿಕ್ಕೋಳು "ಆಯ್ತು ಸ್ವಾಮಿ, ಈಯಮ್ಮ ನಂಗೆ ಅಕ್ಕ ಆಗ್ತಳೆ. ಜೊತೆಗೆ ನಿನ್ಗೆ ಹಿರೇ ಹೆಣ್ತಿ. ನಾನು ಚಿಕ್ಕೇಣ್ತಿ ಆಗ್ತೀನಿ." ಅಂತೇಳಿ ಚಿಕ್ಕೋಳು, ಸಾವಿತ್ರಮ್ಮನ ಕಾಲ್ಗೆ ಬಿದ್ದು ಕೈ ಮುಗಿತಾಳೆ.

ಇಷ್ಟೆಲ್ಲಾ ಆದ್ಮೇಲೆ ಮಲ್ಲಯ್ಯ ರಂಗೇನಹಳ್ಳಿಯಿಂದ ಕರಮರಳ್ಳಿಗೆ ಒಂದಾಳು ಕಳ್ಸಿ ಅಲ್ಲಿದ್ದ ಅಪ್ಪ, ಅಮ್ಮ ಅಣ್ಮಂದ್ರು, ಬಂಧುಬಳಗನೆಲ್ಲ ಕರೆಕಳ್ಸಿಕೊಂಡು ಇನ್ನೊಂದ್ಸಾರಿ ಪಟ್ಟಕುಟ್ಟಿ ಪಟ್ನ ಸಾರ್ಸಿ ಆದಿಗೆ ಅಂದ್ರ ಹಾಕ್ಸಿ, ಬೀದಿಗೆ ಚಪ್ರ ಹಾಕ್ಸಿ, ದಿಬ್ಬೀರ್ತವಾಗಿ ಇಬ್ರಾಳನ್ನು ಮದ್ವೆ ಆಗ್ತಾನೆ. ಎಲ್ಲರೂ ಸಂತೋಸಪಡ್ತಾರೆ. ನಾವಿಲ್ಲಿ ಕಥೆ ಕೇಳ್ತಾ ಇದಿವಿ.

○

೩. ಹಾವಾಗಿ ಹರಿದ ಅಣ್ಣಯ್ಯ

ಕರಮರಳ್ಳಿ ಅಂಬೋದೊಂದು ಊರು. ಆ ಊರಾಗೆ ಇಬ್ರಾಳು ಗಂಡ ಹೆಂಡ್ತಿ ಇದ್ರು. ಅವ್ರಿಗೆ ಒಂದು ಹೆಣ್ಣು ಒಂದು ಗಂಡು. ಗಂಡಿನ ಹೆಸರು ಮಲ್ಲಣ್ಣ, ಹೆಣ್ಣಿನ ಹೆಸ್ರು ಮಲ್ಲಕ್ಕ. ಮಲ್ಲಣ್ಣ ಹಿರಿಯೋನು ಮಲ್ಲಕ್ಕ ಚಿಕ್ಕೋಳು. ಒಂದಿನ ತಾಯಿ ಗಂಡನತ್ರ "ನಾಳೆ ನಾನು ಸಾಯ್ತೀನಿ ನೀನು ಇನ್ನೊಂದು ಮದ್ವೆ ಆಗು" ಅಮ್ತಂದು ಹೇಳಿದ್ಲು. "ಎಲೇಲೇ ಇದೇನು ಇಂಗಮ್ತಿಯಾ ಇನ್ನೂ ದಿಮ್ಮ್ಯೆದಿಯಾ ಎಲ್ದು ಮಕ್ಕಳು ಬಂಗಾರದಂಗೆ ಓತ್ತಾ ಐದಾವೆ ಅವ್ರಿಗೆ ಬೇಸಿಕ್ಕೋರು ಗತಿಯಿಲ್ದಂಗಾಗುತ್ತೆ, ಸಾಯ್ತಿನಿ ಅಮ್ತಿಯಲ್ಲೇ ನೀನು" ಅಂತ ಗಂಡ ಕೇಳ್ದ. "ಸ್ವಾಮಿ ನಿಜವಾಗ್ಲೂ ನಾಳೆ ಅಗಲೂಟದೊತ್ತಿಗೆ ನನ್ನಾಸೆನ ಪೂರೈಸಿ ಕೊಡು. ನಾನು ನಿಜವಾಗ್ಲೂ ಸಾಯ್ತಿನಿ" ಅಂತಂದು ಕಣ್ಣೀರು ಸುರಿಸಿದ್ಲು. ಮಾರ್ನೆದಿನ ಅಗಲೂಟದೊತ್ತಿಗೆ ಸತ್ತುಹೋಗಿಬಿಟ್ಳು. ಇವ್ನಿಗೆ ಭಾರಿ ಯೋಚ್ನೆ ಆಯ್ತು. "ಮಕ್ಕಳಿಗೆ ಬೇಸಿಕ್ಕರಿಲ್ಲ, ಅಲ್ದನೆ ಮಕ್ಳು ಕೂಡ ಯಾವಾಗ್ಲೂ ಅಮ್ಮಯ್ಯ ಅಮ್ಮಯ್ಯ ಅಮ್ತಂದು ಕನವರಿಸ್ಕಮ್ತಾವೆ. ಏನ್ಕಷ್ಟ ಕೊಟ್ಟುಬಿಟ್ಟೆ ದೇವ್ರು ಅಮ್ತಂದು ಬಾಳ ಚಿಂತೆ ಮಾಡಾಕ ಹತ್ತಿದ. ಎಷ್ಟು ದಿನಾಂತ ಇಂಗೇ ಇರಾಕಾಗುತ್ತೆ. ಒಂದಿನ ಮದ್ವೆನೂ ಆಗಿಬಿಟ್ಟ. ಮಕ್ಕಳು ಮಠಕ್ಕೆ ಹೋಗ್ತಾ ಅದಾವೆ. ಈ ಮಲ ತಾಯಿ ಈ ಮಕ್ಕಳನ್ನ ಸೇರ್ತಿರಲಿಲ್ಲ. ಯಾವಾಗ್ಲೋ ಅವಳಿಗೆ ಸರಿಬಂದಾಗೆ ಆ ಮಕ್ಕಳಿಗೆ ಒಂದೀಟು ಕೂಳು ಕಾಣಿಸ್ತಿದ್ಲು. ದಿನಕ್ಕಿಷ್ಟು ದಿನಕ್ಕಿಷ್ಟು ಮಕ್ಕಳು ಕೊರಗಾಕೆ ಹತ್ತಿದ್ವು. ಇವ್ಳು ಗಂಡನ ಕೂಟೆ ಏನ ಹೇಳ್ತಾಳೆ ?" ಈ ಮಕ್ಕಳಿಬ್ರನ್ನೂ ಒಂದೇ ಹಾಸ್ಗೆಮೇಲೆ ಮಲಗಿಸಬ್ಯಾಡ ಒಂದು ಜೊತೇಲಿ ಉಂಬಾಕಿಕ್ಕಕೂಡ್ದು" ಅಮ್ತಂದು ಕಟುವಾಗಿ ಹೇಳಿದ್ಲು. "ಲೇ ಇದೇನೆ ಇಂಗಮ್ತಿಯಾ ಸಣ್ಣಮಕ್ಕಳು ಅಣ್ಣತಂಗಿ ಒಂದೊಟ್ಟೀಗೇ ಬಂದಾವು ಜೊತೇಲಿ ಉಂಡ್ರೆ ಏನಾಗುತ್ತೆ ? ಏನಿಂತ ಮಾತಾಡ್ತಿಯಲ್ಲ" ಅಮ್ತಂದು ಕೇಳ್ತಾನೆ. "ಸಾಮಿ ಈ ಪ್ರಪಂಚದಲ್ಲಿ ಇರೋ ವತಾವರಣ ನಿಂಗೆ ಗೊತ್ತಿಲ್ಲ. ಏಳಿದ್ರೆ ಕೇಳಾಕಿಲ್ಲ" ಅಮ್ತಂದು ಬೇಜಾರು ಮಾಡಿಕಂಡ್ಳು.

ಒಂದಿನ ಅಗಲೂಟೊತ್ನಾಗೆ ಒಬ್ಬ ಹಾವಾಡ್ಗ ಬಂದಿದ್ದ. ಮಕ್ಕಳು ಎಲ್ದುನೂ ಓದಾಕೆ ಹೋಗಿದ್ವು, ಅವರಪ್ಪಯ್ಯನೂ ಇರ್ಲಿಲ್ಲ. ಮಲ್ತಾಯಿ ಹಾವಿನ್ಮರಿ ತಂದ್ಲು. ಒಂದು ಕಪ್ಪಿಗೆ ಅದ್ನ ಬಿಟ್ಳು. ಆ ಕಪ್ಪಿನಾಕೆ ಒಳ್ಳೆ ಹಾಲು ಮತ್ತೆ ಸಕ್ರೆ ಹಾಕಿದ್ಲು. ಮಕ್ಕಳೆರಡು ಮಠದಿಂದ ಮನ್ಗೆ ಬಂದಾಗ ಎಂದೆಂದೂ ಪ್ರೇಮದಿಂದ ಕಣ್ಣೋಳು ಅವತ್ತು ಬಾರೀ ಪ್ರೀತಿಯಿಂದ "ಇಷ್ಟೊತ್ತಿನತಂಕ ಏನ್ಮಾಡ್ತಿದ್ರಪ್ಪಾ ಬರ್ರಿ ಉಣ್ಣುಬರ್ರಿ". ಅಮ್ತಂದು ಮಲ್ಲಕ್ಕಂಗೆ ಕೊಟ್ಳು. ಸಕ್ರೆಹಾಲು ಹಾಕಿದ್ದ ಕಪ್ನ ಮಲ್ಲಣ್ಣಂಗೆ ಕೊಟ್ಳು. ಹಾಲು ಕುಡ್ದು ಒಂದು ಗಳಿಗೆ

ಹೊತ್ಗೆ ಭಾರಿ ಹೊಟ್ಟೆನೋವು ಬಂದುಬಿಡ್ತು ಮಲ್ಲಕ್ಕಂಗೆ. ಅಪ್ಪ ಸಾಯಂಕಾಲದೊತ್ತಿಗೆ ಬಂದ. ಮಲ್ಲಕ್ಕಂಗೆ ಹೊಟ್ಟೆನೋವು ಬರ್ತಾಬರ್ತಾ ಜಾಸ್ತಿ ಆಗ್ತತೆ ಎಂಗೆ ಆಗ್ತಿತಪ್ಪಾಂದ್ರೆ ಬಸ್ರೇರು ಯಾವರೀತಿ ಇರ್ತಾರೋ ಅಂಗೆ ಮಲ್ಲಕ್ಕನ ಹೊಟ್ಟೆ ಉಬ್ಬಿಕೊಂಡೈತೆ. ಹಡಿವಾಗ ಎಂಗೆ ಒದ್ದಾಡ್ತಾರೋ ಅಂಗೆ ಒದ್ದಾಡ್ತಾಳೆ.

ಮನೆ ಮಲ್ತಾಯಿ ಗಂಡನ್ಗೆ ಹೇಳಿದ್ಲು "ನೋಡು ನಾನೇಳ್ದೆ ನೀನು ಕೆಳ್ಳಿಲ್ಲ ಅವ್ರಿಬ್ರಾಳನ್ನು ಜೊತೆಗೆ ಮನಿಗಿಸ್ಬೇಡ ಅಂತ ಸಾರಿ ಸಾರಿ ಹೇಳ್ದೆ ನೀನು ಕೇಳಲಿಲ್ಲ ನೋಡು ಏನ ಬದ್ಕು ಆಗೈತಿವಾಗ ಅನುಭವಿಸು" ಅಮ್ತಂದು ಗಂಡನ್ಮೇಲೆ ಕ್ವಾಪ ಮಾಡ್ಕಂಡ್ಳು. ಮಲ್ಲಕ್ಕ ಹೊಟ್ಟೆ ನೋವ್ನಿಂದ ಇಳ್ಳು ಹಗಲು ಒಂದೇ ಸಮನಾಗಿ ಹೊಯ್ಕಮ್ತತೆ. ಈ ತಂದೆ ಏನ್ಮಾಡಿಬಿಟ್ಟ ಈ ಸಂಕ್ಟ ನೋಡ್ಲಾರ್ದೆ ಇಬ್ರು ಮಕ್ಕಳನ್ನು ಕರ್ಕೊಂಡೋಗಿ ಅಡವಿಗೆ ಬಿಟ್ಟ. ಅದು ಭಾಳ ಕಾನು ಅಲ್ಲಿ ಹುಲಿ, ಕಿರುಬಗಳ ಕಾಟ ಜಾಸ್ತಿ. ಅಲ್ಲಿ ಮಲ್ಲಕ್ಕಂಗೆ ನಡಿಯಕೆ ಆಗ್ಲಿಲ್ಲ ಬಾಳ ಸುಸ್ತು ಆಯ್ತು. ಒಳ್ಳೆ ಸರ್ವತ್ತು. ಆ ಕಾನ್ನಾಗೇನೆ ಒಂದು ಒಲ್ಲಿಬಟ್ಟೆ ಹಾಸಿಬಿಟ್ಟ ಅವರಿಬ್ರಾಳನ್ನು ಮಿನಿಗಿಸಿಬಿಟ್ಟ, ಇವ್ನೊಂದ್ಕಡೀಕೆ ಮನಿಕ್ಕಂಡ. ಮಕ್ಕ್ಳ ಚೆನ್ನಾಗಿ ನಿದ್ದೆ ಹೋದ್ವು ತಂದೆ ಎದ್ದುಬಿಟ್ಟು ಅದೇ ಬಂದುಬಿಟ್ಟ.

ಬೆಳಿಗ್ಗೆ ಮಲ್ಲಣ್ಣ ಎದ್ದು ನೋಡ್ತಾನೆ ಅಪ್ಪಯ್ಯ ಇಲ್ಲ. ಅವಾಗೇನ್ಮಾಡ್ತಾರೆ ಈ ಹುಡುಗ್ರು ದೇವ್ರೆಗತಿ ಅಮ್ತಂದು ಎತ್ಲಾಗನ್ನ ಊರು ಇರೋ ಕಡ್ಗೆ ಹೋಗಾನಂತ ತೀರ್ಮಾನಿಸಿದ್ರು. ಅದ್ರೆ ಮಲ್ಲಕ್ಕಂಗ ಹೊಟ್ಟೆನೋವು ತಿರ್ಗ ಸುರ್ವಾಯ್ತು. "ಅಣ್ಣಾ ಅಣ್ಣಾ ನೋವು ಜಾಸ್ತಿ ಆಗ್ಯತೆ, ಬಾಳ ಬಾಯಾರ್ಕೆ ಆಗ್ತತೆ" ಅಮ್ತಂದು ಹೇಳಿದ್ಲು ಈ ಮರ ಹತ್ತಿ ನೋಡ್ತೀನಿ ಎಲ್ಲಾದ್ರೂ ಊರುಗೀರು ಕಾಣ್ತತ್ತೈನೋ ! ಕಂಡ್ರೆ ಅಲ್ಲಿಗೋಗಿ ನೀರು ತರ್ತೀನಿ ತಂಗ್ಯಮ್ಮ ನೀನು ಇಲ್ಲೇ ಇದ್ದುಬಿಡು" ಅಂತ ಹೇಳ್ತಾನೆ. ಅವಾಗ ಅಲ್ಲೇ ತೋರೆಬೀರ್ನಳ್ಳಿ ಅಂಬೋದೆಂದು ಊರು ಕಾಣ್ತು. ಅಲ್ಲಿಗೆ ಓಡಿಹೋಗಿ ಕುಂಬಾರ ಮನಿಯಾಗೆ ಒಂದು ಗಡ್ಗೆ ಇಸ್ಕಂಡುಬಂದು ನೀರುತುಂಬ್ಕೊಂಡು ತಂಗ್ಯಮ್ಮ ತಾಕೆ ಸೀದ ಬಂದುಬಿಟ್ಟ. ಮಲ್ಲಕ್ಕ ಹೊಟ್ಟೆ ತುಂಬಾ ನೀರು ಕುಡಿದ್ಲು. "ಏನಮ್ಮಾ ತಂಗಿ ಆ ಗ್ರಾಮದಾಗೆ ಒಳ್ಳೆ ಜನ ಐದಾರೆ ನಾನು ತಿರ್ಗ ಆವುರ್ಗೆ ಹೋಗಿಬಿಟ್ಟು ನಿನ್ಗೆ ಏನಾದ್ರು ಉಂಬಾಕೆ ತರ್ತೀನಿ ನೀನು ಮನಿಕ್ಕಂಡಿರಮ್ಮ" ಅಂತೇಳಿ ತಂಗೀನ ಮನಗಿಸಿಬಿಟ್ಟು ತೋರೇಬೀರ್ನಳ್ಳಿಗೆ ಓಡಿಬಿಟ್ಟ. ಆ ಊರಾಗೆ ಒಬ್ಬ ಸಾವುಕಾರ್ರ ಮನೆಗೆ ಹೋಗಿ "ಅಮ್ಮಯ್ಯ ತಾಯಿ ಗಳಿರಾ ನನ್ನ ತಂಗಿ ಅರನ್ನ ಅಡವಿಯಾಗೆ ಹೊಟ್ಟೆನೋವಂತ ಬಡಕಮ್ತಾಳೆ ಮೂರುದಿನಾ ಆತು ಉಂಡು, ಆ ಎಣ್ ಮಗೀಗೆ ಏನಾದ್ರು ಒಂದೀಟು ಉಂಬಾಕಿದ್ರೆ ಕೊಡ್ರಮ್ಮ" ಅಮ್ತಂದು ಕಣ್ಣೀರು ಅಕ್ಕಮ್ತ ಕೇಳ್ದ. ಆಮನೆ ಹೆಂಗಸ್ರು ವಿಷ್ಯ ಕೇಳಿ ಮರುಕಪಟ್ಕೊಂಡು ಹಾಲುತುಪ್ಪ ಅನ್ನ ಎಲ್ಲಾ ಕೊಟ್ರು, ಏಟೇ ಆಗ್ಲಿ ಎಂಗಳ್ಳು ಎಂಗಳ್ಳಿಗೆ ಮನಸುಕೊಡತ್ತೆ ಅಂಬೋದು ಇದೇನೆ. ಆ ಪದಾರ್ತನೆಲ್ಲ ತಗಂಡುಬಿಟ್ಟು ತಂಗ್ಯಮ್ಮತಾಗೆ ಒಂದೇ ಉಸ್ರಿಗೆ ಓಡಿಬಂದುಬಿಟ್ಟ. ಕಾಲಾಗೆ ಮೆಟ್ಟು ಬೇರೆ ಇಲ್ಲ ಮುಳ್ಳುಪಳ್ಳು ಓಕ್ಕಂಡ್ರೂ, ಮೈಕೈತರಕಂಡ್ರೂ ನದ್ರಿಲ್ದಂಗೆ ಉಸ್ರುಕಟ್ಕೊಂಡು ಓಡಿ ಬಂದುಬಿಟ್ಟ ತಂಗ್ಯಮ್ಮ ಸನೀಪಕ್ಕೆ ಬಂದ್ವನೆ ತಂಗಿ ಒಂದಾಲ್ಮರದ ಅಡೇಲಿ ಮನಗವಳೆ. ಅವಾಗ

ಒಂದು ವಿಚಿತ್ರ ಕಂಡುಬಂತು ಏನಪ್ಪಾಂದ್ರೆ ಅವಳ ಬಾಯೊಗಾಸಿ ನಾಗೇಂದ್ರ ಕಡೀಗೊಲ್ಟು ಬಂದು ಮಗ್ಗುಲಾಗೆ ಆಡ್ತಾ ಅವ್ನೆ. ಅವಳಿಗೆ ಬಾಳಾ ಆನಂದವಾಗಿ ನಿದ್ದೆ ಬಂದೈತೆ ನಾಗೇಂದ್ರ ಈ ಮಲ್ಲಣ್ಣನ್ನು ಯಾವಾಗ ನೋಡಿ ಬಿಡ್ತೊ ಅವಾಗ್ಲೆ ತಿರ್ಗ ತಂಗಿ ಬಾಯೊಗಾಸಿ ಒಳೀಕೆ ಹೋಗಿಬಿಡ್ತು. ಅಣ್ಣ ನಿಂತ್ಕೊಂಡು ಬಾಳ ಹೊತ್ತು ಯೋಶ್ನೆ ಮಾಡ್ದ ಅದು ಹೊಟ್ಟೆ ಒಳಾಕೆ ಹೋದಕೂಡ್ಲೆ ಮಲ್ಲಕ್ಕಂಗೆ ಹೊಟ್ಟೆನೋವು ಸುರುವಾಯ್ತು. ಅಮ್ಮಾ, ಅಪ್ಪಾ, ಅಣ್ಣಯ್ಯ...ಅಣ್ಣಯ್ಯ.... ಅಂತ ನರಳೋಕೆ ಸುರುಮಾಡಿದ್ಲು. ಆಟೊತ್ಗೆ ಮಲ್ಲಣ್ಣನೂ ಅಲ್ಲಿಗೆ ಬಂದ. ತಂಗ್ಯಮ್ಮಂಗೆ ಊಟ ಮಾಡಿಸಿದ. ತಂಗ್ಯಮ್ಗೆ ತಿರ್ಗ ನಿದ್ದೆ ಬಂದುಬಿಡ್ತು ತಂಗೀನ ಮನಗಿಸಿಬಿಟ್ಟ. ಅಲ್ಲೊಂದು ದೊಡ್ಡದು ಲಂಟಾನ ಪೆಳೆ. ಆ ಲಂಟಾನ ಪೆಳೆಮರ್ಗೆ ಹೋಗಿ ನಿಂತ್ಕಂಡ. ಅವಾಗ ನಾಗೇಂದ್ರ ಮಾಮೂಲಾಗಿ ಆಯಮ್ಮನ ಬಾಯಾಗಾಸಿ ಹೊರಾಕೆ ಬಂದು ದೂರ ಅಡ್ಕಮ್ತ ಹೋತು. ನಾಗೇಂದ್ರ ದೂರ ಹೋಗಾತಂಕ ಸುಮ್ಕಿದ್ದು ಆ ಮೇಲೆ ಬಡಬಡ ಹೋಗಿಬಿಟ್ಟು ಆ ನಾಗೇಂದ್ರನ ಬಾಲ ಹಿಡ್ಕಂಬಿಟ್ಟು ಗರಗರ ತಿರುಗಿಬಿಟ್ಟು ನೆಲಕ್ಕೆ ಬಡಿದುಬಿಟ್ಟು ಬೆಟ್ಟದ ಕಡೀಕೆ ಎಸೆದುಬಿಟ್ಟ. ಎಸ್ತು ಬಂದು ತಂಗೀನ ಎಬ್ರಿಸ್ದ ತಂಗಿ ಎದ್ದುಬಿಟ್ಟು "ಅಣ್ಣಯ್ಯ ಅಣ್ಣಯ್ಯ ನನ್ಗೆ ಈವಾಗ ಹೊಟ್ಟೆನೋವು ಅಂಬೋದೇ ಇಲ್ಲ ಕಾಣಣ್ಣ, ನನ್ಹೊಟ್ಟೆ ತೆಳ್ಗೆ ಐತೆ ನೋಡಣ್ಣ" ಅಮ್ತಂದು ಬಾಳ ಕುಸಿ ಪಟ್ಲು. ಆಗ್ಲಮ್ಮ ಒಳ್ಳೇದಾತು ನೀನು ಇಲ್ಲೇ ಆಡು, ಅದ್ರೆ ಆ ಬೆಟ್ಟದಾ ಕಡೀಕೆ ಹೋಗಬೇಡ "ನಾನು ಬಿರೀನ ತೊರೆಬೀರ್ನೆಳ್ಗೆ ಹೋಗಿ ಬರ್ತೀನಿ ಅಂತೇಳಿ ಹೊಳ್ಟುಹೋದ.

ಅವ್ನು ಅತ್ಲಾಗೆ ಹೋದಕೂಡ್ಲೆ "ಅಣ್ಣಯ್ಯ ಬೆಟ್ಟದಾಕಡೀಕೆ ಹೋಗಬ್ಯಾಡ ಅಂದ್ನಲ್ಲ ಅಲ್ಲಿ ಏನಿರಬಹುದು. ಅಮ್ತಂದು ಆಲೋಚ್ನೆ ಮಾಡ್ತಾ ಏನೇ ಆಗ್ಲೀ ಅದ್ನ ನೋಡೇಬಿಡ್ಬೇಕು" ಅಂದ್ಕೊಂಡು ಆ ಬೆಟ್ಟ ಹತ್ತಿನೋಡ್ತಾಳೆ ಅಲ್ಲೊಂದು ಕೊಳ. ಅದ್ರಾಗೆ ಈ ಹಾವು ತಾವ್ರೆಹೂವಾಗಿ ಕಳಕಳ ಅಮ್ತ ಅರಳೈತೆ. ಆಹಾಹಾ ನಮ್ಮಣ್ಣಯ್ಯ ಇದ್ಕೇ ಇತ್ಲಾಗಿ ಹೋಗ್‌ಬ್ಯಾಡ ಅಂದ್ನೇನೋ ಅಂದ್ಕೊಂಡು ಹೂಕಿತಕ್ಕಂಡು ಮುಡ್ಕಮ್ತಾಳೆ ಇನೊಂದು ನಾಕೈದು ಹೂವು ಕಿತ್ಕೊಂಡು ಬಂದು ಸರ ಮಾಡಿದ್ಲು. ಮಾಮೂಲು ಜಾಗಕ್ಕೆ ಬಂದು ಕುಂತ್ಕಂಡ್ಳು ಅದೇ ಸಮಯಕ್ಕೆ ಅಣ್ಣನೂ ಬಂದ "ಯಣ್ಣಾ ಯಣ್ಣಾ ಅದ್ಕಾಗಿ ಆ ಕಡೆ ಹೋಗಬ್ಯಾಡ ಅಂದ್ಯಾ ? ತಂಗಿ ಹೂಕಿತ್ಕಂಡು ಮುಡ್ಕಮ್ತಾಳೆ ಅಮ್ತಂದು ಹಿಂಗೆ ಹೇಳಿದ್ಯೊ ? ಹೂವು ಎಂತಾ ಚೆಂದಾಕವೆ ನೋಡಣ್ಣ" ಅಮ್ತಂದು ಅವ್ನು ಬ್ಯಾಡ ಬ್ಯಾಡ ಅಂದ್ರೂ ಕೇಳ್ದಂಗೆ ಅವನ ಕೊಳ್ಳಿಗೆ ಹಾರಹಾಕಿಬಿಟ್ಲು. ಅವಾಗ ಮಲ್ಲಣ್ಣ ಏಳೆಡೆ ಸರ್ಪ ಆಗಿಬಿಟ್ಟು ಅಲ್ಲೊಂದು ಹುತ್ತ ಇತ್ತು ಅದ್ರೊಳಕೆ ಹೋಗಿಬಿಟ್ತು. ಅವಾಗ ತಂಗೀ ಓಡೆಲೇ ಹೋಗಿಬಿಟ್ಟು ಅಹುತ್ತದ ಕ್ವಾಮೆ ಒಳಗೆ ಕೈಯಿಟ್ಟು "ಅಣ್ಣಯ್ಯ ಅಣ್ಣಯ್ಯ ನಾನು ತಪ್ಪು ಕೆಲ್ಸ ಮಾಡಿಬಿಟ್ಟೆ, ನಿನ್ನಬಿಟ್ಟು ನಾನಿರಲ್ಲ ಅಣ್ಣಯ್ಯ, ನಾನು ನಿನ್ನ ಜೊತೆ ಬರ್ತೀನಿ ಅಣ್ಣಯ್ಯ" ಅಮ್ತಂದು ಗೋಳೋ ಅಂತ ಅಳ್ತಾಳೆ. ಎಲ್ಲವ್ನೆ ಅಣ್ಣ ? ಅಣ್ಣ ಇಲ್ಲ ಗಿಣ್ಣ ಇಲ್ಲ. ಭೂಲೋಕಕ್ಕೆ ಹೋಗಿ ಸೇರ್ಕಂಡವ್ನೆ. ಇವುಳು ಕ್ವಾಮೇಗೆ ಕೈ ಇಟ್ಟೋಳು ಹೊರೀಕೆ ತಗಿಲೇ ಇಲ್ಲ. ಒಂದೇ ಸಮನಾಗ್ಗಿ "ಅಣ್ಣಯ್ಯ ಅಣ್ಣಯ್ಯ

ಅಣ್ಣಯ್ಯ" ಅಮ್ತಂದು ಕನವರಿಸಿಕಮ್ತಿದಾಳೆ. ಕೂಳಿಲ್ಲ ನೀರಿಲ್ಲ, ನಿದ್ದೆ ಮೊದ್ಲೆ ಇಲ್ಲ. ತಲೆ ಎತ್ತಂಗಿಲ್ಲ ಮನುಸೋರ ಮಕ ನೋಡಂಗಿಲ್ಲ.

ಇಂಗೇನೆ ಒಂದುವಾರ ಕಳೀತು ಅದೇ ಮಾರ್ಗವಾಗಿ ಪರುಶುರಾಂಪುರದ ದೊರೆ ಬ್ಯಾಟಿ ಆಡ್ಕಮ್ತ ಬಂದ. ಆ ಹುತ್ತದತ್ರ ಸ್ವಲ್ಪದೂರದಾಗೆ ಆಲ್ದ ಮರದತ್ರ ರಾಜ ಆಯಾಸದಿಂದ ಕುಕ್ಕಂಡಿದ್ದ ಆವಾಗ ಅಣ್ಣಾ, ಅಣ್ಣಾ, ಅಣ್ಣಾ ಅಂಬೋ ಸದ್ದು ಕೇಳಿ ಬರ್ತಿತ್ತು. ಅವಾಗ ರಾಜ ಏನಿದು ಇಂತಾ ಸದ್ದು ಬರುತ್ತಲ್ಲಾ ಅಮ್ತಂದು ಆ ಸದ್ದಿನ ಕಡೀಕೆ ನೋಡ್ತಾನೆ. ಅಲ್ಲೊಂದು ಹುತ್ತ ಕಾಣ್ತು. ಆ ಹುತ್ತದಮ್ಯಾಲೆ ಈ ಹುಡ್ಗಿ ಮಕ್ಕಂಡಿರೋದು ಕಂಡುಬಂತು. ಇದೇನಾಶ್ಚರ್ಯವಪ್ಪಾ ಅಂದ್ಕೊಂಡು ರಾಜ ಅಲ್ಗೇ ಹೋದ. "ಅಮ್ಮಾ, ಯಾರಮ್ಮ ನೀನು ? ಯಾಕಿಂಗೆ ಅಳ್ತಿದಿಯಾ ಯಾವೂರು ಅಮ್ತಂದು ರಾಜ ಕೇಳ್ದ. ಜಮ್ ಅಮ್ಲಿಲ್ಲ ಜಪ್ಪಯ್ಯ ಅಮಿಲ್ಲ "ಏನಮ್ಮಾ ನಿನ್ಗೆ ಬರ್‌ಬಾರ್ದಂತ ಕಷ್ಟ ಬಂದೈತೇನಮ್ಮಾ ? ಹೇಳಮ್ಮ ನನ್ಕೂಟೆ ಹೇಳದಿದ್ರೆ ಇನ್ನಾರಕೂಟ ಹೇಳ್ತೀಯಮ್ಮ" ಅಮ್ತಂದು ತಿರ್ಗ ರಾಜ ಕೇಳ್ದ. ಅದ್ಕೂನೂ ಊಂ. ಇಲ್ಲ ಉಸ್ರಿಲ್ಲ. ಬರೀ ಅಣ್ಣಯ್ಯ ಅಣ್ಣಯ್ಯ ಅಂಬೋದ್ನ ಬಿಟ್ರೆ ಬೇರೇ ಮಾತೇ ಇಲ್ಲ, ಹುಡ್ಗಿ ಮಾತ್ರ ಬಾಳ ಪಸಂದಾಗಿ ಇದ್ಲು ಅವಳನ್ನ ಅಡವಿಯಾಗೆ ಬಿಟ್ಟು ಹೋಗ್ಲಾರ್ದೆ ರಾಜ ಆಯಮ್ನ ಎತ್ಗೊಂಡು ಪರಶುರಾಂಪುರಕ್ಕೆ ವಾಪಸ್ ಬಂದುಬಿಟ್ಟು ಆ ಹುಡ್ಗೀನ ಮದ್ವಿ ಮಾಡ್ಕೊಂಡೇ ಬಿಟ್ಟ. ಆಮೇಲೆ ಚಂದ್ರಮನಂತ ಮಗ್ನೂ ಆಗ್ಬಿಟ್ಟ.

ರಾಜ ಯತ್ಲಾಗನ್ನ ಹೋದ್ಮೇಲೆ ಈ ಮಲ್ಲಕ್ಕ ಕೂಸಿಗೆ ನೀರೊಯ್ದು ಕಾಲ್ಮೇಲೆ ಅಕ್ಕೊಂಡು "ಲೇ ಪಾಪ ನಿಮ್ಮಪ್ಪಯ್ಯ ಬಂದಾಗ ಹೇಳಾ ನಿಮ್ಮಾವ ಆ ಹುತ್ತದಾಗವ್ನೆ ಅಂತ" ಅಮ್ತಂದು ದಿನಾ ಹೇಳ್ತಿದ್ಲು ಪಕ್ಕದ್ಮನೆ ಲಕ್ಕಜ್ಜಿ ಯಲಾ ಯಲಾ ರಾಜನಹೆಂಡ್ತಿ ಮೂಕಿ ಅಮ್ತಾರೆ ನೋಡು ನೋಡು ಕೂಸಿಂತಾಗ ಎಷ್ಟ್ರಮಟ್ಟಿಗೆ ಮಾತಾಡ್ತಾಳೆ. ಅಂದ್ಕೊಂಡು ಸಾಯಿಂಕಾಲ ರಾಜಂತಾಕೆ ಹೋಗಿ "ಸಾಮಿ ಸಾಮಿ ನಿನ್ಹೆಂಡ್ತಿ ಮೂಕಿ ಅಮ್ತೀರಾ, ಆದೆ ಯಂಗ ಮಾತಾಡ್ತಾಳೇ" ಅಂತ ಹೇಳ್ತಾಳೇ ಇದ್ನ. ಪರೀಕೆ ಮಾಡಬೇಕಂತ ರಾಜ ಒಂದಿನ ಎತ್ಲಾಗೋ ಹೋಗಾನಂತೆ ಹೋಗಿ ಮರೇಲಿ ಬಚ್ಚಿಕ್ಕಂಡ. ಮಲ್ಲಕ್ಕ ಯಥಾ ಪ್ರಕಾರ ಆ ಮಗೀಗೆ ನೀರು ಹೊಯ್ದು, ಕಾಲ್ಮೇಲೆ ಆಕ್ಕೊಂಡು "ಲೇ ಪಾಪ, ನಿಮ್ಮಪ್ಪಯ್ಯ ಬಂದಾಗ ಹೇಳಾ, ನಿಮಾವ ಆ ಹುತ್ತದಾಗವ್ನೆ ಅಂತ" ಅಮ್ತಂದು ಹೇಳ್ತಿದ್ಲು. ಈ ಮಾತ್ನ ರಾಜ ಕೇಳಿಸ್ಕಂಡ. ಯಲಾಯಲಾ ಈ ಸಿಸುವಿಂತಾಕೆ ಹೇಳೋ ಬದ್ಲು ನಂತಾಗೆ ಹೇಳಿದ್ರೇನ ಆಗ್ತಿತ್ತು ಅಂತ ಮನಸಿನಾಗೆ ಅಂದ್ಕೊಂಡು ರಾತ್ರಿ ಮನಿಕ್ಕಂಡ.

ಬೆಳಗ್ಗೆ ಎದ್ದು ಸುತ್ತಮುತ್ತ ಇರೋ ಹಾವಾಡಿಗರನ್ನ ಕರಿಸಿಬಿಟ್ಟ. ಕರಿಸಿಬಿಟ್ಟು ಆ ಹುತ್ತದತ್ರ ಕರ್ಕೊಂಡೋಗಿ, ಆ ಹುತ್ತದತ್ರ ಕರೇಕಂಬ್ಳಿ ಗದ್ಗೆ ಹಾಕಿ ನಾಕು ಮೂಲೆಗೂ ನಾಕು ಕಾಯಿ ಒಡ್ದ. ಊಂ ನೀವು ಸುರುಮಾಡ್ರಪ್ಪ, ಅಮ್ತಂದು ಹಾವಾಡಿಗರಿಗೆ ಆಜ್ಞೆ ಮಾಡ್ದ. ಹಾವಾಡಿಗ್ರು ಜೀನ್ ಗೋವಿ ತಗಂಡು ಯಂಗೆಂಗೆ ಸರಿಬರುತ್ತೋ ಅಂಗೆಂಗೆ ಊದಿದ್ರು, ಆವು ಮಾತ್ರ ಒರಾಕೆ ಬರ್ಲಿಲ್ಲ. ಅವಾಗ ಹಾವಾಡಿಗ್ರು ಹೇಳಿದ್ರು ಸ್ವಾಮಿ

ನಾವೆಲ್ಲಾರು ತಲೆ ಕೆಳಾಕೆ ಮಾಡಿ ಊದಿದ್ರು, ಅವು ಮಾತ್ರ ಒರಾಕೆ ಬರ್ಲಿಲ್ಲ. ಅಂದ್ಮೇಲೆ ಯಂಗನ್ನಾ ಆಗ್ಲಿ ನಿಮ್ಮೆಂಡ್ತೀಕರ್ದು ಊದಿಸ್ರಿ ಹೊರಾಕೆ ಬರುತ್ತೇನೋ ನೋಡಾನ" ಅಮ್ತಂದ್ರು ರಾಜ ಮಲ್ಲಕ್ಕನ್ನ ಕರ್ದು ಊದಾಕೆ ಹೇಳ್ದ. ಆಯಮ್ಮ ಜೇನ್ ಗೋವಿ ತಗಂಡು ಊದಾಕೆ ಸುರು ಮಾಡಿದ್ಲು. ಅವಾಗ ಸರ್ಪ ಹೂಮಾಲೆ ಆಕ್ಕೊಂಡು ಭೋರ್ ಮಲಿತಾ ಹೊರಾಕೆ ಬಂದುಬಿಡ್ತು. ಅವಾಗ ತಕ್ಷಣ ರಾಜ ಆ ಹಾವನ್ನ ಎಲ್ಡು ತುಂಡಾಗಂಗೆ ಕಡ್ದುಬಿಟ್ಟ. ಆ ಸರ್ಪ ಯಥಾಪ್ರಕಾರ ಮಲ್ಲಣ್ಣ ಆಗಿಬಿಟ್ಟು ಎಲ್ಲಾರ್ಗೂ ನಮಸ್ಕಾರ ಮಾಡ್ದ.

ಮಲ್ಲಕ್ಕ ಅಣ್ಣಾ ಅಮ್ತಂದು ಓಡೋಗಿ ಅಣ್ಣಯ್ಯನನ್ನ ತಬ್ಕೊಂಡು ಗೊಳೋ ಅಂತ ಅತ್ತುಬಿಟ್ಳು. ಮಲ್ಲಯ್ಯ ರಾಜಂಗೆ ಹಿಂದೆ ನಡ್ದ ಕತೇನಲ್ಲಾ ಹೇಳ್ದ. ಅವಾಗ ಮಲ್ಲಕ್ಕ ಸಂತೋಸವಾಗಿ ರಾಜನಕಾಲ್ಗೆ ಬಿದ್ದು ಮಾತಾಡಿ ಬಿಟ್ಳು.

ರಾಜ ಎಲ್ಲಾರ್ನೂ ಕರ್ಕಂಡು ಪಟ್ನಕ್ಕೆ ಬಂದು ಮಲ್ಲಣ್ಣಂಗೆ ಒಂದು ಹೆಣ್ಣು ನೋಡಿ ಮದ್ವೆ ಮಾಡ್ದ. ಅವ್ನೂ ಕೂಡ ಆಗಲ್ಲ ಮದ್ವೆ ಈಗ ಅಮ್ತಂದು ಪಟ್ನ ಸಾರಿಸಿ, ಆದಿಗೆ ಅಂದ್ರ ಆಕಿ, ಬೀದಿಗೆ ಚಪ್ರಹಾಕಿಸಿ, ದಿಬ್ಬೀರ್ತವಾಗ ಮಲ್ಲಕ್ಕನ ಮದ್ವೆ ಆಗಿ ಸುಖವಾಗಿ ರಾಜ್ಯಭಾರ ಮಾಡ್ಕೊಂಡು ಇದ್ದ.

○

4. "ನ್ಯಾಯಾಧಿಪತಿ"

ಕರಮರಳ್ಳಿ ಅಂಬೋದೊಂದು ಊರು. ಆ ಊರಾಗೆ ಒಬ್ಬ ಸಾವ್ಕಾರ ಊರಾಗಳ ಉಸಾಬರೆ ಎಲ್ಲಾ ಅವ್ನೆ ನೋಡ್ಕಮ್ತಿದ್ದ. ಗುದ್ದಾಟ ಆದ್ರೆ ನ್ಯಾಯ ಕೊಡೋನು ಅವ್ನೆ ಆಗಿದ್ದ. ಅಂಥನೆಂಡ್ತಿ ಗೌಡನ್ಮಗನ್ನ ಮಡ್ಕಂಡಿದ್ಲು. ಒಂದಿನ ಸಾವ್ಕಾರ ನ್ಯಾಯಾ ಮಾಡ್ತಿದ್ದ. ಯಾವುದೋ ಒಂದು ಹುಡ್ಗ "ಓ ನಿನ್ಹೆಂಡ್ತಿ ನ್ಯಾಯಸ್ತಿನಾ" ಅಮ್ತಂದು ಪುಸುಕ್ನೆ ಅಂದುಬಿಟ್ಟ. ಆ ಮಾತು ಇವನಿಗೆ ಕಿವಿಯಾಗೆ ಕೊರಿಯಾಕೆ ಸುರುವಾಯ್ತು. ಬಾಳ ಯೋಚ್ನೆ ಮಾಡ್ದ. ಆ ವಿಷ್ಯದ ಬಗ್ಗೆ ಹೆಂಡ್ತಿನ ಯಂಗೆ ಕೇಳಾಗಾಗುತ್ತೆ ? ಕೊನೆಗೆ ಒಂದುಪಾಯ ಹುಡುಕಿದ. "ಲೇಲೇ ನಾನು ಹೊಸಳ್ಳಿಗೆ ಹೋಗಿಬರ್ತೀನಿ" ಅಂತಾ ಹೇಳಿ ಹೊಸಳ್ಳಿ ಮಕಾನಾಗೆ ಹೋದನಂಗೆ ಹೋಗಿ ಹಿಂತಿರ್ಗಿ ಬಂದು ಅವನ ಮನೆ ಮಾಳಿಗೆ ಹತ್ತಿ ಬಾದಾಳದಾಗೆ ಇಣಕಿ ನೋಡಾಕೆ ಸುರುಮಾಡ್ದ. ಯಂಗೂ ನನ್ಗಂಡ ಹೊಸಳ್ಳಿಗೆ ಹೋಗ್ಯಾನೆ ಅಂದ್ಕೊಂಡು ಗೌಡ್ನ ಮಗನಿಗೆ ಕೈಸನ್ನೆ ಮಾಡಿ ಕರೆದ್ಲು. ಅವ್ನು ಬರಾಕು ಮುಂಚೆ ಈಯಮ್ಮ ಅವರು ಮನ್ಗೊ ಜಾಗ ಕಸಾಗುಡಾಸಾಕಂತ ಬಂದ್ಲು. ಅವಾಗ ಅದೇ ಜಾಗದಾಗೆ ಬಾದಾಳಗಾಸಿ ಸಾವ್ಕಾರ್ನ ನೆಳ್ಳು ಕಂಡು ಬಂತು. "ಓ ನನ್ಗಂಡ ನನ್ಗೆ ಮೋಸಮಾಡಿ ನನ್ಕಳ್ತನ ಪತ್ತೆ ಹಚ್ಚಾಕೆ ಬಂದಾಂತ ತಿಳ್ಕೊಂಡು ಆಕೂಡ್ಲೆ ಅದೇ ಜಾಗದಾಗೆ ಒಂದು ಬೀಸಕಲ್ಲು ಹೂಡ್ಕಂಡು ತಲೆಮ್ಯಾಕೆತ್ತದಂಗೆ ಬೀಸೋದಿಕ್ಕೆ ಸುರುಮಾಡಿದ್ಲು. ಅದೇ ವ್ಯಾಳೇಕ್ಕೆ ಗೌಡನ್ಮಗ ಬಂದು ಬಾಕ್ಲಾಗೆ ನಿಂತವ್ನೆ. ಅವನ್ನ ಹೇಗಾದ್ರೂ ಮಾಡಿ ಹಿಂದ್ಕೆ ಕಳಿಸಬೇಕು ಅದ್ಕಾಗಿ ಒಂದು ಪದ ಹೇಳಿದ್ಲು.

ಸುತ್ತಿ ಸುತ್ತಿ ಬರುತೀಯ ನನಗಾಗಿ
ಮೇಲೊಬ್ಬ ಕಾದವ್ನೆ ನಿನಗಾಗಿ
ನೀನ್ಯಾಕೆ ಸಾಯ್ತೀಯ ನನಗಾಗಿ
ನಾನೇ ಸಾಯ್ತೀನಿ ನಿನಗಾಗಿ

ಈ ಪದಾನ ಗೌಡನ್ಮಗ ಕೇಳಿಸ್ಕೊಂಡ. ಈಗ ಒಳಾಗೆ ಹೋದ್ರೆ ಅಪಾಯ ಅಂದ್ಕೊಂಡು ಹಿಂದ್ಕೆ ಹೋದ. ಆಟೊತ್ಗೆ ಕತ್ಲಾತು. ಅವಾಗ ಮಾಳಿಗೆ ಮ್ಯಾಲಿದ್ನಲ್ಲ ಗಂಡ ಅವ್ನು ಬಂದ. ಲೇಲೇ ಬೀಸ್ಬೇಕಾದ್ರೆ ಒಂದು ಪದ ಹೇಳ್ತಿದ್ದಲ್ಲ ಅದ್ರ ಅರ್ಥ ಏನು? ಅಂತ ಕೇಳ್ದ. ಅವಾಗ ಹೇಳಿದ್ಲು. ಏನಿಲ್ಲಾ ಹೂಲಿಕುಂಟೆಯಿಂದ ಒಬ್ಬ ಸಾಬುಬರ್ತಾನೆ. ಅವ್ನು ತನ್ನ ಗಾಣದ ಕೊಕ್ಕಿನ ಗಾಣದ ಉಳುವಿನ ಮುಕಳಗಾಸಿ ಎಟ್ಟಿಬಾಯಾಗೆ ತೆಗೆದು ಸಿದ್ಧಯ್ಯನ ಕೋಟೆ ಸೇತ್ವೆತಾಗೆ ಕುತ್ಕಂಡು ತೂಬಿಗೆ ಗಾಣಾಹಾಕ್ತಾನೆ.

ಅವಾಗ ಒಂದು ದೊಡ್ಡ ಮೀನು ಗಾಣದುಳ ತಿಂಬಾಕಂತ ಬರ್ತತೆ. ಅವಾಗ ಆ ಗಾಣದುಳ ಮೀನಿಗೆ ಹೇಳುತ್ತೆ, "ಮೀನೇ ನನ್ನ ನೀನು ತಿಂದುಬಿಟ್ರೆ ನಿನ್ನ ಮೇಲೆ ನಿಂತಿರೋ ಸಾಬು ತಿಮ್ತಾನೆ. ಅದ್ಕಾಗಿ ನಾನಾಗ್ಲೆ ಅವನ ಕೈಗೆ ಸಿಕ್ಕಿದೀನಿ. ಮತ್ತೆ ನೀನ್ಯಾಕೆ ಸಾಯ್ತೀಯ ಅಂತ ಹೇಳಿ ಆ ಮೀನನ್ನ ಪಾರುಮಾಡ್ತು ಆ ಗಾಣದಹುಳು" ಆಮ್ತಂದು ಹೇಳ್ತಾಳೆ. ಸಾವ್ಕಾರ ಇದ್ನ ಒಪ್ಪಿ "ನೀನು ಬಾಳ ಬುದ್ಧಿವಂತೆ ಕಣೇ" ಅಮ್ತಂದು ಹೇಳಿ ಅವ್ನೂ ಮನಿಕಮ್ತಾನೆ.

○

ಬಲ್ಲಂತ ಜಾಣರು ಬಾಗಿನ ಬಿಟ್ಟಾರ....

(ಈರಬಡಪ್ಪನವರ ಕತೆಗಳ ಬಗ್ಗೆ ವಿದ್ವಾಂಸರ ಅಭಿಪ್ರಾಯಗಳು)

ಡಾ|| ಜೀ.ಶಂ.ಪ.

ಈರಬಡಪ್ಪನ ಕತೆಗಳಲ್ಲಿ 'ಕಲಮರಹಳ್ಳಿಯೇ ಕೇಂದ್ರವಾಗಿ ಬರುವುದು ಒಂದು ವಿಶೇಷ. ಇನ್ನು ಆ ಊರಿನ ಪ್ರಖ್ಯಾತರು, ಕುಖ್ಯಾತರು ಆಗೊಮ್ಮೆ ಈಗೊಮ್ಮೆ ಸುಳಿದುಹೋಗುತ್ತಾರೆ. ಕಲಮರಹಳ್ಳಿಯ ಸುತ್ತಿನ ಪ್ರಸಿದ್ಧ ಊರುಗಳಾದ ಹರ್ತಿಕೋಟೆ, ಐಮಂಗಲ, ಪರಶುರಾಂಪುರ ಮುಂತಾದವುಗಳು ಪ್ರಸ್ತುತ ಬರುತ್ತವೆ. ಚಿತ್ರದುರ್ಗ ಸಿರಗಳ ಉಲ್ಲೇಖವೂ ತಲೆಹಾಕುತ್ತದೆ. ಕಥಾನಾಯಕ ಒಮ್ಮೊಮ್ಮೆ ಮುಖ್ಯ ಕೇಳುಗನೇ ಆಗಿರುತ್ತಾನೆ. ಹೇಗೂ ಜನಪದ ಕಥೆಗಳಲ್ಲಿ ಸುಖಾಂತತೆ ಇರುವುದರಿಂದ ನಾಯಕನನ್ನಾಗಿ ಕತೆ ಹೇಳಿಸುವವನನ್ನೇ ಇಟ್ಟುಕೊಳ್ಳುವುದರಿಂದ ಅಪಾಯವಿಲ್ಲ. ತನ್ನ ಪರಿಸರವನ್ನು ಅತ್ಯಂತ ಸಮರ್ಥವಾಗಿ ಇಲ್ಲಿನ ಕತೆಗಾರ ಬಳಸಿಕೊಳ್ಳುವುದರಲ್ಲಿ ಜಾಣ್ಮೆಯನ್ನು ತೋರಿದ್ದಾನೆ. ಆದ್ದರಿಂದ ಈರಬಡಪ್ಪನ ಎಲ್ಲಾ ಕತೆಗಳೂ ತಮ್ಮ ನೆಲದಲ್ಲಿ ಬೇರುಬಿಟ್ಟು ನಿಲ್ಲುತ್ತವೆ.

ಈರಬಡಪ್ಪನ ಕತೆಗಳಲ್ಲಿ ಬರುವ ವಿವರಗಳು ಕತೆಗಾರರ ಲೋಕಾನುಭವವನ್ನು ನಿರೂಪಣಾ ಸಾಮರ್ಥ್ಯವನ್ನು ಕಲಾತ್ಮಕ ಪ್ರತಿಭೆಯನ್ನು ಮೆರೆಯುತ್ತವೆ. ಪ್ರತಿಯೊಂದು ಸಂದರ್ಭಧಲ್ಲಿ ಸಮುಚಿತವಾದ ಸಂಭಾಷಣೆಯಿಂದ ಕತೆಗೆ ಸ್ವಾರಸ್ಯವನ್ನು ತುಂಬಲಾಗುತ್ತದೆ. ಸಂಭಾಷಣೆಯ ಊರುಗೋಲಿನ ಮೇಲೆ ಘಟನೆಗಳ ಸಂಯೋಜನೆಯಲ್ಲಿ ಪಾತ್ರಗಳೂ ಬೆಳೆದುಕೊಳ್ಳುತ್ತವೆ. ಸಂಭಾಷಣೆಯ ಚಮತ್ಕಾರ ಈರಬಡಪ್ಪನ ಕತೆಗಳ ಜೀವಾಳ ಎಂದು ಹೇಳಬಹುದು. ಅಲ್ಲದೆ ಈತನ ಕತೆಗಳಲ್ಲಿ ಯಥೇಚ್ಛವಾಗಿ ಕಂಡುಬರುವ ವರ್ಣನೆಗಳಲ್ಲಿ ಕತೆಗಾರರಲ್ಲಿ ಒಳ್ಳೆಯ ಕವಿ ಪ್ರತಿಭೆ, ಹಾಗೂ ಸುಭಗ ಶೈಲಿಯನ್ನು ಕಂಡುಕೊಳ್ಳಬಹುದು. ಕತೆಯನ್ನು ಗ್ರಾಮೀಣ ಪರಿಸರಕ್ಕೆ ಹೊಂದಿಸಿ ತಾತ್ಕಾಲೀನ ಜೀವನವನ್ನು ಚಿತ್ರಿಸುವಂತೆ ಮಾಡಿ ಥಟ್ಟನೆ ಯಾವುದೋ ಪ್ರಾಚೀನ ಕಾಲದ ವಸ್ತುವನ್ನು ಎತ್ತಿಕೊಳ್ಳುವುದು ಈತನ ವೈಶಿಷ್ಟ್ಯ. ಒಟ್ಟಾರೆ ಈರಬಡಪ್ಪ ಅವಿದ್ಯಾವಂತನಾಗಿಯೂ ಶಿಕ್ಷಣ ಕತೆಗಾರನ ಎತ್ತರಕ್ಕೆ ಏರುವುದನ್ನು ಕಾಣಬಹುದು.

('ಕಲಮರಹಳ್ಳಿಯ ಕತೆಗಳು' ಕೃತಿಯಿಂದ)
(1986)

ಡಾ॥ ಹಿ.ಶಿ. ರಾಮಚಂದ್ರೇಗೌಡ

ಕತೆಗಾರ ಈರಬಡಪ್ಪ ಹೇಳಿರುವ 'ಬಡಕುದುರೆ ಬಡಜ್ಜ' ಕತೆಯಲ್ಲಿ ಬಡಕುದುರೆಯ ಅವಸಾನ ಕರುಣಾಜನಕವಾಗಿದ್ದು ಸಾಹಿತ್ಯಿಕ ಕಥೆಯೊಂದರ ಅಂತ್ಯದಂತೆ ಕಂಡುಬರುತ್ತದೆ. ಸಾವಿತ್ರಿ ಸ್ವಪ್ನ ಕತೆ ಒಂದು ವಿಶಿಷ್ಟ ವಿನ್ಯಾಸ ಮತ್ತು ಭಾಷೆಯ ವಿಶೇಷ ತೊಡಗುವಿಕೆಯಲ್ಲಿ ಸೃಷ್ಟಿಯಾಗಿದೆ. ಕನ್ನಡದಲ್ಲಿ ಇದುವರೆಗೆ ದೊರೆತಿರುವ ಇತರ ಯಾವುದೇ ಪಾಠಭೇದಕ್ಕಿಂತ ಉತ್ತಮವೆನಿಸಿದೆ. ನ್ಯಾಯಾಧಿಪತಿ ಕತೆಯಂತೂ ಖಂಡಿತಾ ವಿಶೇಷ ವಿನ್ಯಾಸ ಮತ್ತು ಒಂದು ವಿಶೇಷ ವರ್ಗಕ್ಕೆ ಸೇರುವಂಥದು.

('ಕಲಮರಹಳ್ಳಿಯ ಕತೆಗಳು' ಕೃತಿಯಿಂದ)
(1986)

ಡಾ॥ ಮೀರಾಸಾಬಿಹಳ್ಳಿ ಶಿವಣ್ಣ

ಮಳೆಗಾಲದಲ್ಲಿ ಮಾತ್ರ ಉಕ್ಕಿಹರಿಯುವ ಕಲಮರಹಳ್ಳಿಯ ವೇದಾವತಿ ನದಿಯಂತೆ ಈರಬಡಪ್ಪನ ಬಾಳಿನಲ್ಲಿ ಹೆಚ್ಚಿನ ಸುಖಸಂತೋಷಗಳೇನೂ ಕಂಡುಬರುವುದಿಲ್ಲ. ವೇದಾವತಿಯ ನೆರೆಯಂತೆ ವರ್ಷದುದ್ದಕ್ಕೂ ತುತ್ತಿನ ಚೀಲ ತುಂಬುತ್ತಿರಲಿಲ್ಲ ಬರೀ ಪರದಾಟ ಹೆಣಗಾಟ.

ಕಲಮರಹಳ್ಳಿ ಮಲ್ಲಿಕಾರ್ಜುನ ಬಿಟ್ಟರೆ ಈರಬಡಪ್ಪನ ಕತೆಗಳ ಕಣಜಕ್ಕೆ ಯಾರೂ ಕೈಹಾಕಲಿಲ್ಲ. 'ಎಷ್ಟುಕತೆ ಹೇಳ್ತೀಯ ಈರಬಡಪ್ಪ' ಎಂದರೆ 'ಸ್ವಾಮೀ ತಲೆಯಾಗೆ ಕೂದಲು ಏಸು ಐದವೋ ಆಸು' ಎನ್ನುವ ಈ ಕತೆಯ ಕಣಜವನ್ನು ಪೂರ್ತಿಯಾಗಿ ಜಪ್ತಿ ಮಾಡುವವರು ಇನ್ನೂ ಬರಬೇಕಾಗಿದೆ.

ಈರಬಡಪ್ಪ ಅನ್ನೋದು ಒಕ್ಕಲಿಗರ ದೇವರಲ್ಲವೇ ? ಅವರ ದೇವರ ಹೆಸರು ನೀನ್ಯಾಕೆ ಇಟ್ಟುಕೊಂಡಿದ್ದೀಯ ? ಎಂದು ಎಷ್ಟೋ ಜನ ಕೇಳಿದ ಪ್ರಶ್ನೆಗೆ ಈರಬಡಪ್ಪನ ಮಾರ್ಮಿಕ ಉತ್ತರ ಹೀಗಿದೆ–'ನಾನು ಕುಲದಲ್ಲಿ ಕುರಬರು ಇರಬೌದು, ಆದರೆ ದೇವರಿಗೆ ಎಲ್ಲೈತೆಸ್ವಾಮಿ ಕುಲ?' ಕುಲಸಂಬಂಧೀ ವ್ಯಾಜ್ಯಗಳಲ್ಲಿ ಮುಳುಗಿರುವ ಜಗತ್ತು ಯಾಕೆ ಈರಬಡಪ್ಪನಂತೆ ಯೋಚಿಸಲ್ಲ ?

–ಪ್ರಜಾವಾಣಿ, 24–11–2002

ತಿಳಿಯೋಣ ಬಾ ಬಾ ಅಂತರಗಂಗೆಯ ಅರ್ಥಗಳ....

ಅ

ಅಂಗಾರ – ಹಾಗಾದರೆ

ಅಂದ್ರ – ಚಪ್ಪರ

ಅಕ್ಕಿಪಿಕ್ಕಿ – ಒಂದು ಪಕ್ಷಿಯ ಹೆಸರು (ಗುಬ್ಬಚ್ಚಿ)

ಅಗಡು – ಬಂಡಿಯನೊಗದ ಎರಡು ತುದಿಯಲ್ಲಿ ಎತ್ತುಗಳನ್ನು ಬಂದಿಸಲು ಹಾಕುವಂತಹ ಆರು ಮೂಲೆಯ ಒಂದು ಸಾಧನ

ಅಜಾಮ – ಕ್ಷೌರಿಕ

ಅಡ್ಬೀಳು – ನಮಸ್ಕಾರ ಮಾಡು (ಕಾಲಿಗೆ

ಅದೇ ಮಕ್ಕೆ– ಅದೇ ದಿಕ್ಕಿಗೆ

ಅದ್ಲಿಸು – ಗದರಿಸು, ತಿರುವು

ಅಬ್ರೀಸು – ಆರ್ಭಟಿಸು

ಅಮ್ತಂದು – ಅಂತಹೇಳಿ, ಹಾಗಂತ, ಹಾಗೆಂದು

ಅರಗು – ಗೇಯ್ಮೆ (ಕುಂಟೆ ಹೊಡೆಯುವುದು)

ಅರ್ಕಂಡು – ಕಿತ್ತುಕೊಂಡು, ಹರಿದುಕೊಂಡು, ಅರೆಯುವುದು

ಅಸೆ – ಬಿತ್ತುವುದಕ್ಕೆ ಅಥವಾ ಗೆಯ್ಮೆಗೆ ಹೊರಡುವ ಮುನ್ನ ಎತ್ತುಗಳ ನೊಗಕ್ಕೆ ಕೃಷಿ ಉಪಕರಣಗಳನ್ನು ಸಿದ್ಧಪಡಿಸುವುದು

ಅಕ್ಲಾಕು – ಅತಿಯಾಗಿ ತಿನ್ನುವುದು, ಒಂದೇ ಸಮನೆ ರಭಸದಲ್ಲಿ ಹೊಡೆಯುವುದು

ಅಮರ್ಕ – ಅಪ್ಪಿಕೊಳ್ಳುವುದು

ಇ

ಇಬ್ರಾಳು – ಇಬ್ಬರು, ಇಬ್ಬರು ಮನುಷ್ಯರು

ಇಮ್ಮಡಿಸು – ಮಡಿಚು

ಉ

ಉಂಚೆ ಮರ – ಹುಣಸೆಮರ

ಉಂಬಾಕೆ – ಊಟ ಮಾಡುವುದಕ್ಕೆ

ಉಳ್ಳಾಡಿಸು– ಉರುಳಾಡಿಸು

ಉಂಬೊತ್ತು - ಊಟ ಮಾಡುವ ಹೊತ್ತು (ಸು. ಬೆಳಿಗ್ಗೆ 8ಕ್ಕೆ ಚಿಕ್ಕೊಂಬತ್ತು, ಬೆ. 9, 10ಕ್ಕೆ ದೊಡ್ಡೊಂಬತ್ತು ಎಂದು ಭಾವಿಸಲಾಗುವುದು)
ಉಕ್ರಾಲಚ್ಚು- ಹುರಿದುಂಬಿಸು
ಉಟ್ಪುಸ್ತೀನಿ- ಒದಗಿಸುವುದು, ಸೃಷ್ಟಿಸುವುದು, ಕೊಡಿಸುವುದು
ಉಳಾಟ - ಮೈಗಳ್ಳತನ

ಎ

ಎರೆವಲ - ಕಪ್ಪು ಮಣ್ಣಿನ ಕೃಷಿ ಭೂಮಿ
ಎಲ್ಡಾ - ಕಕ್ಕಸ್ಸು, ಮಲ
ಎಲ್ಡು - ಎರಡು
ಎದ್ದಾಗ - ಬೆಳಗಿನ ಜಾವ

ಒ

ಒಂಟೋರಿ- ಒಂದು ಹೋರಿ (ಒಂಟಿಯಾಗಿರುವ ಒಂದು ಹೋರಿ)
ಒಲ್ಡು - ಹೊರಡು
ಒಳ್ಬಿಡು - ಓರೆಮಾಡು, ಸರಿದುಕೊ
ಒಲೆಮಾರು- ಗಡಿ
ಒರಾಕೆ - ಹೊರಗೆ
ಒಡಕ್ಲು - ಬೇಳೆಕಾಳು

ಕ

ಕಣ್ಣಿ - ದನಗಳನ್ನು ಕಟ್ಟುಹಾಕುವ ಹಗ್ಗ
ಕಣ್ಣಿಕೀಳಿ - ಕಣ್ತ್‌ಪ್ಪಿಸಿ ಓಡಿಹೋಗುವುದು
ಕಳ್ಳೆ - ಮುಳ್ಳಿನಿಂದ ಕೂಡಿದ ರೆಂಬೆಗಳು (ಜಾಲಿಕಳ್ಳೆ, ಬಾರೆಕಳ್ಳೆ)
ಕವ್ಗೋಲು - ಕವಲು ಇರುವ ಕೋಲು
ಕಲ್ಡಿ - ಕರಡಿ
ಕಿನ್ನುಡಿ - ಕಿನ್ನರಿ (ಒಂದು ಜನಪದ ತಂತಿ ವಾದ್ಯ)
ಕುಂಟೆ - ವ್ಯವಸಾಯಕ್ಕೆ ಸಂಬಂಧಿಸಿದ ಒಂದು ಉಪಕರಣ
ಕೂಟೆ - ಜೊತೆಯಲ್ಲಿ
ಕೂರ್ಗೆ - ಬೀಜ ಬಿತ್ತಲು ಉಪಯೋಗಿಸುವ ಕೃಷಿ ಉಪಕರಣ
ಕೋಡಂಚು- ಎತ್ತುಗಳ ಕೋಡುಗಳಿಗೆ ಇಡಲಾಗುವ ಕಂಚು ಹಿತ್ತಾಳೆಯ ಹಣಸು (ಕೊಂಬಿನಕಳಶ)
ಕೋರಿಗೆ - ಸ್ವಂತಜಮೀನಿನಲ್ಲಿ ಬೇರೆಯವರು ಬೆಳೆಯಲು ಮಾಡಿಕೊಂಡ ಒಂದು ಒಪ್ಪಂದ
ಕೋಳಿಗುಡ್ಡೆ- ಕೋಳಿಮೊಟ್ಟೆ
ಕುಕ್ಕ - ಕುಳಿತುಕೊ
ಕೋರುಡ್ಗ - ತುಂಬುಹರೆಯದ ಹುಡುಗ

ಕಾಸಿ	–	ದೇವರಿಗೆ ಸಿಡಿ ಆಡುವಾಗ ಭಕ್ತ ತನ್ನ ಸೊಂಟಕ್ಕೆ ಸುತ್ತಿಕೊಳ್ಳುವ ಶಾಸ್ತ್ರೋಕ್ತ ಪಂಚೆ
ಕಾಟ	–	ಉಪದ್ರ, ಉಪಟಳ, ತೊಂದರೆ
ಕಪ್ಲಿ	–	ಬಾವಿಯನ್ನು ಹೊಂದಿರುವ ನೀರಾವರಿ (ಪಂಪ್‌ಸೆಟ್ಟುಗಳು ಚಾಲ್ತಿಗೆ ಬರುವ ಮುನ್ನ ಬಾವಿಯಿಂದ ಎತ್ತುಗಳ ಮೂಲಕ ನೀರನ್ನು ಕಾಲುವೆಗೆ ಹಾಯಿಸುವ ಕ್ರಿಯೆ)
ಕೂನಿ	–	ಕೊಲೆ
ಕುಳ್ಳು	–	ಬೆರಣಿ
ಕಳ್ಳು	–	ಕರಳು

ಗ

ಗಡ್ಗೆ	–	ದಡ
ಗ್ವಾಂದ್ಗೆ	–	ಮನೆಯಲ್ಲಿ ದನಕರುಗಳು ಮೇಯಲು ಮಾಡಲಾದ ಗುಣಿಇರುವ ಉದ್ದನೆ ಕಟ್ಟೆ (ಕಲ್ಲಿನಿಂದ ಅಥವಾ ಮಣ್ಣಿನಿಂದ ಮಾಡಲಾಗುವುದು)
ಗೊಣ್ಣೆ	–	ಮಂದವಾಗಿರುವ ಸಿಂಬಳ
ಗುಡ್ಡೆಕಲ್ಲು	–	'ಊರಬಾಗಿಲು' ಮಧ್ಯದಲ್ಲಿ ಕೆಳಗೆ ದುಂಡನೆಯ ಒಂದು ಕಲ್ಲನ್ನು ಹೂತಿರುತ್ತಾರೆ. ಅದಕ್ಕೆ ಊರಿನ ಜನ ಕೆಲವು ವಿಶೇಷ ಸಂದರ್ಭದಲ್ಲಿ ಪೂಜೆ ಸಲ್ಲಿಸುತ್ತಾರೆ.
ಗದ್ಲ	–	ಗದ್ದಲ, ಗಲಾಟೆ
ಗಂಗಳ	–	ಊಟ ಮಾಡಲು ಬಳಸುವ ಕಂಚಿನ ತಣಿಗೆ (ತಟ್ಟೆ)
ಗುದ್ವಾಬಕು	–	ಸೊಂಟದಲ್ಲಿ ಸಿಕ್ಕಿಸಿಕೊಳ್ಳಬಹುದಾದ ಕಬ್ಬಿಣದ ಒಂದು ಆಯುಧ (ಇದನ್ನು ಶತೃಗಳನ್ನು ಇರಿಯಲು ಬಳಸುತ್ತಾರೆ. ಹಾಗೂ ಮಧುಮಗ ಅಲಂಕಾರಕ್ಕಾಗಿ ಮತ್ತು ಶಾಸ್ತ್ರಕ್ಕಾಗಿ ತುದಿಯಲ್ಲಿ ನಿಂಬೆಹಣ್ಣು ಸಿಕ್ಕಿಸಿಕೊಂಡು ಕೈಯಲ್ಲಿ ಹಿಡಿಯುವ ಪದ್ಧತಿ ಇದೆ)
ಗೆರ್ಸೆ	–	ಧಾನ್ಯವನ್ನು ಶೇಖರಿಸಿಡಲು ಬಿದಿರು ಅಥವಾ ಈಚಲು ಕಡ್ಡಿಯಿಂದ ತಯಾರಿಸಿದ ಎತ್ತರದ ವೃತ್ತಾಕಾರದ ಒಂದು ಸಾಧನ
ಗನವಾಗಿ	–	ಚೆನ್ನಾಗಿ

ಚ

ಚಂದ್ರಾಜ್ಯ	–	ಚಂದ್ರಾಕಾರ ಒಂದು ಆಯುಧ
ಚಿಳ್ಳಪಿಳ್ಳ	–	ಸಣ್ಣಸಣ್ಣ, ಕೆಲಸಕ್ಕೆ ಬಾರದ, ಪ್ರಯೋಜನವಿಲ್ಲದ

ಜ

ಜೋಲಿ	–	ತೊಟ್ಟಿಲು (ಹಗ್ಗ ಮತ್ತು ಬಟ್ಟೆಯಿಂದ ತಯಾರಿಸಿದ್ದು)
ಜಬ್ಲು	–	ನೀರಿನ ಸನಿಹದಲ್ಲಿ ಗುಂಪುಗುಂಪಾಗಿ ಬೆಳೆಯುವ ಒಂದು ಜಾತಿಯ ಸಸ್ಯ

ಜಲಪ – ಜಲಕ್ರೀಡೆ
ಜಮ್ಮಯ್ಯ ಜಪ್ಪಯ್ಯ – ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸದೇ ಇರುವುದು, ಸ್ಪಂದಿಸದೇ ಇರುವುದು
ಜಗ್ – ಯಥೇಚ್ಛ, ಸಾಕಷ್ಟು
ಜಿನ್ನು – ಹಿಟ್ಟಿನ ಗಿರಣಿ

ತ

ತಾಚ್ಚಾರ – ತಿರಸ್ಕಾರ
ತೀರ್ವಳಿ – ತೀರ್ಮಾನ
ತಪ್ಡೆ – ತಮಟೆ
ತುಪ್ಡ – ಉಣ್ಣೆ
ತಿರ್ಗ – ಪುನಹ

ದ

ದಿಬ್ಬೀರ್ತ – ವಿಜೃಂಭಣೆ
ದಿಮ್ಮನಾಗಿ – ಬಿಗಿಯಾಗಿ
ದೊಣ್ಣೆಕ್ಯಾತ – ಓತಿ (ಪ್ರಾಣಿ)

ನ

ನೆಂಚಿಕೊಳ್ಳು – ನೆನಪು ಮಾಡಿಕೊಳ್ಳುವುದು, ಊಟದ ಸಮಯದಲ್ಲಿ ಉಪ್ಪಿನಕಾಯಿ, ಸಂಡಿಗೆ, ಹಪ್ಪಳ ಮೊದಲಾದ ಪದಾರ್ಥಗಳನ್ನು ತಿನ್ನುವ ಪ್ರಕ್ರಿಯೆ
ನೆಳ್ಳು – ನೆರಳು
ನಸಿಗ್ಗೆ – ಮುಂಜಾನೆ
ನದ್ರು – ಪ್ರಜ್ಞೆ
ನಿಟ್ಟಿಲ್ದಂಗೆ – ಗಾಬರಿಗೊಂಡು ಅತಿ ಆತುರವಾಗಿ, ಪ್ರಜ್ಞೆ ಇದ್ದೂ ಇಲ್ಲದಂತೆ
ನೀರ್ಕಡ್ಗೆ – ಮಲವಿಸರ್ಜನೆಗೆ

ಪ

ಪಂಚಕಲ್ಯಾಣಿ – ಕುದುರೆಗಳಲ್ಲಿ ಒಂದು ಜಾತಿ
ಪಡಸಾಲೆ – ನಡುಮನೆ, ಅತಿಥಿಗಳನ್ನು ಸತ್ಕರಿಸುವ ಸ್ಥಳ
ಪಾಪ – ಮರುಕವನ್ನು ವ್ಯಕ್ತಪಡಿಸುವ, ಚಿಕ್ಕಮಕ್ಕಳನ್ನು ಪ್ರೀತಿಯಿಂದ ಸಂಬೋಧಿಸುವ ಶಬ್ದ
ಪಿಳ್ಳೆ – ಹೆಣ್ಣುಮಗು, ಹುಡುಗಿ, ಮರಿ
ಪೈಸ್ಗೆ – ಬಯಲಾಟದಲ್ಲಿ ಗಂಡುಪಾತ್ರಗಳು ಕುಕ್ಕರುಗಾಲಿನಲ್ಲಿ ಕುಣಿಯುವ ನೃತ್ಯದ ಒಂದು ವಿಧಾನ, ವೃತ್ತಾಕಾರವಾಗಿ ಕುಣಿಯುವುದಕ್ಕೆ ಚಕ್ರಪೈಸಿಗೆ ಎಂತಲೂ ಕರೆಯುವರು.
ಪಾಲ್ಗೆ – ಪಾಲಿಗೆ, ಭಾಗಕ್ಕೆ
ಪಾಲು – ಇಬ್ಬಾಗವಾಗುವುದು

ಪಸ್ಲು – ಬೆಳೆ
ಪೂರಾ – ಪೂರ್ತಿ

ಬ

ಬಟ್ಟೇರು – ದೋಬಿ ಕತ್ತಿಗೆ ಹಾಕುವ ಬಟ್ಟೆಗಂಟು
ಬಿಕ್ಕಂಬಿಡು – ಬಿಗಿದುಕೊಂಡು ಬಿಡು
ಬಾಗ್ಲಪಂಚೆ – ಬಾಗಿಲ ಮೇಲ್ಭಾಗ
ಬಿಟ್ಟೆತ್ತುಗಳು – ಬೇಸಾಯ ಹೂಡಿ ನೊಗದಿಂದ ಬಿಡಿಸಿ ಮೇಯಲಿಕ್ಕೆ ಬಿಟ್ಟ ಎತ್ತುಗಳು
ಬಾದಾಳ – ಗವಾಕ್ಷಿ
ಬುಡ್ಡಿ – ಮಣ್ಣಿನಿಂದ ಮಾಡಿದ ಚಿಕ್ಕ ಕುಂಭ, ಚಿಮಣಿ
ಬೋರ್ಮಲತಾ – ಹೂಂಕರಿಸುತ್ತಾ
ಬಿರೀನ – ಬೇಗ, ಬೇಗ
ಬೀಳು – ಕೃಷಿ ಮಾಡದೆ ಇರುವ ಹೊಲ
ಬಾದ್ಮೆ – ಸುದ್ದಿ
ಬಾಡಿ – ಬನಿಯನ್ (ಜಂಪರ್ ಎಂದೂ ಕರೆಯುವ ವಾಡಿಕೆ ಇದೆ)
ಬಾಳ್ಳಿ – ಮಣ್ಣಿನ ಸಣ್ಣ ಗಿಂಡಿ

ಮ

ಮಂತೇಕೆ – ಮನೆಯ ಹತ್ತಿರಕ್ಕೆ
ಮದ್ಲೆ – ಮೊದಲೇ
ಮೋಡ್ರು – ಅವಿದ್ಯಾವಂತ
ಮುಸ್ಡಿ – ಮೂತಿ
ಮದ್ದು – ಔಷಧಿ
ಮಠ – ಶಾಲೆ


ಯ, ರ

ಯತ್ತಾಮುಟ್ಟದ – ಅಪ್ರಯೋಜಕ
ಯತ್ಲಾಗಿ – ಯಾವಕಡೆಗೆ
ಯಕ್ಷ – ಎಕ್ಸರೇ
ರಜಸ್ಸಾಗು – ಮೈನೆರೆಯುವುದು
ರಾಕ್ಸ – ರಾಕ್ಷಸ
ರೊಪ್ಪ – ಮನೆಯಿಂದ ಹೊರವಲಯದಲ್ಲಿರುವ ಹಾಗೂ ವ್ಯವಸಾಯ ಸಾಮಗ್ರಿಗಳನ್ನು ಮತ್ತು ದನಗಳ ಮೇವನ್ನು ಶೇಖರಿಸಿಡುವ ಸ್ಥಳ ಇದಕ್ಕೆ ಸುತ್ತಲೂ ಬೇಲಿ ಹಾಕಿ ಒಂದು ಕಡೆ ದ್ವಾರ ಬಿಟ್ಟಿರುತ್ತಾರೆ.
ರಗುತ/ರೈತ – ರಕ್ತ

ವ

ವಡ್ಡಾಟ	–	ಒರಟು ನಡವಳಿಕೆ
ವಲ್ಲಿ	–	ಟವೆಲ್ಲು
ವರತ್ತಾ	–	ಒತ್ತಾಯ
ವಾರ್ಗೇರು	–	ಸಮಕಾಲೀನರು
ಶಮ	–	ಶವ
ಶರ್ಮ	–	ಚರ್ಮ
ಸರ್ವತ್ತು	–	ಮಧ್ಯರಾತ್ರಿ
ಸೂಟು	–	ಚೆನ್ನಾಗಿ ಕಾಣಿಸುವುದು, ಸರಿಹೊಂದುವುದು

ಚಿತ್ತಾರದೊಳಗೆ ಬದುಕಿನ ಬಿಂಬ....



ಕತೆಗಾರ ಈರಬಡಪ್ಪ



ಕತೆಗಾರ ಈರಬಡಪ್ಪ ಮತ್ತು ಪತ್ನಿ ಗಂಗಮಾಳಮ್ಮ (ಮೊಮ್ಮಗನೊಂದಿಗೆ)



ಹಳ್ಳಿಯ ಜನರಿಗೆ ಕತೆ ಹೇಳುತ್ತಿರುವ ಈರಬಡಪ್ಪ, ಗೆಳೆಯ, ಕೆಂಗಪ್ಪ ಮೇಸ್ತ್ರು (ಎಡಕ್ಕೆ)



ಈರಬಡಪ್ಪನವರ ಕತೆಗಳ ಸಂಗ್ರಹ 'ಕಲಮರಹಳ್ಳಿಯ ಕತೆಗಳು' ಕೃತಿ ಬಿಡುಗಡೆ ಸಮಾರಂಭದಲ್ಲಿ ಅಂದಿನ ಶಾಸಕ ಶ್ರೀ ತಿಪ್ಪೇಸ್ವಾಮಿಯವರಿಂದ ಈರಬಡಪ್ಪನವರಿಗೆ ಸನ್ಮಾನ (ಎಡಕ್ಕೆ) ಸಂಪಾದಕ ಮಲ್ಲಿಕಾರ್ಜುನ ಕಲಮರಳ್ಳಿ (೧೯೮೬)



ಈರಬಡಪ್ಪನವರ ಕತೆಗಳಿಗೆ ದಿ॥ ಪಿ.ಆರ್. ತಿಪ್ಪೇಸ್ವಾಮಿಯವರಿಂದ ಚಿತ್ರ ಚಿತ್ತಾರ



ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪುರಸ್ಕೃತ
ಈರಬಡಪ್ಪನವರಿಗೆ ಹುಟ್ಟೂರ ಸನ್ಮಾನ
(ಕಲಮರಹಳ್ಳಿಯ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ
ಶ್ರೀ ಡಿ.ಎಂ. ತಿಪ್ಪೇಸ್ವಾಮಿ ಇವರು ಸನ್ಮಾನಿಸುತ್ತಿರುವುದು)

ಈರಬಡಪ್ಪ ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಜನಪದ ಕಥೆಗಾರರಲ್ಲಿ ಒಬ್ಬರು. ಚಿತ್ರದುರ್ಗ ಜಿಲ್ಲೆ ಜನಪದ ಮೌಖಿಕ ಸಾಹಿತ್ಯ ಆಚರಣೆ, ಸಂಪ್ರದಾಯ ಇತ್ಯಾದಿ ಸಾಂಸ್ಕೃತಿಕ ವಿಶೇಷತೆಗೆ ಖನಿಜಭೂಮಿ. ಅಲ್ಲಿ ನಾಡೋಜ ಸಿರಿಯಜ್ಜಿಯಂಥವರು ಪರಂಪರೆಯಿಂದ ಕಾಯ್ದುಕೊಂಡು ಬಂದ ಬೆಳಸು ಸಾಕಷ್ಟು ಹುಲುಸಾಗಿದೆ. ಆ ಸಾಲಿನಲ್ಲಿ ಈ ಈರಬಡಪ್ಪನ ಕಥನ ಸಂಪತ್ತೂ ಸೇರುತ್ತದೆ. ಆದರೆ, ಈ ಕಥನ ಸಂಪತ್ತನ್ನು ಸಂಗ್ರಹಿಸಿ ದಾಖಲಿಸುವಲ್ಲಿ, ಅಧ್ಯಯನಕ್ಕೆ ಒಳಗು ಮಾಡಿ ಸಾಂಸ್ಕೃತಿಕ ಶೋಧ ನಡೆಸುವಲ್ಲಿ ಜಾನಪದ ವಿದ್ವಾಂಸರ ಪ್ರಯತ್ನ ಇನ್ನೂ ಅಲ್ಪಪ್ರಮಾಣದಲ್ಲಾಗಿದೆ. ಆಗಬೇಕಾದ್ದು ಅಪಾರವಿದೆ. ಸಂಗ್ರಹಕಾರ್ಯದ ಜೊತೆಗೆ ಅದನ್ನು ಕಾಪಿಟ್ಟುಕೊಂಡು ಬಂದ ನೆನಪಿನ ಚೇತನಗಳನ್ನೂ ಅವರ ಜೀವನ ವಿವರಗಳನ್ನೂ ದಾಖಲಿಸುವುದು ಅಗತ್ಯವಾಗಿ ಆಗಬೇಕಾದ ಕೆಲಸ. ಏಕೆಂದರೆ ಇಂಥವರ ಜೀವನ ವಿವರಗಳೆಂದರೆ ಅದು ವ್ಯಕ್ತಿಯೊಬ್ಬನ ಬದುಕಿನ ವಿವರ ಮಾತ್ರವಾಗಿರುವುದಲ್ಲ ; ಅದು ಪರಂಪರೆಯ ಪರಾದರ್ಶನ. ಇಂಥವುಗಳ ದಾಖಲಾತಿ ಜಾನಪದ ಜ್ಞಾನ ಸಾಹಿತ್ಯವನ್ನು ಅಧ್ಯಯನ ಮಾಡುವುದಕ್ಕೆ ಬೇಕಾದ ಹಲವು ಒಳನೋಟಗಳನ್ನು ನೀಡುತ್ತದೆ.

ಪ್ರೊ. ಎಸ್. ಜಿ. ಸಿದ್ಧರಾಮಯ್ಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ISBN No. : 81-7713-212-1

ಬೆಲೆ ರೂ. ೨೪/-